8. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ

ಬೇಡಿಕೆ ಸಂ: 21, ಜಲಸಂಪನ್ಮೂಲ (ಮುಂದುವರಿದ ಚರ್ಚೆ)

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವ್):– ಮಾನ್ಯ ಅಧ್ಯಕ್ಷರೆ, ಜಲಸಂಪನ್ಮೂಲ ಬೇಡಿಕೆ ಮೇಲೆ ಮುಂದುವರೆದು ಮಾತನಾಡುತ್ತಾ, ಇವತ್ತು ತುಂಗಭದ್ರಾ ಬಹಳ ಹಳೆ ನೀರಾವರಿ, ಸುಮಾರು 50 ವರ್ಷಕ್ಕಿಂತ ಹೆಚ್ಚು ಆ ಭಾಗದ ರೈತರಿಗೆ ನೀರು ಕೊಡುತ್ತಿರುವ ಒಂದು ಪ್ರಮುಖವಾದ ಯೋಜನೆ. ಆ ಯೋಜನೆ ವಿವರಕ್ಕೆ ನಾನು ಹೋಗುವುದಿಲ್ಲ, ಅದರಲ್ಲಿ ಎರಡೇ ಎರಡು ವಿಚಾರಗಳಿವೆ. ಒಂದು ತುಂಗಭದ್ರಾ ಡ್ಯಾಂ ನಲ್ಲಿ ಹೂಳೇನು ತುಂಬಿದೆ? ಅದರಲ್ಲಿ 28 ಟಿ.ಎಂ.ಸಿ. ನೀರಿನಷ್ಟು ಹೂಳು ತುಂಬಿದೆ ಈಗ ಅದು ಹೆಚ್ಚಿಗೆ ಆಗಿರಬಹುದು. ಒಟ್ಟು 32 ಟಿಎಂಸಿ ಎಂದು ಈಗ ಅಂದಾಜು ಮಾಡಲಾಗಿದೆ. Hydraulic study 2008 ರ ನಂತರ ಆಗಿಲ್ಲ, ಒಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಸುಮಾರು 22 ಟಿಎಂಸಿ ಅಷ್ಟು ನಮ್ಮ ಕರ್ನಾಟಕದ ಪಾಲಿದೆ. ಈಗ ಅದನ್ನು ಶೇಖರಣೆ, storage ಮಾಡುವುದಕ್ಕೆ ಆಗದಿರುವ ಒಂದು ಪರಿಸ್ಥಿತಿ ಇದೆ. ಅದಕ್ಕೆ ಯಾವರೀತಿ ಹೂಳನ್ನು ತೆಗೆಯಬೇಕು, ಆ ನೀರನ್ನು ಯಾವರೀತಿ ಬಳಕೆ ಮಾಡಬೇಕೆನ್ನುವ ಹಲವಾರು ಬೇರೆ ಬೇರೆ ವಿಭಿನ್ನವಾಗಿರುವ ಮಾರ್ಗವನ್ನು ಕಂಡುಕೊಳ್ಳುವಂಥ ಪ್ರಯತ್ನ ಸುಮಾರು 20–22 ವರ್ಷದಿಂದ ನಡೆದಿದೆ. ಮಾನ್ಯ ಹೆಚ್.ಕೆ. ಪಾಟೀಲರು ನೀರಾವರಿ ಸಚಿವರಾಗಿದ್ದಾಗಿನಿಂದಲೂ ಆ ಹೂಳನ್ನು ಯಾವರೀತಿ ತೆಗೆಯಬೇಕು? ಅದಕ್ಕೆ ಎಷ್ಟು ಅಂದಾಜು ಮಾಡಿದೆ ಎನ್ನುವ ವಿಚಾರವನ್ನೂ ಕೂಡ ಅವರು ಮಾಡಿದ್ದರು. ಆ ಸಂದರ್ಭದಲ್ಲಿ ಒಂದು ಟಿಎಂಸಿ ನೀರಿನ ಹೂಳನ್ನು ತೆಗೆಯುವುದಕ್ಕೆ ಮತ್ತು ಅದನ್ನು ಬೇರೆ ಕಡೆ ಸ್ಥಳಾಂತರ ಮಾಡುವುದಕ್ಕೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಖರ್ಚಾಗುತ್ತದೆನ್ನುವ ಮಾತುಗಳಿತ್ತು, ಆದರೆ ಅದನ್ನು ಪುನರ್‌ಪರಿಶೀಲನೆ

ಮಾಡಿದಾಗ ಅಷ್ಟು ಹಣ ಬೇಕಾಗಿಲ್ಲವೆನ್ನುವ ವಿಚಾರವು ಕೂಡ ಬಂತು, ಆಗ ನಡೆದಿದ್ದನ್ನು ಹೇಳುತ್ತೇನೆ. ಆದರೆ, ಆ ಹೂಳು ಬಹಳ ದೊಡ್ಡ ಪ್ರಮಾಣದಲ್ಲಿ ಇದೆ. ಅಷ್ಟು ಹೂಳನ್ನು ಈಗ ತೆಗೆದು ಮತ್ತೊಂದು ಪ್ರದೇಶದಲ್ಲಿ ಹಾಕಬೇಕಾದರೆ, ಇದು ಬಹಳ ದೊಡ್ಡ ಸವಾಲು, it is next to impossibility ಎಂದು ತಜ್ಞರು ಹೇಳುತ್ತಾರೆ. ನಾವು ಏನು ಈ ಮೈನ್ಸ್ ತೆಗೆದಿದ್ದರು, ಆ ಪ್ರದೇಶವನ್ನು ಈ ಹೂಳಿನಿಂದ replace ಮಾಡಿ, ಅದನ್ನು Forestation ಮಾಡುವುದಕ್ಕೆ ಅನುಕೂಲವಾಗುತ್ತದೆನ್ನುವ ಒಂದು ಪ್ರಯತ್ನವನ್ನೂ ಕೂಡ ನಾವು ಮಾಡಿದ್ದೆವು. ಆದರೆ ಯಾವುದೇ mine 100% complete explore ಆಗಿಲ್ಲ. ಕೆಲವು 30% ಆಗಿದ್ದಾವೆ, 40% ಆಗಿದ್ದಾವೆ, 60% ಆಗಿದ್ದಾವೆ, ಹೀಗಾಗಿ ಆ ಸಾಧ್ಯತೆಯೂ ಕೂಡ ಇಲ್ಲ. ಹೆಚ್.ಕೆ. ಪಾಟೀಲರಿಗೆ ಗೊತ್ತಿದೆ, ಈ ತುಂಗಭದ್ರಾ ಹೂಳಿನಲ್ಲಿ clay content ಜಾಸ್ತಿ ಇದೆ. ಹಿರೇಹಳ್ಳ ಆ ಭಾಗದಿಂದ ಹೆಚ್ಚಿನ ಪ್ರಮಾಣದಲ್ಲಿ clay content ಹದವಾದ ಮಣ್ಣು ಅದರಲ್ಲಿರುವುದರಿಂದ ಅದು ಸುಮಾರು ವರ್ಷಗಳಿಂದ sedimentation ಆಗಿ ಬಹಳ ಗಟ್ಟಿಯಾಗಿದೆ. ಅದಕ್ಕೆ hydraulic cutter ಅದನ್ನೆಲ್ಲಾ ಮಾಡುವ ತಂತ್ರಜ್ಞಾನವನ್ನು ಬಳಸುವ ಪ್ರಯತ್ನವನ್ನು ನಾವು ಇದ್ದಂಥ ಸಂದರ್ಭದಲ್ಲಿ ಮಾಡಿದೆವು, ಆದರೆ ಯಾವ ಕಂಪನಿಗು ಮುಂದೆ ಬರಬೇಕಾಗಿತ್ತೋ, ಆ ಕಂಪನಿಗಳು ಮುಂದಕ್ಕೆ ಬರುವುದಕ್ಕೆ ಕೊನೇ ಗಳಿಗೆಯಲ್ಲಿ ಹಿಂದೇಟು ಹಾಕಿದವು, ಹೀಗಾಗಿ ಅದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ, ಈಗ ತಾವು ಬಂದ ಮೇಲೂ ಕೂಡ ಆ ಪ್ರಯತ್ನ ಮಾಡಿ global tender ಕೂಡ ಮಾಡಿದ್ದೀರಿ. ಅದಕ್ಕೆ alternative ಆಗಿ 4 ಕಡೆ balancing reservoir ಮಾಡಬೇಕೆಂದು, ಅದನ್ನೂ ಕೂಡ ಪರಿಗಣನೆಗೆ ತೆಗೆದುಕೊಂಡು ಮಾಡಿದ್ದೆವು. ಆದರೆ ಅದರಲ್ಲಿ, 2 balancing reservoir ಏನಿದ್ದಾವೆ, ನೀರಾವರಿ ಪ್ರದೇಶ ಮುಳುಗಡೆ ಮಾಡುತ್ತವೆ ಎಂದು ವರದಿ ಬಂದ ಮೇಲೆ ಅದನ್ನೂ ಮುಂದುವರೆಸುವುದಕ್ಕೆ ಸಾಧ್ಯವಾಗಲಿಲ್ಲ. ಅದಾದ ಮೇಲೆ ನಾವು Tunga Bhadra Left Bank high flood canal ಮಾಡಬೇಕೆಂದು ಒಂದು ಸರ್ವೇ ಮಾಡಿಸಿ ನಮ್ಮ 22 ಟಿಎಂಸಿ ನೀರನ್ನು ಬಳಕೆ ಮಾಡಬೇಕು, ನವಿಲೆ ಮತ್ತು ಇನ್ನೊಂದು ಊರಿನಲ್ಲಿ ಗುರೇಬಾಳ

ಮಾಡಬಹುದೆಂದು ಈಗಾಗಲೇ ಸರ್ವೇ ಮಾಡಿದ ಒಂದು ವರದಿ ಇದೆ, ಅದನ್ನು ತಾವು ಮಾಡುವುದು ಸೂಕ್ತವೆನ್ನುವುದು ನನ್ನ ಭಾವನೆಯಾಗಿದೆ. ಅದಾದರೆ ನಮ್ಮ ಪಾಲಿನ ನೀರನ್ನು ತಡೆಹಿಡಿದುಕೊಳ್ಳಬಹುದು, ಬೇಕಾದ ಸಂದರ್ಭದಲ್ಲಿ ಅದನ್ನು storage ಮಾಡುವುದಕ್ಕೆ ಸಾಧ್ಯವಿದೆ, ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ಹೂಳು ತೆಗೆಯುವ ವಿಷಯ ಮಾನ್ಯ ಬಸವರಾಜ್ ಬೊಮ್ಮಾಯಿಯವರು ಹೇಳಿದ ಹಾಗೆ ಸಿಲ್ಟ್ ತೆಗೆದು 30 ಅಡಿ ಆಗಿದೆ. ಏಕೆಂದರೆ ಡ್ಯಾಂ ಕಟ್ಟುವಾಗಲೇ ಪ್ರತಿ ವರ್ಷ 0.4 ಅಥವಾ 0.48 ಅರ್ಧ TMC ಅಷ್ಟು ಹೂಳು ಬರುತ್ತದೆ ಎಂದು ಅಂದಾಜು ಮಾಡಲಾಗಿತ್ತು. ಈಗ 64 ವರ್ಷಗಳು ಗತಿಸಿವೆ. 32 TMC ಅಷ್ಟು ಹೂಳು ತುಂಬಿದೆ. ಆ ಹೂಳನ್ನು ತೆಗೆಯುವುದು ಕಷ್ಟ. ತೆಗೆದು ನಾವು store ಮಾಡಬೇಕಾದರೆ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ heap create ಮಾಡಿದರೂ ಕೂಡ 10 feet ಅಷ್ಟು ಹೈಟ್ ಮಾಡಿದಾಗ ಸುಮಾರು 66,000 ಎಕರೆ ಅಷ್ಟು ಜಮೀನು ಬೇಕಾಗುತ್ತದೆ. ನಾವು ಈಗ ತಮ್ಮ ಗಮನಕ್ಕೆ ತರುವುದು global expression ಕರೆದಿರುವುದರಲ್ಲಿ mandate ಕೊಟ್ಟಿದ್ದೇವೆ. 32 TMC ನೀರನ್ನು ತೆಗೆದುಕೊಳ್ಳುತ್ತಿದ್ದೇವೆ, ಅದನ್ನು ನಾವು ಯಾವ ರೀತಿ restore ಮಾಡಲಿಕ್ಕೆ ಸಾಧ್ಯವಿದೆ, balancing reservoir ಆಗಿರಬಹುದು, desilting ಆಗಿರಬಹುದು, combination ಆಗಿರಬಹುದು, ಅಥವಾ ಇನ್ನೊಂದು ಹೊಸ ತಂತ್ರಜ್ಞಾನ ಅಥವಾ technology ಆಗಿರಬಹುದು, ಎಲ್ಲವನ್ನೂ ಕೂಡಿಸಿ ಇವತ್ತಿನ ದಿವಸ ಆ ಒಂದು global expression ಕರೆದಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, global expression ಕರೆದು ಎಷ್ಟು ದಿವಸವಾಯಿತು? ಅದರ ಹಣೆಬರಹ ಏನಾಗಿದೆ ಎಂದು ನಮಗೆ ಇನ್ನೂ ಗೊತ್ತಾಗಿಲ್ಲ. ಎಷ್ಟು ಜನ ಮುಂದೆ ಬಂದಿದ್ದಾರೆ? ಯಾವ ಹೊಸ technology ಯನ್ನು ಅವರು ಹೇಳಿದ್ದಾರೆ, ಯಾವ

combination ಹೇಳಿದ್ದಾರೆ? ಅದರ ಬಗ್ಗೆ ಸರ್ಕಾರದ ನಿಲುವೇನು? ಇದರ ಬಗ್ಗೆ ಯಾವುದೂ ಕೂಡ ಸಾರ್ವಜನಿಕವಾಗಿ ಮಾಹಿತಿ ಇಲ್ಲ. ಅದರ ಬಗ್ಗೆ ಸರ್ಕಾರ ದಯವಿಟ್ಟು ಹೇಳಬೇಕಾಗುತ್ತದೆ. ಎರಡನೆಯದಾಗಿ Tunga Bhadra Right Bank Canal ದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳೂ ಬಂದಿದ್ದರು. ಅದನ್ನು modernize ಮಾಡಬೇಕು ಎನ್ನತಕ್ಕಂತಹ ಮಾತನ್ನೂ ಹೇಳಿದರು. ಆಂಧ್ರಪ್ರದೇಶದವರ ಬಹಳ ವರ್ಷದ ಬೇಡಿಕೆ ಇದೆ. ಅದನ್ನು Tribunal ನಲ್ಲಿ ಕೂಡ ಅವರು ಬೇಡಿಕೆ ಇಟ್ಟಿದ್ದರು. ಈ TRBC ಯಲ್ಲಿ ನಾವು ಬಹಳ ಹುಷಾರಾಗಿ ನಡೆದುಕೊಳ್ಳಬೇಕಾಗಿದೆ. ಅವರು ಆ ನಾಲೆಗಳ ಹರಿವನ್ನು ಜಾಸ್ತಿ ಮಾಡಬೇಕು, ಅಗಲ ಮಾಡಬೇಕೆಂದು. ಆಂಧ್ರಪ್ರದೇಶದವರ ಬೇಡಿಕೆ ಇತ್ತು. ನಾವೆಲ್ಲಾದರೂ modernization ನೆಪದಲ್ಲಿ ಅದನ್ನು ಹೆಚ್ಚಿಗೆ ಮಾಡಿದರೆ ನೇರವಾಗಿ ಅದು ಆಂಧ್ರಕ್ಕೆ ಹೋಗುತ್ತದೆ. ಈಗಾಗಲೇ ಅವರು ತಮ್ಮ ಕೆನಾಲ್‌ಗಳನ್ನು ದೊಡ್ಡದು ಮಾಡಿಕೊಂಡಿದ್ದಾರೆ. ಬೇಸ್ ಎಲ್ಲವನ್ನೂ ದೊಡ್ಡದು ಮಾಡಿಕೊಂಡಿದ್ದಾರೆ. ನಾವೇನಾದರೂ ಹೆಚ್ಚಿಗೆ ಮಾಡಿಕೊಟ್ಟರೆ, ಖಂಡಿತವಾಗಿ ನೀರು ನಮ್ಮ ರಾಜ್ಯದಲ್ಲಿ ಉಳಿಯುವುದಿಲ್ಲ ಅದು ಆಂಧ್ರಕ್ಕೆ ಹೋಗುತ್ತದೆ. ಅದು ಆಗದಂತೆ ನೋಡಿಕೊಳ್ಳುವ ಎಚ್ಚರಿಕೆಯನ್ನು ನಾನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನಾನು ಮಾಧ್ಯಮಗಳಲ್ಲಿ ಓದಿದೆ, ಎರಡೂ ರಾಜ್ಯಗಳು ಇದನ್ನು ಮಾಡುವುದಕ್ಕೆ ಒಪ್ಪಿಕೊಂಡಿವೆ ಎನ್ನುವಂತಹ ಮಾತನ್ನು ನೋಡಿದೆ. ಮಾಡುವಾಗ ಇದರ ಬಗ್ಗೆ ತಾವು ಕಾಳಜಿ ವಹಿಸುವುದು ಬಹಳ ಅವಶ್ಯವಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಳಗಾಂ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿನ ವಿಚಾರ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, 22 ರಿಂದ 32 TMC ನೀರು ಏನು ಹೋಗುತ್ತಿದೆ, ಇದನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟು ಪರ್ಸೆಂಟ್ ನೀರನ್ನು ಆ ಡ್ಯಾಂನಿಂದ ನಾವು ಉಪಯೋಗಿಸಿಕೊಳ್ಳುತ್ತಿದ್ದೇವೆ, ಎಷ್ಟು ಪರ್ಸೆಂಟ್ ನೀರು ಆಂಧ್ರಕ್ಕೆ ಹೋಗುತ್ತಿದೆ?

ಶ್ರೀ ಬಸವರಾಜ ಬೊಮ್ಮಾಯಿ:– ನಮ್ಮ ಕರ್ನಾಟಕದ ಶೇರು 139 TMC ಅವರದ್ದು 40% ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಾವು ಹೂಳೆತ್ತದೆ ಬೇರೆ ಮಾರ್ಗದಲ್ಲಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮಗೇನಾದರೂ ಸರ್ವ ಸ್ವತಂತ್ರ್ಯ ಇದೆಯಾ? ಯಾವ Tribunal ಗಲಾಟೆ ಇಲ್ಲವಾ?

ಶ್ರೀ ಬಸವರಾಜ ಬೊಮ್ಮಾಯಿ:– ಇಲ್ಲ. ಇಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮತ್ತೆ ಬಂಡವಾಳ ಹೂಡಿ. ಇಂಥದ್ದನ್ನು ಮಾಡಿಕೊಳ್ಳದೆ ಇದ್ದರೆ ಇನ್ನೇನಾಗುತ್ತದೆ? ಇಂಥದ್ದಕ್ಕೆ ಬಂಡವಾಳ ಹಾಕಬೇಕು. ಬಂಡವಾಳ ಹಾಕದೇ ಇದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಸುಮ್ಮನೆ ಪ್ರತಿ ವರ್ಷ ಭಾಷಣ ಮಾಡಿಕೊಂಡು ಹೋಗುತ್ತಿರುವುದೇ.

ಡಾ॥ ಎಸ್. ಶಿವರಾಜ್ ಪಾಟೀಲ್:– ನವಿಲೆ ಮತ್ತು ಗುರೇಬಾಳದಲ್ಲಿ ಎರಡೂ ಕಡೆ ರಿಪೋರ್ಟ್ ಬಂದು ಮಾಡುವುದು ಲೇಟ್ ಆಗುತ್ತದೆ. ನಮಗೆ ಈಗಾಗಲೇ ಒಂದು ಬ್ಯಾಲೆನ್ಸಿಂಗ್ ಇದೆ. ತುಂಗಭದ್ರಾದಲ್ಲಿ ಅತೀ tail enders ಎಂದರೆ ರಾಯಚೂರು ತಾಲ್ಲೂಕಿನವರು. ಈಗಾಗಲೇ ಒಂದು ನಮಗೆ balancing reservoir 0.75 TMC ನಮಗೆ ಇದೆ. ನಮಗೆ ಸಧ್ಯದ ಪರಿಸ್ಥಿತಿಯಲ್ಲಿ 600 ರಿಂದ 800 ಎಕರೆಗೆ ಇನ್ನೊಂದು ಕೆರೆ ಮಾಡಿದ್ದೇವೆ. ನಮ್ಮ ರಾಯಚೂರು ತಾಲ್ಲೂಕು ಟೋಟಲ್ ನೀರಾವರಿಯಿಂದ ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ಏನಾದರೂ ವಂಚಿತವಾದರೆ ರಾಯಚೂರು ತಾಲ್ಲೂಕಿನವರು. ಅದೂ actually ನಾವು 1800 ಕ್ಯೂಸೆಕ್ಸ್ ನೀರಿಗೆ ನಾವು ಎಲಿಜಿಬಲ್ ಇದ್ದೇವೆ. ಆದರೂ ಇವತ್ತು ನಮಗೆ ಮಳೆಗಾಲದಲ್ಲಿ ಒಂದು ಹನಿ ನೀರು ಬರುವುದಿಲ್ಲ. ವೆಂಕಟಾಪುರ ಕೆರೆಗೆ ಕಳೆದ ಅನೇಕ ವರ್ಷಗಳಿಂದ ಸಬ್ಮಿಟ್ ಮಾಡಿದ್ದೇವೆ. ಒಂದು ಕೆರೆ ವೆಂಕಟಾಪುರ ಗ್ರಾಮ ಎಂದು ಇದೆ, ಆ ಸೀಮಾದಲ್ಲಿ ಇನ್ನೊಂದು TMC ಅಷ್ಟು ಕೆರೆ ಮಾಡಿದರೆ ನಮ್ಮ ರಾಯಚೂರು ತಾಲ್ಲೂಕಿಗೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ ಬೊಮ್ಮಾಯಿಯವರು ಅನುಭವದ ಮೇಲೆ ಹೇಳುತ್ತಿದ್ದಾರೆ. ಅವರು ಮಂತ್ರಿಯಾಗಿದ್ದವರು, ಮಾನ್ಯ ಹೆಚ್.ಕೆ. ಪಾಟೀಲರು ಇದ್ದಾರೆ, ಅನುಭವ ಬಹಳ ಮುಖ್ಯ. 38 TMC ಹೂಳು ತುಂಬಿಕೊಂಡಿದೆ ಎಂದು ತಾವು ಹೇಳಿದಿರಿ, ನಾವು ಅಪ್ಪರ್ ಏರಿಯಾದಲ್ಲಿರುವವರು ದಾವಣಗೆರೆ, ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ , ನಮಗೆ ಕುಡಿಯುವುದಕ್ಕೆ ಮತ್ತು ಟ್ಯಾಂಕ್ ತುಂಬಿಸಿಕೊಳ್ಳುವುದಕ್ಕೆ ಬ್ರಿಡ್ಜ್ ಕಮ್ ಬ್ಯಾರೇಜ್ ಕಟ್ಟಿಕೊಳ್ಳುವುದಕ್ಕೆ ಏನಾದರೂ ಒಂದು ಪ್ರಾವಿಷನ್ ಮಾಡಬೇಕು. ಏಕೆಂದರೆ ನೀರು ವೇಸ್ಟ್ ಆಗಿ ಸಮುದ್ರಕ್ಕೆ ಹೋಗುತ್ತಿದೆ. ಅದನ್ನು ನಾವು ಇಲ್ಲಿಯೇ ಹಿಡಿದುಕೊಳ್ಳುವ ಹಾಗೆ ಏನಾದರೂ ಒಂದು ಪ್ರಾವಿಷನ್ ಇದೆಯೇ drinking water ಮತ್ತು ಟ್ಯಾಂಕ್ ತುಂಬಿಸಿಕೊಳ್ಳುವುದಕ್ಕೆ ಬಯಲು ಸೀಮೆ ಮತ್ತು ಬರಗಾಲ ಪ್ರದೇಶಗಳಿಗೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಲವಾರು ಯೋಜನೆಗಳು ಅಲ್ಲಿ ಆಗಿವೆ. ಮುಂದೂ ಕೂಡ ಇದು inter state river ಇರುವುದರಿಂದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅಲ್ಲ ಮಾಡಬಹುದು. ತುಂಗಭದ್ರಾ ಬೋರ್ಡ್‌ನಲ್ಲಿ ತಾವು ಅದನ್ನು ಒಪ್ಪಿಗೆ ತೆಗೆದುಕೊಂಡು ಮಾಡಬೇಕಾಗುತ್ತದೆ. ಸಿಂಗಟಾಲೂರು ಮಾಡಿದ್ದೇವೆ, ಅಪ್ಪರ್ ರೀಚ್‌ನಲ್ಲಿರತಕ್ಕಂತಹ balancing reservoir, ಆ ಮೇಲೆ ಭದ್ರಾ ಮಾಡ್ರನೈಸೇಷನ್ ಮಾಡಿದ್ದೇವೆ. ಸೊಂದಿ, ವಿಜಯನಗರ ಅವುಗಳನ್ನೂ ತೆಗೆದುಕೊಳ್ಳುತ್ತಿದ್ದೇವೆ. ಅಲ್ಲಿ ಹೆಚ್ಚಿನ ನೀರಿನ ಬಳಕೆ ಮಾಡುವುದಕ್ಕೆ ಸಾಧ್ಯತೆ ಇದೆ. ಆದರೆ ಕುಡಿಯುವ ನೀರಿನ ಯೋಜನೆಗೆ ಪ್ರಿಯಾರಿಟಿ ಇದೆ, ಅದನ್ನು ತಾವು ಮಾಡಿಕೊಳ್ಳಬಹುದು. ಬೆಳಗಾಂ ಅಧಿವೇಶನ ನಡೆಯುವಂತಹ ಕೊನೆಯ ದಿನದಂದು ಒಂದು ಸುದ್ದಿ ಬಂದಿತು. ನಮ್ಮ ಪ್ರಮುಖ ಯೋಜನೆಗಳಾದ ಅಪ್ಪರ್ ಭದ್ರಾ, ಅಪ್ಪರ್ ತುಂಗಾ ಮತ್ತು ಸನ್ನತ್ತಿ ಮತ್ತು ಶಿಗ್ಗಾಂವ್ ಲಿಫ್ಟ್‌ನಲ್ಲಿ ಏನು Environment Ministry ಅನುಮತಿ ಕೊಟ್ಟಿದ್ದರು ಅದಕ್ಕೆ ಗ್ರೀನ್ ಟ್ರಿಬ್ಯುನಲ್ ಏನು ಚೆನ್ನೈನಲ್ಲಿದೆ ಅದು ರದ್ದು ಮಾಡಿದೆ, ಎಂದು ಬಂದಿತು. ಅದನ್ನು ವಿವರವಾಗಿ ನೋಡುವಂತಹ ಪ್ರಯತ್ನವನ್ನೂ

ನಾನು ಮಾಡಿದೆ. 2012 ರಲ್ಲಿ MoEF Government of India ದವರು ಒಂದು Memorandum of Understanding ಮಾಡಿಕೊಂಡಿದ್ದರು. ಅದು 1986ರ Environmental ಕಾಯಿದೆ ಏನಿದೆ, ಆ spirit ನ ವಿರೋಧವಾಗಿದೆ ಎನ್ನುವಂತಹ ಒಂದು ನಿಲುವನ್ನು ತಾಳಿ ಆ ಟ್ರಿಬ್ಯುನಲ್ MoEF ಆದೇಶವನ್ನು ರದ್ದುಪಡಿಸಿತು. ಈಗ ಅದರ ಅಡಿಯಲ್ಲಿ ಯಾವ್ಯಾವುದು sanction ಆಗಿತ್ತು? ಕರ್ನಾಟಕದಲ್ಲಿ ನಾಲ್ಕು ಆಗಿವೆ, ಮಹಾರಾಷ್ಟ್ರದಲ್ಲಿ ಆರು ಆಗಿವೆ, ಇನ್ನು ಬೇರೆ ಬೇರೆ ಆಂಧ್ರ ಮತ್ತು ತಮಿಳುನಾಡುಗಳಲ್ಲಿಯೂ ಕೂಡ ಕೆಲವು ಯೋಜನೆಗಳಿಗೆ ಪರಿಣಾಮವಾಗಿದೆ. ಇದರ ಪರಿಣಾಮ ನೇರವಾಗಿ ನಮಗೆ ಏನಾಗುತ್ತದೆ? ನಮ್ಮ ಯೋಜನೆಗಳಿಗೆ ಪರಿಣಾಮವಾಗಿದೆ. ಇದರ ಪರಿಣಾಮ ನೇರವಾಗಿ ನಮಗೆ ಏನಾಗುತ್ತದೆ? ನಮ್ಮ ಯೋಜನೆಗಳನ್ನು ಮುಂದುವರೆಸುವುದಕ್ಕೆ, ನಮ್ಮ ಯೋಜನೆಗಳನ್ನು ನಿರ್ವಹಣೆ ಮಾಡುವುದಕ್ಕೆ ಏನಾಗುತ್ತದೆ? ಸರ್ಕಾರ ಇದರ ಬಗ್ಗೆ ಮುಂದಿನ ಕ್ರಮ ಏನು ತೆಗೆದುಕೊಳ್ಳುತ್ತದೆ? ಕಾನೂನಾತ್ಮಕ ಕ್ರಮ ಇರಬಹುದು, ಅಥವಾ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು, Green Tribunal ನಲ್ಲಿ ಕೇಂದ್ರ ಸರ್ಕಾರದ ಪಾತ್ರ ಬಹಳ ಮುಖ್ಯ ಇದೆ. MoEF Department ಬಹಳ pro active ಆಗಿ ಇದನ್ನು ತೆಗೆದುಕೊಳ್ಳಬೇಕಾಗಿದೆ. ತಾವು ಅದಕ್ಕೆ ಮನವರಿಕೆ ಮಾಡಿ ಕೊಡುವಂತಹ ಪ್ರಯತ್ನ ಏನು ಮಾಡುತ್ತೀರಿ? ಈ ನಾಲ್ಕು ಯೋಜನೆಗಳು ಬಹಳ ಪ್ರಮುಖವಾಗಿರುವಂತಹ ಬರ ಪ್ರದೇಶದಲ್ಲಿರುವಂತಹ ಅಲ್ಲಿ ಆ ಭಾಗದ ಜನರಿಗೆ ಉಪಯೋಗವಾಗುವಂತಹ ಯೋಜನೆಗಳಿವೆ ಮತ್ತು ಪ್ರತಿಷ್ಠಿತ ಯೋಜನೆಗಳೂ ಕೂಡ ಇವೆ. ಆದ್ದರಿಂದ ಉದಾಹರಣೆಗೆ ಈಗ micro irrigation ಮಾಡಿದ್ದರಲ್ಲೂ ಕೂಡ environmental issues ಎಲ್ಲಿ ಬರುತ್ತವೆ? infact ಅದು environment friendly ಇದೆ. ಆದಾಗ್ಯೂ ಕೂಡ Green Tribunal ಕೊಟ್ಟಿರುವುದು ಬಹಳ ದೊಡ್ಡ ತಪ್ಪು ಇದೆ. ಆದ್ದರಿಂದ ತಾವು ಇದನ್ನು ಬಹಳ ಗಂಭೀರವಾಗಿ ತಗದುಕೂಂಡು Supreme Court ಗೆ challenge ಮಾಡುತ್ತೀರೋ ಅಥವಾ ಟ್ರಿಬ್ಯುನಲ್‌ನಲ್ಲಿ ಮರು ಅಪೀಲ್ ಮಾಡುತ್ತೀರೋ? Government of India ಕ್ಕೆ ಇದರ initiative

ತೆಗೆದುಕೊಳ್ಳುವುದಕ್ಕೆ ಹೇಳುತ್ತೀರೋ? ಯಾವ ಮಾರ್ಗವನ್ನು ತಾವು ಕಂಡುಕೊಳ್ಳುತ್ತೀರ ಎನ್ನುವುದನ್ನು ಸದನಕ್ಕೆ ಬಹಳ ಸ್ಪಷ್ಟವಾಗಿ ತಿಳಿಸಬೇಕು. What is the future action you are going to take regarding this, ಅದರ ಪರಿಣಾಮ ಏನಾಗಿದೆ, ಮತ್ತು ಮುಂದಿನ ಕ್ರಮ ಏನು ತೆಗೆದುಕೊಳ್ಳುತ್ತೀರಿ, ಇವೆರೆಡೂ ನಿಲುವು ಬಹಳ ಸ್ಪಷ್ಟವಾಗಿ ತಾವು ಸದನಕ್ಕೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಉಪಾಧ್ಯಕ್ಷರು:- ಒಂದು ಮಾಹಿತಿ ಇದೆ. ಮಾನ್ಯ ವೈಜನಾಥ ಪಾಟೀಲ್‌ರವರನ್ನು ರಿಲೀಸ್ ಮಾಡಿದ್ದಾರೆ. ಮಾನ್ಯ ಬಸವರಾಜ್‌ರವರೆ, ಎತ್ತಿನ ಹೊಳೆ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಬಸವರಜ ಬೊಮ್ಮಾಯಿ:- ಬರುತ್ತೇನೆ ಸಾರ್. ನನಗೆ ಸ್ವಲ್ಪ ಸಮಯ ಕೊಡಿ. ನಾನು ಮೇಲಿಂದ ಬರುತ್ತೇನೆ. ಖಂಡಿತ ಮಾತನಾಡುತ್ತೇನೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- Environment and forest Department clearance ಇಲ್ಲದೆಯೇ ಅನೇಕ ಯೋಜನೆಗಳನ್ನು ತೆಗೆದುಕೊಳ್ಳುತ್ತಾರೆ. Forest clearance ಇದ್ದಂತಹ ಯೋಜನೆಗಳನ್ನು ಏಕೆ ತೆಗೆದುಕೊಳ್ಳುವುದಿಲ್ಲ? Environment and Forest clearance ಇಲ್ಲದೇ ಈ ನಾಲ್ಕು ಯೋಜನೆಗಳು ಅಷ್ಟೇ ಅಲ್ಲ, ಅನೇಕ ಯೋಜನೆಗಳನ್ನು ಈ ಸರ್ಕಾರ ಪ್ರಾರಂಭ ಮಾಡಿದೆ. ಆದರೆ Environmental Forest Department clearance already ಇರತಕ್ಕಂತಹ ಮೇಜರ್ irrigation project ಗಳನ್ನು neglect ಮಾಡುತ್ತಾರೆ. ಇದಕ್ಕೆ ಏನು ಕಾರಣ?

ಶ್ರೀ ಬಸವರಾಜ ಬೊಮ್ಮಾಯಿ:- ಒಂದು entire ಯೋಜನೆಯಲ್ಲಿ forest ಒಂದು ಸಣ್ಣ ಭಾಗ ಬಂದಿರುತ್ತದೆ. ಈಗ ಒಂದು ಯೋಜನೆಯಲ್ಲಿ ಕೇವಲ ಹನ್ನೆರಡು ಎಕರೆ ಮಾತ್ರವಿದೆ. ಸುಮಾರು ಒಂದೂವರೆ ಲಕ್ಷ ಎಕರೆ ನೀರಾವರಿ ಪ್ರದೇಶವನ್ನು ಕೊಡುವಂಥ ಯೋಜನೆಯಲ್ಲಿ ಹನ್ನೆರಡು ಎಕರೆ ಮಾತ್ರ ಹೋಗುತ್ತಿದೆ. ಅದಕ್ಕಾಗಿ non-forest area ದಲ್ಲಿ ಕೆಲಸ ಪ್ರಾರಂಭ ಮಾಡಿರುತ್ತಾರೆ. ನಡಹಳ್ಳಿಯವರೆ, ನೀವು ಆ ಮಾನದಂಡ ಇಟ್ಟರೆ

ಆಲಮಟ್ಟಿಯಿಂದ ಹಿಡಿದು ಯಾವ ಯೋಜನೆಯನ್ನೂ ಮಾಡುವುದಕ್ಕೆ ಆಗುತ್ತಿರಲಿಲ್ಲ. ನೀವು ಹೇಳಿದಂತೆ clearance ತೆಗೆದುಕೊಂಡೇ ಮಾಡಬೇಕು ಎನ್ನುವಂತಿದ್ದರೆ ಇದುವರೆಗೂ ಇಷ್ಟು ಪ್ರಗತಿಯಾಗುತ್ತಿರಲಿಲ್ಲ. ಆದುದರಿಂದ non-forest area ದಲ್ಲಿ ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕೋ ಅದನ್ನು ಮಾಡುತ್ತಿರುತ್ತಾರೆ, parallel ಆಗಿ clearance ತೆಗೆದುಕೊಳ್ಳುತ್ತಿರುತ್ತಾರೆ. ಹಲವಾರು ಸಂದರ್ಭಗಳಲ್ಲಿ alternative land ಕೊಡುವುದನ್ನು revenue ದವರು ಒಮ್ಮೊಮ್ಮೆ ತಡ ಮಾಡುತ್ತಾರೆ, ಅದರಲ್ಲಿ a, b, c, d, classifications ಇರುತ್ತದೆ, 1:2 ಕೊಟ್ಟರೂ ಕೂಡ forest ನವರು ಒಪ್ಪಿಕೊಳ್ಳುವುದಿಲ್ಲ. ಈ ತರಹ ಕೆಲವು practical ಸಮಸ್ಯೆಗಳಿವೆ. ಆದರೆ ಅದನ್ನು ಇಟ್ಟುಕೊಂಡು ಅದಕ್ಕೆ ಪರಿಹಾರ ಮಾಡಿಕೊಳ್ಳುತ್ತಾ ನಮ್ಮ ಪ್ರಗತಿಯನ್ನು ನಾವು ಮಾಡಬೇಕಾಗುತ್ತದೆ, that is the challenge.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:- ನಾನು ಏಕೆ ಈ ಪ್ರಶ್ನೆ ಕೇಳಿದೆನೆಂದರೆ ಕಳಸಾ ಬಂಡೂರಿ ವಿಷಯ ಬಂದಾಗ ಅಲ್ಲಿ environmental forest clearance ಇಲ್ಲವೆಂದು ಸರ್ಕಾರ ಕಾರಣಗಳನ್ನು ಕೊಡುತ್ತದೆ. ಆದರೆ ಬೇರೆ projects ಬಂದಾಗ clearance ಇಲ್ಲದೆಯೇ ಅದಕ್ಕೆ investment ಮಾಡುತ್ತಾರೆ. ಈ ದೃಷ್ಟಿಯಿಂದ ನಾನು ನಿಮಗೆ ಈ ಪ್ರಶ್ನೆಯನ್ನು ಕೇಳಿದ್ದು.

ಶ್ರೀ ಬಸವರಾಜ ಬೊಮ್ಮಾಯಿ:- ಈಗ ನಾನು ಅದನ್ನೇ ನಿಮಗೆ ಹೇಳಿದ್ದು. ಕಳಸಾ ಬಂಡೂರಿಯಲ್ಲಿಯೂ ಕೂಡ MoEF ಕೊಡಲಿಲ್ಲ. ಏಕೆಂದರೆ inter state water dispute ಅಲ್ಲಿತ್ತು. ಬೇರೆ ರಾಜ್ಯದವರು objection ಮಾಡಿದ್ದರು. MoEF ತಡೆಹಿಡಿದಿದ್ದಾರೆ, ಏಕೆಂದರೆ inter state water dispute final ಆದಮೇಲೆ ಮಾಡಬೇಕೆಂದು ತಡೆಹಿಡಿದಿದ್ದಾರೆ. ಆದಾಗ್ಯೂ ಕೂಡ non-forest area ದಲ್ಲಿ ನಾವು ಕೆಲಸ ಮಾಡಿದ್ದೇವೆ. ನಾನು ಅದನ್ನೇ ಹೇಳುವುದು. ಎಲ್ಲಿ non-forest area ಇದೆ ಅಲ್ಲಿ ನಾವು ಕೆಲಸ ಮಾಡಿದ್ದೇವೆ. ಎಲ್ಲಿ forest area ಬಂದಿದೆ ಅಲ್ಲಿ ಅನುಮತಿ ತೆಗೆದುಕೊಂಡು ಮಾಡಬೇಕಾಗುತ್ತದೆ. ಇದು ಕಾನೂನು, ಆದ್ದರಿಂದ ಇವತ್ತು ಇದರ ಬಗ್ಗೆ ತಾವು ಸ್ಪಷ್ಟನೆಯನ್ನು ಕೊಡಬೇಕು. ಇನ್ನು ಎರಡನೆಯದಾಗಿ ಸಿಂಗಟಾಲೂರು

ಯೋಜನೆಯೇನಿದೆ ಈಗಾಗಲೇ ತಮಗೆ ಗೊತ್ತಿದೆ, ಸಿಂಗಟಾಲೂರು ಏತ ನೀರಾವರಿ ಯೋಜನೆಯಲ್ಲಿ ಬಲಭಾಗಕ್ಕೆ ಈಗಾಗಲೇ 50 ಸಾವಿರ ಎಕರೆಗೆ ನಾವು ನೀರಾವರಿಯನ್ನು ಮಾಡಿದ್ದೇವೆ. ಎಡಭಾಗಕ್ಕೆ ಮಾಡುವಂಥ ಸಂದರ್ಭದಲ್ಲಿ ಮೂರು ಲಿಫ್ಟ್ ಇತ್ತು, ಈ ಮೂರೂ ಲಿಫ್ಟ್ ಹೆಚ್ಚು ಕಡಿಮೆ ಮುಗಿದಿದೆ. ಆದರೆ ಆ main canal ಮತ್ತು ಅದರ distributaries ಮಾಡುವಂಥ ಸಂದರ್ಭದಲ್ಲಿ land acquisition ಬಹಳ ದೊಡ್ಡ ಸಮಸ್ಯೆಯಾಗಿತ್ತು ಮತ್ತು ನಾಲ್ಕು ಹಳ್ಳಿಗಳ ಮುಳುಗಡೆಯ ಸಮಸ್ಯೆಯಿತ್ತು. ಮೂರು ಅಲ್ಲಿಪುರ ಮತ್ತು ಇತರ ಮೂರು ಹಳ್ಳಿಗಳ R and R ಸಮಸ್ಯೆಯಿತ್ತು. ಆ R and R ಸಮಸ್ಯೆಯನ್ನು ಪೂರ್ಣ ಮಾಡಿ ನೀರನ್ನು ಹಿಡಿಯುವಂಥ ಕೆಲಸವನ್ನು ಮಾಡಿ ಎಲ್ಲೆಲ್ಲಿ canal ಗಳನ್ನು ಮಾಡುವುದಕ್ಕೆ ಸಾಧ್ಯತೆಯಿತ್ತೋ ಆ ಸಂದರ್ಭದಲ್ಲಿ ಮಾಡಿದ್ದೇವೆ. ಈ main canal ಅನ್ನು clear ಮಾಡಿಕೊಂಡು ಮಾಡುವಂಥ ಏನು ಕೆಲಸವಿದೆ ಅದು ಇವತ್ತು ಹೆಚ್ಚು ಕಡಿಮೆ ಒಂದು ಹಂತಕ್ಕೆ ಬಂದಿದೆ. ಆದರೆ ಪ್ರಗತಿ ಮಾತ್ರ ಬಹಳ ಬಹಳ slow ಇದೆ.

ಶ್ರೀ ಜೆ.ಟಿ. ಪಾಟೀಲ್;– ಬೊಮ್ಮಾಯಿಯವರೆ ಒಂದ್ನಿಮಿಷ, ಮೊನ್ನೆ ಪೇಪರ್‌ನಲ್ಲಿ ಒಂದು ನ್ಯೂಸ್ ಬಂದಿದೆ. ಸಿಂಗಟಾಲೂರು ಮತ್ತು ಇನ್ನೂ ಮೂರು ಯೋಜನೆಗಳನ್ನು Green Bench ನೊಳಗೆ ರದ್ದು ಮಾಡಲಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ:– ನಾನು ಇಷ್ಟು ಹೊತ್ತು ಅದರ ಬಗ್ಗೆಯೇ ಮಾಡನಾಡಿದೆ. ಈಗ ನಿಮಗೆ ಎಚ್ಚರವಾಯಿತೇನು?

ಶ್ರಿ ಜೆ.ಟಿ. ಪಾಟೀಲ್:– ನಾನು ಆಗ ಸದನದಲ್ಲಿ ಇರಲಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಜೆ.ಟಿ. ಪಾಟೀಲರೆ, ಈಗ ಐದು ನಿಮಿಷದ ಹಿಂದೆ ಅದೇ ವಿಚಾರದ ಬಗ್ಗೆ ಮಾತನಾಡಿದೆ. ಇದರ ಪ್ರಗತಿ ಮಾತ್ರ ಬಹಳ slow ಇದೆ. ನಿಮ್ಮ ಅಂಕಿ ಅಂಶಗಳಿಂದಲೂ ಕೂಡ ನಾನು ಹೇಳಬಹುದು. ಎಷ್ಟು ಇಟ್ಟಿದೀರಿ, ಎಷ್ಟು ಖರ್ಚು ಮಾಡಿದಿರಿ? physical progress ಏನಾಗಿದೆ? ಎಷ್ಟು ಎಕರೆ ನೀರಾವರಿಯಾಗಬೇಕಿತ್ತು? ಈಗಾಗಲೇ

ಎರಡು ವರ್ಷವಾಗಿದೆ, ಎಡಭಾಗಕ್ಕೆ ನೀವು ಕನಿಷ್ಟ ಪಕ್ಷ ಮುಖ್ಯ ಕಾಲುವೆಗಾದರೂ ನೀರು ಹರಿಸುವಂಥ ಕೆಲಸವಾಗಬೇಕಾಗಿತ್ತು, ಅದು ಕೂಡ ಆಗಿಲ್ಲ, electrification works ಕೂಡ ಆಗಿಲ್ಲ. ಇದರ ಬಗ್ಗೆ ತಾವು ಹೆಚ್ಚಿನ ಮುತುವರ್ಜಿ ವಹಿಸಬೇಕು. ಏಕೆಂದರೆ ಇದು ಗದಗ, ಕೊಪ್ಪಳ, ಈ ಎರಡೂ ಜಿಲ್ಲೆಗಳು ಅತ್ಯಂತ ಬರಪೀಡಿತವಿರುವುದರಿಂದ ಈ ಯೋಜನೆಯನ್ನು ನಾವು ರೂಪಿಸಿದ್ದು, ಅದರ ಬಗ್ಗೆ ತಾವು ಅತೀ ಹೆಚ್ಚಿನ ಬರಪೀಡಿತವಿರುವುದರಿಂದ ಈ ಯೋಜನೆಯನ್ನು ನಾವು ರೂಪಿಸಿದ್ದು, ಅದರ ಬಗ್ಗೆ ತಾವು ಅತೀ ಹೆಚ್ಚಿನ ಗಮನವನ್ನು ಹರಿಸಬೇಕು ಮತ್ತು tribunal ನಲ್ಲಿಯೂ ಕೂಡ ಏನಾಗಿದೆಯೆಂದರೆ, ಸಿಂಗಟಾಲೂರು, Upper Bhadra, Upper Tunga ಈ ಯೋಜನೆಗಳಿಗೆ 4 ಟಿ.ಎಂ.ಸಿ. ನೀರು ಕಡಿತವಾಗಿದೆ ನಮ್ಮ tribunal ಆದೇಶದಲ್ಲಿ. ಆದ್ದರಿಂದ ನೀವು ಅದನ್ನು ಯಾವ ರೀತಿ ಸರಿಪಡಿಸುತ್ತೀರಿ? ಯಾವುದರಲ್ಲಿ ಏನೇನು ಸರಿಪಡಿಸುತ್ತೀರಿ? ಎನ್ನುವಂಥ ಚಿಂತನೆಯನ್ನು ಕೂಡ ತಾವು ಮಾಡಬೇಕು ಈಗ ಸಿಂಗಟಾಲೂರಿನಲ್ಲಿ micro irrigation ಬೇರೆ ದೊಡ್ಡ ಪ್ರಮಾಣದಲ್ಲಿ ತೆಗೆದುಕೊಂಡಿದ್ದೀರಿ. ಈಗ main ಯೋಜನೆಯನ್ನೇ ಮಾಡದೇ micro irrigation ಯಾವಾಗ ನೀವು ಪ್ರಾರಂಭ ಮಾಡುವುದು? ಆದ್ದರಿಂದ ಅದಕ್ಕೆ ನೀವು ತಾತ್ವಿಕವಾಗಿ DPR ಗೆ approval ಕೊಟ್ಟಿದ್ದೀರಿ, ನಿಜ. ಆದರೆ ಮುಂದೆ ಯಾವುದೇ ರೀತಿಯ ಕಾಮಗಾರಿಗಳನ್ನು, ಇದ್ದ ಕಾಮಗಾರಿಗಳನ್ನು ಪೂರ್ಣ ಮಾಡುವುದರಲ್ಲಾಗಲಿ ಅಥವಾ ಹೊಸದಾಗಿ drip ತೆಗೆದುಕೊಳ್ಳುವುದರಲ್ಲಾಗಲಿ, firm ಆಗಿ ಯಾವುದೇ ಕೆಲಸ ಇವತ್ತು ground ನಲ್ಲಿ ಕಾಣುತ್ತಿಲ್ಲ. ಅದರ ಬಗ್ಗೆ ತಾವು ಎಚ್ಚರಿಕೆಯನ್ನು ವಹಿಸಬೇಕು. Upper Tunga ದಲ್ಲಿ ಇವತ್ತು ಪ್ರಗತಿಯಾಗಿದೆ. ಆದರೆ ಮುಂದೆ ಕೆಲವು ರೈತರ ತೊಂದರೆಯಿತ್ತು. ಈಗ ಅದನ್ನು ಕೂಡ ನಾವು ನಿವಾರಣೆ ಮಾಡಿಕೊಟ್ಟಿದ್ದೇವೆ. ಈಗ ಇನ್ನಾದರೂ ಕೂಡ ಬಹಳ ವೇಗದಲ್ಲಿ ತಾವು ಕೆಲಸವನ್ನು ಮಾಡಿ ಕೊನೆಯ ಹಂತದಲ್ಲಿ ಸುಮಾರು 5 ರಿಂದ 6 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಅಲ್ಲಿ ನೀರು ಕೂಡುವುದು. ಅದನ್ನು ಕೂಡ ತಾವು ಮಾಡಬೇಕು. ಈಗ ತಾವು ಏನು ಸಾಧನೆ ತೋರಿಸಿದ್ದೀರಿ, 50 ಸಾವಿರ ಎಕರೆ, ನಿಜವಾಗಿಯೂ ಕೂಡ ಹಿಂದಿನ ಸರ್ಕಾರದಲ್ಲಿ ಕೆಲಸಗಳು

ಮುಗಿದಿದ್ದವು, ತಾವು ಅದನ್ನು ಈ ಬಾರಿ notification ಮಾಡಿದ್ದೀರಿ, ಸಾಧನೆ ಎಂದು ತೋರಿಸಿಕೊಂಡಿದ್ದೀರಿ. ಅಷ್ಟರ ಮಟ್ಟಿಗೆ ಇರಲಿ. ಆದರೆ ಮುಂದಿನ ಕೆಲಸವನ್ನು ಮಾಡುವುದಕ್ಕೆ ಕ್ರಮವನ್ನು ಜರುಗಿಸಬೇಕು. ಅದಕ್ಕೆ ಇಡುವಂಥ ಹಣ ಬಹಳ ಕಡಿಮೆಯಿದೆ. ಸಿಂಗಟಾಲೂರಿಗಾಗಲಿ, ನೀವು Upper Tunga ಗೆ ಆಗಲಿ, Upper Bhadra ಗೆ ಆಗಲಿ, ಈ ಯಾವುದೇ ಯೋಜನೆಗೆ ನೀವು ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಇಟ್ಟಿಲ್ಲ. ಅಷ್ಟು ಹಣವನ್ನು ಒದಗಿಸಿಲ್ಲ. ನೀವು ಯಾವ ಮಾನದಂಡವನ್ನು ಅನುಸರಿಸಿದ್ದೀರೋ? ನೀವು ಹೇಳಿದಿರಿ, ಆಗಸ್ಟ್-ಸೆಪ್ಟೆಂಬರ್‌ನಲ್ಲಿ ನಾವು ನೀರು ಬಿಡುತ್ತೇವೆ, ಸಿಂಗಟಾಲೂರಿನಲ್ಲಿ ನೀರಾವರಿ ಮಾಡುತ್ತೇವೆಂದು, ನೀವು ಯಾವ ಮಾನದಂಡವನ್ನಿಟ್ಟುಕೊಂಡಿದ್ದೀರಿ? ನಿಮಗೆ ಹಣವೇ ಇಲ್ಲ, ಸಿಂಗಟಾಲೂರಿನಲ್ಲಿಯೂ ಇಲ್ಲ, Upper Tunga ದಲ್ಲಿಯೂ ಇಲ್ಲ, Upper Bhadra ದಲ್ಲಿಯೂ ಇಲ್ಲ. ಅದಕ್ಕೆ ನೀವು ಏನು provision ಮಾಡುತ್ತೀರಿ? ಎನ್ನುವ ಬಗ್ಗೆ ತಾವು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇನ್ನು Upper bhadra ಗೆ ಬಂದರೆ ಅದನ್ನು national project ಮಾಡಬೇಕು ಎನ್ನುವಂಥ ಪ್ರಯತ್ನ ನಾವಿದ್ದಾಗ ಕೂಡ ಮಾಡಿದ್ದೆವು. ಅದಕ್ಕೆ ಹಲವಾರು conditions ಇವೆ. ಅದನ್ನು ತಾವು 2 ಲಕ್ಷ ಎಕರೆಗೆ ವಿಸ್ತರಣೆ ಮಾಡುವುದಕ್ಕೆ micro irrigation ನಲ್ಲಿ ತೆಗೆದುಕೊಳ್ಳುತ್ತೇವೆಂದು ಅದರಲ್ಲಿಯೂ ಕೂಡ ಹೇಳಿದ್ದೀರಿ. ಅದರ ಬಗ್ಗೆ ಏನಾಯಿತು, national project ಯಾವ ಮಟ್ಟಕ್ಕೆ ಬಂದಿದೆ? ಏನಾದರೂ approval ಸಿಕ್ಕಿದೆಯೇ? ಸಿಕ್ಕಿಲ್ಲವಾ, ರಾಷ್ಟ್ರದಲ್ಲಿ ಯಾವುದು national project ಆಗಿದೆ? ಅದರ ಮಾನದಂಡವೇನು? ಇದಕ್ಕೆ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವೇ ಎನ್ನುವಂಥದ್ದು ಒಂದು ಅಂಶ. ಇನ್ನು ಎರಡನೆಯದಾಗಿ, ನನಗರ್ಥವಾಗುತ್ತಿಲ್ಲ, Upper Bhadra ಯೋಜನೆಯಲ್ಲಿ ನಾವಿದ್ದಂಥ ಸಂದರ್ಭದಲ್ಲಿ ಹೆಚ್ಚಿನ compension ಕೇಳಿದ್ದರು. ನಾವು ಅದನ್ನೆಲ್ಲ ಕೊಟ್ಟು ಎಲ್ಲವನ್ನೂ ಮಾಡಿದ್ದೆವು. ಆದರೂ ಕೂಡ ಇನ್ನೂ ರೈತರ ತಕರಾರಿದೆ. ತರೀಕೆರೆ, ಕಡೂರು ಭಾಗದ ರೈತರ ತಕರಾರಿದೆ. ಆ Tunnel ಮಾಡುವಂಥ ಆಸುಪಾಸು ಮತ್ತು ಅದರ ಹಿಂದಿನದ್ದು ಕೂಡ canal ಮಾಡುವುದಕ್ಕೆ ಇನ್ನೂ ರೈತರ ತಕರಾರಿದೆ.

ಅದೆಲ್ಲಾ settle ಆಗಿತ್ತು. ಹೆಚ್ಚಿನ compensation ಕೊಡುವುದಕ್ಕೆ, with ex gratia, ಇವೆಲ್ಲವೂ ಕೂಡ consent ಕೊಟ್ಟಂಥ ಸಂದರ್ಭದಲ್ಲಿ ಆಗಿತ್ತು. ಆದರೂ ಕೂಡ ಅದರ ಅನುಷ್ಠಾನ ಏಕೆ ಆಗುತ್ತಿಲ್ಲ?

ಶ್ರೀ ಜಿ.ಹೆಚ್. ಶ್ರೀನಿವಾಸ್:- ಬೊಮ್ಮಾಯಿಯವರೆ ಒಂದ್ನಿಮಿಷ, ತರೀಕೆರೆ ವಿಚಾರ ಹೇಳಿದಿರಿ. ಅದಕ್ಕೇ ನಾನು ಹೇಳುತ್ತಿದ್ದೇನೆ, tunnel ಶುರುವಾಗಿದ್ದು ನಿಮ್ಮ ಕಾಲದಲ್ಲಿ problem ಇದ್ದೇ ಇತ್ತು, ಗಲಾಟೆ ನಡೆಯುತ್ತಿತತು. ಆದರೆ ನಮ್ಮ ಸರ್ಕಾರ ಬಂದ ಮೇಲೆ ಎಂ.ಬಿ. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಆದಮೇಲೆ ನಂತರ ಅದರ ಕೆಲಸವನ್ನು ಶುರು ಮಾಡಿದ್ದು. ಆದರೆ ನೀವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ, ಅಲ್ಲಿ ಇನ್ನೂ ಕೂಡ ರೈತರ problem ಇದೆ. Compensation ಕೊಟ್ಟಿಲ್ಲ, ಅವರು ಗಲಾಟೆ ಮಾಡುತ್ತಿದ್ದಾರೆ ಎನ್ನುವುದು ನಂತರದ್ದು, ಅದು ಇದೆ. ಆದರೆ ಕೆಲಸ ಶುರುವಾಗಿದ್ದು ಸಿದ್ದರಾಮಯ್ಯನವರ ಸರ್ಕಾರ ಬಂದಮೇಲೆ ಎಂದು ಹೇಳಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ನೋಡಿ, ನಾನು ಇಡೀ ಇಲಾಖೆ ಮೇಲೆ ಚರ್ಚೆ ಮಾಡುವುದರಿಂದ ಅದನ್ನು ನಾನು ಮಾತನಡುವುದಿಲ್ಲ. ಆ tunnel ಮಾಡುವ ಸಂದರ್ಭದಲ್ಲಿ ಯಾವ ರೀತಿ ಮೊದಲಿನ problem ಇತ್ತು, ಅದಕ್ಕೆ ಸುತ್ತಮುತ್ತಲೂ ಎಷ್ಟು ಯೋಜನೆಗಳನ್ನು ಮಾಡಿ, ಎಷ್ಟು ಕೆರೆಗಳನ್ನು ತಂಬಿಸುವುದಕ್ಕೆ ಯೋಜನೆಗಳನ್ನು ಮಾಡಿ ಆ compensation ಅನ್ನು ಎಷ್ಟು ಲಕ್ಷ ಇದ್ದದ್ದನ್ನು ಎಷ್ಟಕ್ಕೆ ಹೆಚ್ಚಿಗೆ ಮಾಡಿ ರೈತರಿಗೆ ಒಪ್ಪಿಸಿ, ಇವೆಲ್ಲವನ್ನು ನಾವು ground ನಲ್ಲಿ ಮಾಡಿ ಅದೆಲ್ಲಾ final ಆಗಿತ್ತು. ಆಮೇಲೆ ಅವರು ಬಂದಮೇಲೆ ಅದನ್ನು ಮುಂದುವರೆಸಿಕೊಂಡು ಹೋಗಿದ್ದಾರೆ. ಆದ್ದರಿಂದ ಯಾವುದಾದರೂ ಒಂದು ಒಳ್ಳೆಯ ಕೆಲಸವಾದಾಗ ಅದರ ಹಿನ್ನಲೆ, background ಕೂಡ ಇರುತ್ತದೆ. ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಾರೆ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಂಥ ಈ ಯೋಜನೆ ಪೂರ್ಣವಾದರೆ ಸಾಕಾಗಿದೆ. ಆ tunnel ಮಾಡದ ಹೊರತು ನೀವು ಮುಂದಿನ ಭಾಗದ ರೈತರಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆ

tunnel ಆದರೆ ನಿಮ್ಮ ತಾಲ್ಲೂಕಿಗೂ ಕೂಡ ಇದರಿಂದ ಬಹಳಷ್ಟು ಅನುಕೂಲವಿದೆ. ಈ ಯೋಜನೆಯಿಂದ ನಿಮ್ಮ ತಾಲ್ಲೂಕಿಗೆ ಬಹಳಷ್ಟು ಅನುಕೂಲವಿದೆ. ಸುಮಾರು 50 ರಿಂದ 55 ಪ್ರಮುಖ ಕೆರೆಗಳನ್ನು ತುಂಬಿಸುವುದರ ಜೊತೆಗೆ ಸುಮಾರು 10 ಸಾವಿರ ಎಕರೆ tunnel ಸುತ್ತಲೂ ಕೂಡ ನೀರಾವರಿಯಾಗುವುದಕ್ಕೆ tunnel ಮುಂಭಾಗ ಮತ್ತು ಹಿಂಭಾಗದಲ್ಲಿ provision ಕೂಡ ನಾವು ಮಾಡಿದ್ದೇವೆ. ಆದ್ದರಿಂದ ನಾವು ಎಲ್ಲಿ ಕೆಲಸವಾಗಿಲ್ಲ, ಎಲ್ಲಿ ಆಗಬೇಕು ಎನ್ನುವುದಕ್ಕೆ ಲಕ್ಷ್ಯವನ್ನು ವಹಿಸಿ ಮಾಡಿದರೆ ಮಾತ್ರ ಈ ಯೋಜನೆಗಳು ಪೂರ್ತಿಯಾಗುತ್ತವೆ. ಈಗ Upper Bhadra ಕ್ಕೂ ಕೂಡ ಹಣಕಾಸಿನ ವ್ಯವಸ್ಥೆ ಸಮರ್ಪಕವಾಗಿಲ್ಲ, advanced stage ನಲ್ಲಿ, ಈಗ tunnel ಮಾಡುವ ಜೊತೆಗೆ ಇನ್ನೊಂದು, ನಿಮ್ಮದೇನೂ clarity ಇದೆಯೋ ಗೊತ್ತಿಲ್ಲ. ನಮ್ಮ ಜಯಚಂದ್ರರವರು ತುಮಕೂರು branch canal ಮಾಡಿ ಎನ್ನುತ್ತಾರೆ, Chitradurga branch canal ಮಾಡಬೇಕಾಗಿದೆ. ಅದಕ್ಕಾಗಿ ನೀವು ಯಾವುದಕ್ಕೆ priority ಕೊಡುತ್ತೀರಿ? ಆಮೇಲೆ 21.5 TMC ಇದ್ದದ್ದನ್ನು ನಾವು ಗೋದಾವರಿಗೆ ಸ್ವಲ್ಪ ಟಿ.ಎಂ.ಸಿ. ನೀರನ್ನು ಕೊಟ್ಟಿದ್ದೇವೆ. ಮುಂದೆ ಅದರ savings ನಲ್ಲಿ ಇನ್ನೂ 6 TMC ನೀರನ್ನು ನಾವು ತೆಗೆದುಕೊಳ್ಳಬೇಕಾಗಿದೆ revised master plan ನಲ್ಲಿ. ಅದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? Revised master plan approve ಮಾಡದೇ Tumkur branch canal ಅನ್ನು ನೀವು ಮಾಡುವುದಕ್ಕೆ ಬರುವುದಿಲ್ಲ. ಎಲ್ಲಿಂದ ನೀರು ಕೊಡುತ್ತೀರಿ? ಜಗಳೂರಿನವರು, ಹೊಳಲ್ಕೆರೆಯವರು, ಹೊಸದುರ್ಗದವರು ನೀರು ಕೇಳುತ್ತಿದ್ದಾರೆ, ನೀವು ಎಲ್ಲಿಂದ ನೀರು ಕೊಡುತ್ತೀರಿ? ಆದ್ದರಿಂದ ನೀವು revised master plan ಬಗ್ಗೆ ಗಂಭೀರವಾಗಿ ತೆಗೆದುಕೊಂಡರೆ, ಕರ್ನಾಟಕದ, ಅದರಲ್ಲೂ ವಿಶೇಷವಾಗಿ ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕಕ್ಕೆ ಬಹಳಷ್ಟು ಅನುಕೂಲವಾಗುತ್ತದೆ. ಅದರ ಬಗ್ಗೆ ತಾವು ಸರ್ಕಾರದ ಮಟ್ಟದಲ್ಲಿ ಕೂಡಲೇ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ.

ಎತ್ತಿನ ಹೊಳೆ ಬಗ್ಗೆ ಬಹಳಷ್ಟು ಚರ್ಚೆಯಾಗಿ ಈಗ ಒಂದು ಹಂತಕ್ಕೆ ಹಲವಾರು ವಿಚಾರಗಳ ಬಗ್ಗೆ ಸ್ಪಷ್ಟೀಕರಣ ಬಂದು ಸೆಟ್ಲ್‌ಮೆಂಟ್ ಆಗಿದೆ.

ಅದರ ಯೀಲ್ಡ್ ಬಗ್ಗೆ, environmental issue ಬಗ್ಗೆ, ಅದರ ಸಾಧ್ಯಾಸಾಧ್ಯತೆಗಳ ಬಗ್ಗೆ ಹಲವಾರು ಚರ್ಚೆಗಳಾಗಿ ಕೊನೆಗೆ ಕೋಲಾರ ಚಿಕ್ಕಬಳ್ಳಾಪುರ, ಹಾಸನ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಈ ಭಾಗ ಅತ್ಯಂತ ಬರಪೀಡಿತ ಮತ್ತು ಅಂತರ್ಜಲ ಸಂಪೂರ್ಣವಾಗಿ ಕುಸಿದು ಹೋಗಿರುವಂತಹ ಸಂದರ್ಭದಲ್ಲಿ ನಮಗೆ ಒಂದೇ ಮಾರ್ಗ ಇರುವುದೇನೆಂದರೆ ಪಶ್ಚಿಮಮುಖಿಯಾಗಿ ಹರಿಯುವ ನೀರನ್ನು ನಾವು ತೆಗೆದುಕೊಂಡು ಬಂದಾಗ ಮಾತ್ರ ಸಾಧ್ಯ ಎಂದು ಮನಗಂಡು ಆ ಯೋಜನೆಯನ್ನು ರೂಪಿಸಿದೆವು. ಸುಮಾರು 24 ಟಿಎಂಸಿ ನೀರು ಯೀಲ್ಡ್ ಬರುತ್ತದೆ ಎಂದೂ ಈಗಾಗಲೇ ಮೂರ್ನಾಲ್ಕು ಸಂಸ್ಥೆಗಳು ಪರೀಕ್ಷೆ ಮಾಡಿದ್ದು, ಅದಕ್ಕೆ hydraulic assessment ಕೂಡ ಮಾಡಿದೆ. ಇದು ಕುಡಿಯುವ ನೀರು ಆಗಿರುವುದರಿಂದ ನಾವು environmental exemption ಕೂಡ ತೆಗೆದುಕೊಂಡಿದ್ದೇವೆ. ಇವತ್ತು ಎರಡು ವಿಚಾರಗಳಲ್ಲಿ ಎತ್ತಿನ ಹೊಳೆ ವಿಚಾರದಲ್ಲಿ ಹೊಸ ಆತಂಕ ಬಂದಿದೆ. ಒಂದು land acquisition, ಇನ್ನೊಂದು social impact studies. 2013ರ ಕಾಯಿದೆಯನ್ವಯ ನಾವು ಆ ಯೋಜನೆಯನ್ನು ಮಾಡುವುದಕ್ಕೆ ಹೋದರೆ social impact studies ಮಾಡಲೇಬೇಕು. ಅದರಲ್ಲಿ ಎಷ್ಟು ಊರುಗಳು, ಗ್ರಾಮಗಳು ಬರುತ್ತವೆ ಎನ್ನುವುದನ್ನು identify ಮಾಡಲೇಬೇಕು. ಮೊದಲು ಗ್ರಾಮಸಭೆಗಳಲ್ಲಿ ಅಪ್ರೂವ್ ತೆಗೆದುಕೊಳ್ಳಬೇಕು ಗ್ರಾಮಪಂಚಾಯಿತಿಯಲ್ಲಿ ಹಾಗೂ ಜಿಲ್ಲಾ ಪಂಚಾಯಿತಿಯಲ್ಲಿ ಅಪ್ರೂವ್ ತೆಗೆದುಕೊಂಡು, ಅದಕ್ಕೆ ಅಬ್ಜೆಕ್ಷನ್ ಕರೆದು, ಹಿಯರಿಂಗ್ ಮಾಡಿ, ಆಮೇಲೆ ಸರ್ಕಾರದ ಮಟ್ಟದಲ್ಲಿ ಇನ್ನೊಂದು ಹಿಯರಿಂಗ್ ಮಾಡಿ, ಈ ಎಲ್ಲಾ ಪ್ರೋಸೆಸ್ ಮಾಡಬೇಕೆಂದರೆ ಬಹುಶಃ ಮೂರ್ನಾಲ್ಕು ವರ್ಷಗಳೇ ಬೇಕಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಬೊಮ್ಮಾಯಿಯವರೆ ನಿಮ್ಮ ಆತಂಕಕ್ಕೆ ನನ್ನದೊಂದು ವಿಚಾರ ಹೇಳುತ್ತೇನೆ. ಈಗ ಬೇರೆ ಕಡೆಯೆಲ್ಲಾ ಕುಡಿಯುವ ನೀರಿಗೋಸ್ಕರವೇ ಕೆರೆ ತುಂಬುತ್ತಿರುವುದು. ನೀರಾವರಿಗೆ ಕೆರೆ ತುಂಬುವುದು ಕಡಿಮೆ ಇದೆ. Environmental clearance

ತೆಗೆದುಕೊಳ್ಳುವುದಕ್ಕೋಸ್ಕರ ಕುಡಿಯುವ ನೀರು ಎಂದು ಹೇಳಿದ್ದೀರಿ. ಮೊದಲು ಕೆರೆ ತುಂಬಿಸುವ ಕೆಲಸವನ್ನು ಮಾಡಿ. ಕೆರೆ ತುಂಬಿ ಅಂತರ್ಜಲ ಹೆಚ್ಚಾದ ಮೇಲೆ ನೀವು ಆರ್‌ಡಿಪಿಆರ್ ನವರಿಗೆ handover ಮಾಡಿ. ಅವರು ನೀರನ್ನು ಹಂಚಿಕೊಳ್ಳುತ್ತಾರೆ. ಕುಡಿಯುವ ನೀರಿನ ಸರಬರಾಜನ್ನು ಅವರು ಮಾಡಿಕೊಳ್ಳುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ:– ಈಗ ಅದನ್ನೇ ಮಾಡಿರುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಅದೇ ಆಗಬೇಕು. ನೀವು ಮತ್ತೆ social survey ಗೆ ಹೋದರೆ ನಾವು ಮತ್ತೆ ಹಿಂದಕ್ಕೆ ಹೊರಟೆವು. ಅದು ಆಗುವುದು ಬೇಡ.

ಶ್ರೀ ಬಸವರಾಜ ಬೊಮ್ಮಾಯಿ:– ಅದಕ್ಕೆ ಒಂದು ದಾರಿ ಇದೆ ಹೇಳುತ್ತೇನೆ. 2013 ರ ಕಾಯಿದೆ ಪ್ರಕಾರ ಮಾಡಿದರೆ ಇದೆಲ್ಲ ಸಮಸ್ಯೆ ಇದೆ, land acquisition ಕೂಡ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೀರಾವರಿ ಇಲಾಖೆಯವರು 2014 ರ ಅಮೆಂಡ್‌ಮೆಂಟ್ ಆದ ತಕ್ಷಣ ಅದರ ಅನ್ವಯ ಕ್ಯಾಬಿನೆಟ್‌ಗೆ ಕಳುಹಿಸಿದರು. ಅದು ಕ್ಯಾಬಿನೆಟ್ ಮುಂದೆ ಬಂದಿತ್ತು. ಆದರೆ ಕ್ಯಾಬಿನೆಟ್ ನಿರ್ಣಯ ತೆಗೆದುಕೊಳ್ಳಲಿಲ್ಲ. ಏಕೆಂದರೆ ನಾವು 2013 ರ ಕಾಯಿದೆ ಪರವಾಗಿದ್ದೇವೆ, 2014 ರ ಅಮೆಂಡ್‌ಮೆಂಟ್ ವಿರೋಧವಾಗಿದ್ದೇವೆ, ಇದು ರೈತರ ವಿರೋಧಿ ಇದೆ ಎನ್ನುವಂತಹ ನಿಲುವು ಅಲ್ಲಿ ತೆಗೆದುಕೊಂಡಿದ್ದರಿಂದ ಇವತ್ತು ಈ ಯೋಜನೆಗೆ ಮಾರಕ ಪೆಟ್ಟು ಬಿದ್ದಿದೆ. ಆದ್ದರಿಂದ ಸರ್ಕಾರ ನಿಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿ. ನಾವು ಈ ಯೋಜನೆಯನ್ನು ಈಗ ಮಾಡುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ನಮ್ಮ ನಿಲುವು ಈ ರೀತಿ ಇದೆ, ನಮ್ಮ ಪಕ್ಷದ ನಿಲುವು ಹೀಗಿದೆ, ಆದ್ದರಿಂದ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ, ಜನರಿಗೆ ಗೊತ್ತಾಗಲಿ. ಒಂದು ಕಡೆ ನಾವು ಈ ಯೋಜನೆಯನ್ನು ಮಾಡುತ್ತೇವೆಂದು ಹೇಳುತ್ತೀರಿ, ಆ ಕಾನೂನು ವಿರೋಧ ಮಾಡುತ್ತೇವೆಂದು ಹೇಳುತ್ತೀರಿ, ಯಾವುದು ರೈತರ ಪರವಾಗಿ, ಯಾವುದು ಅಭಿವೃದ್ಧಿ ಪರವಾಗಿ, ಯಾವುದು ಯೋಜನೆಗಳ ಪರವಾಗಿ ಎನ್ನುವಂಥಾದ್ದನ್ನು ನಾವು ಸ್ಪಷ್ಟವಾಗಿ

ಇಲ್ಲಿ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ. ಆಗ ಮಾತ್ರ ಒಂದು ಸ್ಪಷ್ಟತೆ ಬರುತ್ತದೆ. ಇಲ್ಲದಿದ್ದರೆ ನಾವು ಯಾವುದೋ ಒಂದು ವಿಚಾರವನ್ನು ಎತ್ತಿಕೊಂಡಾಗ ನಮ್ಮ ರೈತರ ವಿರೋಧವಾಗಿ, ನಮ್ಮ ರಾಜ್ಯಕ್ಕೆ ವಿರೋಧವಾಗಿರುವುದನ್ನು ಕೂಡ ನಾವು ಒಪ್ಪಿಕೊಳ್ಳುವಂತಹ ಅನಿವಾರ್ಯತೆ ನಮಗೆ ಇಲ್ಲ. ಅದಕ್ಕೆ ಈಗ 12 ರಿಂದ 13 ಸಾವಿರ ಕೋಟಿ ರೂಪಾಯಿ ಆಗುತ್ತದೆಂದು ಹೇಳುತ್ತೀರಿ. ಒಂದೊಂದು ವರ್ಷವೂ ನಾವು ಕಳೆದುಕೊಳ್ಳುತ್ತಾ ಹೋದರೆ ಒಂದೊಂದು ಸಾವಿರ ಕೋಟಿ ರೂಪಾಯಿ ಹೆಚ್ಚಾಗುತ್ತದೆ. ಅದರ ಜವಾಬ್ದಾರಿ ಯಾರು? ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಎಲ್ಲಾ ಜಿಲ್ಲೆಗಳ ಸ್ಥಿತಿಗಳನ್ನು ನೋಡಿದಾಗ ತುರ್ತಾಗಿ ನೀರು ಕೊಡುವುದು ಅವಶ್ಯಕತೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಮೂರು ವರ್ಷಗಳಲ್ಲಿ ನಾವು ನೀರು ಕೊಡುತ್ತೇವೆಂದು ಹೇಳಿದ್ದಾರೆ. ನಿಮಗೆ ಮೂರು ವರ್ಷಗಳು land acquisition and social impact studies ಮಾಡುವುದಕ್ಕೆ ಬೇಕಾಗುತ್ತದೆ. ಇದು ವಾಸ್ತವಿಕವಾಗಿರುವಂತಹ ಸಮಸ್ಯೆ. ಇದನ್ನು ಹೇಗೆ ಬಗೆಹರಿಸುತ್ತೀರಿ? ಇದರಿಂದ ಹೇಗೆ ಹೊರಗಡೆ ಬರುತ್ತೀರಿ? ಇದು ಒಂದು ರಾಜಕೀಯ ಮಿಶ್ರಿತವಾಗಿರುವಂತಹ ಸವಾಲು. ಆದ್ದರಿಂದ ನೀವು ಹೈಕಮಾಂಡ್‌ಗೆ ಯಾವ ರೀತಿ convince ಮಾಡುತ್ತೀರೆಂದು ನೋಡಿ. ಇಲ್ಲ, ಈಗಿರುವಂತಹ ಕಾಯಿದೆಗಳಲ್ಲಿ ಏನು ಸಂಶೋಧನೆ ಮಾಡುತ್ತೀರೆಂದು ನೋಡಿ. Alternate ಏನಿದೆ ಎಂದು ನೋಡಿ. ಈಗ ನನಗೆ ತಿಳಿದು ಬಂದಿರುವುದೇನೆಂದರೆ ಕಂಟ್ರಾಕ್ಟರ್‌ಗಳಿಗೆ ನೀವೇ ಭೂಮಿ ಖರೀದಿ ಮಾಡಿಬಿಡಿ, ಆಮೇಲೆ ನಾವು ನಿಮಗೆ ಅದೇ compensation ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಆ ರೀತಿ contractor ಭೂಮಿ ಖರೀದಿ ಮಾಡುವುದಾದರೆ ಮಧ್ಯವರ್ತಿಗಳಿಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುವುದಿಲ್ಲವೇ? ಈ ರೀತಿ ಮಾಡಬೇಕೆಂದು ಇದ್ದಾರೆನ್ನುವ ವಿಷಯ ನನಗೆ ಕೇಳಿಬಂದಿದೆ ಎಂದು ಹೇಳಿದೆ.

Dr. SHARAN PRAKASH RUDRAPPA PATIL:- We cannot go on air say.

SRI BASAVARAJ BOMMAI:- Shall I tell you?

ಉಪಾಧ್ಯಕ್ಷರು:– ಆ ವಿಷಯ ಬೇಡ ಬಿಡಿ, solution ಹೇಳಿ.

SRI BASAVARAJ BOMMAI:- This is the discussion happened in the office of the Chief minister in front of several departmental officers other than irrigation also. This is what has happened. ನಾನು ಇದಕ್ಕಿಂತ ಇನ್ನೇನು ಹೇಳಲಿ? ಕೃಷ್ಣಾದಲ್ಲಿ discussion ಆಗಿಲ್ಲವೇ?

ಶ್ರೀ ಎಂ.ಬಿ. ಪಾಟೀಲ್:– ಆ ರೀತಿಯಾಗಿಲ್ಲ. ಇಲ್ಲಿ ತಪ್ಪು ಮಾಹಿತಿ ಹೋಗುವುದು ಬೇಡ. ಎತ್ತಿನ ಹೊಳೆ ಯೋಜನೆ ಬಗ್ಗೆ ಆ ಭಾಗದ ಜನಪ್ರತಿನಿಧಿಗಳು ಕೂಡಿದಾಗ ಮುಖ್ಯಮಂತ್ರಿಗಳ ಸಭೆಯಲ್ಲಿ ಚರ್ಚೆಯಾಗಿದೆ. Irrigation schemes are exempted. ನಮ್ಮ irrigation ಗೆ ಇವತ್ತು social impact assessment ನಿಂದ exemption ಇದೆ. ಆದರೆ ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ SIA ಬೇಕಾಗುತ್ತದೆ. 2013 ರ ಭೂಸ್ವಾಧೀನ ಕಾಯಿದೆ ಏನಿದೆ, ಅದರ ಪ್ರಕಾರ ಹೋದರೆ ಕುಡಿಯುವ ನೀರಿಗೆ SIA is mandatory.

ಶ್ರೀ ಬಸವರಾಜ ರಾಯರೆಡ್ಡಿ:– What is the problem? Social impact study ಮಾಡಿದರೆ problem ಏನು?

ಶ್ರೀ ಎಂ.ಬಿ. ಪಾಟೀಲ್:– ಅವರು delay ಆಗುತ್ತದೆಂದು ಹೇಳುವುದು.

SRI BASAVARAJA RAYAREDDY:- It is a question of 3-4 months.

ಶ್ರೀ ಎಂ.ಬಿ. ಪಾಟೀಲ್:– No, question of 3-4 months ಅಲ್ಲ, social impact assessment ಅನ್ನು ಎಷ್ಟೇ fast ಆಗಿ ಮಾಡುತ್ತೇವೆಂದರೂ ಏಳರಿಂದ ಎಂಟು, ಒಂಭತ್ತು ತಿಂಗಳು ಬೇಕಾಗುತ್ತದೆ. ಆದರೆ ordinance ನಲ್ಲಿ ಇದು exempted ಇದೆ. ಅಲ್ಲಿ ತಿಳಿಸಿದ ಹಾಗೆ direct purchase ಗೆ ಏನಾದರೂ ಸಾಧ್ಯವಿದೆಯೇ ಎಂದು ಚರ್ಚೆಯಾಗಿರುವುದು.

ಶ್ರೀ ಬಸವರಾಜ ಬೊಮ್ಮಾಯಿ:- ನಾನು ಅದನ್ನೇ ಹೇಳಿದ್ದು.

ಶ್ರೀ ಎಂ.ಬಿ. ಪಾಟೀಲ್:- Direct purchase, not through contractor. There is a difference. ಸರ್ಕಾರದಿಂದ ನೇರವಾಗಿ purchase ಮಾಡುವುದಕ್ಕೆ ಸಾಧ್ಯವಿದೆಯೇ? ಆ ಸಭೆಯಲ್ಲಿ ಅವತ್ತಿನ ದಿವಸ ನಾನು ಇರಲಿಲ್ಲ, ವಿದೇಶಕ್ಕೆ ಹೋಗಿದ್ದೆ, ನಾನು ವಾಪಸ್ಸು ಬಂದಾಗ ನನ್ನ ಜೊತೆಯೂ ಕೂಡ ಈ ವಿಚಾರ ಚರ್ಚೆಯಾಯಿತು. ಇವತ್ತು ಕೆಲವೊಂದು ವಿಚಾರಗಳು ನಡೆಯುತ್ತಿದೆ, ಅದನ್ನು ನಾನು ಈ ಹಂತದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ನಾವು ಆ Land Acquisition Act ಅನ್ನು violation ಮಾಡಬಾರದು, ಅಲ್ಲಿ R and R component ಇದೆ, four times the compensation ಇದೆ. ಅದೆಲ್ಲವನ್ನೂ ಒಳಗೊಂಡು ನೇರವಾಗಿ purchase ಮಾಡುವುದಕ್ಕೆ possibility ಇದೆಯೇ ಎನ್ನುವುದನ್ನು ನಾವು ಮಾಡುತ್ತಿದ್ದೇವೆ. ಕೆಲವೊಂದು ಮಾಹಿತಿಗಳನ್ನು ಕೂಡ collect ಮಾಡಿಕೊಂಡಿದ್ದೇವೆ. ಇಷ್ಟು ವಿಚಾರ ಮಾತ್ರ ಸತ್ಯ. ಆದರೆ ತಾವೇನು ಕಂಟ್ರಾಕ್ಟರ್ ಮೂಲಕ ಎಂದು ಹೇಳಿದಿರಿ, ಅದು ಸುಳ್ಳು. ಅದು ಬೇಡ.

ಶ್ರೀ ಬಸವರಾಜ ಬೊಮ್ಮಾಯಿ:- ಬೇಡ ಅಲ್ಲ, ನಾನು ಹೇಳುತ್ತೇನೆ. ಕೇಳಿ.

ಉಪಾಧ್ಯಕ್ಷರು:- ಬಸವರಾಜ್ ನಾನು ಆ ಸಭೆಯಲ್ಲಿ ಇದ್ದೆ. ಏನಾದರೂ possibilities ಇದ್ದರೆ explore ಮಾಡಿ ಎಂದು ಹೇಳಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:- ಸರಿ ಸಾರ್, ನನ್ನ ಹತ್ತಿರ ಪೂರ್ಣ ಮಾಹಿತಿ ಇದೆ.

ಉಪಾಧ್ಯಕ್ಷರು:- ಈಗ land purchase ಮಾಡುವುದಕ್ಕೆ KIADB ಗೆ powers ಇದೆಯಲ್ಲ,

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಮಂತ್ರಿಗಳು ಹೇಳಿರುವುದು ಸರಿ. ಅವರು ಅರ್ಧ ಹೇಳಿದರು, ಅದರ ಮುಂದಿನದು ಹೇಳಲಿಲ್ಲ. ಆ ಸಂದರ್ಭದಲ್ಲಿ ರೈಲ್ವೆ ಇಲಾಖೆ ಎಲ್ಲವೂ ಕೂಡ ಇದ್ದವು, ಇದೊಂದೇ

ಇಲಾಖೆ ಅಲ್ಲ. ಆ ಸಂದರ್ಭದಲ್ಲಿ KIADB ಕಡೆಯಿಂದ ಮಾಡಬಹುದೇ ಎನ್ನುವಂತಹ ಮಾತುಕತೆ ಆಯಿತು. ಇದು four times the compensation ಕೊಟ್ಟರೆ ಖರೀದಿ ಮಾಡುವುದಕ್ಕೆ ಸಾಧ್ಯ ಎನ್ನುವ ವಿಚಾರ ಕೂಡ ಬಂತು. ಆಗ ಸುಲಭವಾಗಿರುವುದು ಈಗ ಏನು ತಮ್ಮ ಕೆಲಸಕ್ಕೆ ಸ್ವಂತ ಕೊಟ್ಟು ಮಾಡುತ್ತಾರೆ, ಅದನ್ನೇ ಖರೀದಿ ಮಾಡಿದರೆ four times the compensation ಅನ್ನು ಅಷ್ಟೇ ಪ್ರಮಾಣದಲ್ಲಿ ಅವರಿಗೆ ಕೊಡುವುದಕ್ಕೆ ಸಾಧ್ಯವಿದೆಯೇ ಎನ್ನುವಂಥ ವಿಚಾರ ಕೂಡ ಚರ್ಚೆಯಾಗಿದೆ. ತಾವು ಒಪ್ಪಿಕೊಳ್ಳುವುದಿಲ್ಲ, ಏಕೆಂದರೆ ತಮಗೆ ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಈಗ ನಾನು ಹೇಳಿದ್ದರಲ್ಲಿ 50% ಒಪ್ಪಿಕೊಂಡಿರಲ್ಲ.

ಶ್ರೀ ಎಂ.ಬಿ. ಪಾಟೀಲ್:- We are still working out some possibilities. ಏನೋ ಒಂದು possibilities ಗೆ ಇವತ್ತಿನ ದಿವಸ workout ಮಾಡುತ್ತೇನೆ. ಆದರೆ ನಾನು ಉತ್ತರ ಹೇಳುವಾಗ ಹೇಳುತ್ತೇನೆ. ಆದರೆ ನೀವು contractor through ಎಂದು ಹೇಳಿದಿರಿ.

ಶ್ರೀ ಬಸವರಾಜ ಬೊಮ್ಮಾಯಿ:- ನೀವು explore ಮಾಡಬೇಕೆಂದು ಹೇಳಿದಿರಿ, ಆ exploration ವಿವರವಾಗಿ ಹೇಳಿದ್ದೇನೆ ಅಷ್ಟೆ.

ಶ್ರೀ ಎಂ.ಬಿ. ಪಾಟೀಲ್:- ನಾನು ಅದಕ್ಕೆ ಉತ್ತರದಲ್ಲಿ ಹೇಳುತ್ತೇನೆ.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಕಂಟ್ರಾಕ್ಟರ್ ಮೂಲಕ ಸರ್ಕಾರ ಜಮೀನು ಖರೀದಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ ಎನ್ನುವುದನ್ನು ಸರ್ಕಾರ ಸುತಾರಾಂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದು possible ಇಲ್ಲ ಹಾಗೂ ಕಾನೂನಿನಲ್ಲಿ ಅವಕಾಶವಿಲ್ಲ. ಇದು ಸದನಕ್ಕೆ ತಪ್ಪು ಮಾಹಿತಿ ಕೊಟ್ಟ ಹಾಗೆ ಆಗುತ್ತದೆ. ಅದಕ್ಕೆ we will deny it.

ಉಪಾಧ್ಯಕ್ಷರು:- ಡಾಕ್ಟರೆ ನಿಮಗೆ ಕೆಲವು ವಿಷಯಗಳನ್ನು ಗೊತ್ತಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ನಿಮಗೆ ಕೆಲವು ವಿಷಯಗಳು ಗೊತ್ತಿಲ್ಲ. ನೀವು plain ಆಗಿ ಮೇಲ್ನೋಟಕ್ಕೆ ಏನು symptoms ಇದೆ, ಅದಕ್ಕೆ

ಔಷಧ ಕೊಡುವ ಪ್ರಯತ್ನ ಮಾಡುವುದಕ್ಕೆ ಹೋಗಬೇಡಿ. ಅದಕ್ಕೆ MRI scan ಮಾಡಿದಾಗ ಕರೆಕ್ಟಾಗಿ ಗೊತ್ತಾಗುತ್ತದೆ. ಅದನ್ನು MRI scan ಮಾಡಿದಾಗ correct ಆಗಿ ಗೊತ್ತಾಗುತ್ತದೆ, ನಾವು MRI scan report ನೋಡಿದ್ದೇವೆ, ನೀವು ನೋಡಿಲ್ಲ ಅಷ್ಟೆ.

ಶ್ರೀ ಕೆ.ಜೆ. ಜಾರ್ಜ್:- ನೀವು ನಿಮ್ಮ ಕಾಲದಲ್ಲಿ Land purchase ಮಾಡಬೇಕೆಂದು ಯೋಚನೆ ಮಾಡಿರಬಹುದು. ನಮ್ಮ ಮುಖ್ಯಮಂತ್ರಿಯವರು ಯಾವುದೇ contractor ಗಳ ಬಳಿಯೂ ಹೋಗುವುದಿಲ್ಲ, ನಾವು ನೇರವಾಗಿ ಕಾನೂನಿನಲ್ಲಿ ಯಾವ ಪ್ರಕಾರ ಇದೆಯೋ, ಅದರ ಪ್ರಕಾರ ಮಾಡುತ್ತೇವೆ.

ಶ್ರೀ ಬಸವರಾಜ ಬೊಮ್ಮಾಯಿ:- ಈಗ ಸರಿ ಆಯಿತು ನೋಡಿ, ಅವರು 50% ಹೇಳಿ ಮುಂದುವರೆಸಿಲ್ಲ, ಅವರು innocent ಆಗಿ ಮಾತನಾಡಿದರು. ಈಗ ತಾವು ಮುಖ್ಯಮಂತ್ರಿಯವರಿಗೆ ಏನು certificate ಕೊಟ್ಟಿದ್ದೀರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ತಾವು ಮುಖ್ಯಮಂತ್ರಿಯವರ ಬಗ್ಗೆ ನಿಮ್ಮ ಕಾಲದಲ್ಲಿ ಆಗಿರಬಹುದು, ನಮ್ಮ ಕಾಲದಲ್ಲಿ ಅಲ್ಲ ಎಂದು ಏನು ಹೇಳಿದ್ದೀರಿ.

ಶ್ರೀ ಕೆ.ಜೆ. ಜಾರ್ಜ್:- ತಾವು ಏನು ಹೇಳುತ್ತೀರಿ? ನಿಮ್ಮ ಕಾಲದಲ್ಲಿ ನಡೆದಿದೆ, contractor through land purchase ಗೆ ತೀರ್ಮಾನ ತೆಗೆದುಕೊಂಡಿದ್ದೀರೆಂದು ಹೇಳಿದ್ದು, ತಪ್ಪು ಎಂದು ಹೇಳುತ್ತಿದ್ದೇವೆ. ಆ ರೀತಿ ನಿಮ್ಮ ಕಾಲದಲ್ಲಿ ಯೋಚನೆ ಮಾಡಿರಬಹುದು, ನಮ್ಮ ಕಾಲದಲ್ಲಿ ಆ ರೀತಿ contractor ಅನ್ನು ಇಟ್ಟು ಯಾವುದೇ ಭೂಮಿಯನ್ನು purchase ಮಾಡಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ನಾನು ಎಲ್ಲಿ ಹೇಳಿದೆ? ಒಂದು ನಿಮಿಷ, ಈಗ ನೀವು ಹೇಳಿದಿರಲ್ಲಾ, ಮಾನ್ಯ ಮುಖ್ಯಮಂತ್ರಿಯವರಿಗೆ ನೀವು certificate ಕೊಟ್ಟಿದ್ದೀರಲ್ಲಾ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್‌ರವರು ಕೊಟ್ಟರೆ ಒಪ್ಪಿಕೊಳ್ಳುವುದಿಲ್ಲ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಸವರಾಜ ಬೊಮ್ಮಾಯಿಯವರು ನೀರಾವರಿ ಸಚಿವರಾಗಿ ಕೆಲಸ

ಮಾಡಿದ್ದಾರೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು, ಏಕೆಂದರೆ ರಾಜ್ಯದ ಜನತೆ ನೋಡುತ್ತಿರುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ:– ನಾನು ಏನು ಹೇಳಿದ್ದೇನೆ?

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್:– ಈ ಸರ್ಕಾರ ಯಾವುದೇ ಕಾನೂನು ಬಾಹಿರವಾಗಿರುವಂಥ ಕೆಲಸವನ್ನು ಮಾಡುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಅದಕ್ಕೆ ನಾನು ಬಹಳ ಸೂಕ್ಷ್ಮವಾಗಿ I choose my words very carefully ಅದಕ್ಕೇ ನಾನು ಹೇಳಿದೆ, ಈ ರೀತಿ ಮಾತುಕತೆ ಆಗಿರುವುದು ಕೇಳಿ ಬಂದಿದೆಯೆಂದು ಹೇಳಿದೆ. ನೀವೇ ಅದನ್ನು ವಿಸ್ತರಣೆ ಮಾಡಿದವರು.

ಉಪಾಧ್ಯಕ್ಷರು:– ಆಯಿತು, ತಾವು ಬೇರೆ ಮಾತನಾಡಿ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಬಸವರಾಜ ರಾಯರೆಡ್ಡಿಯವರೆ, ಅವರು ತಪ್ಪು ಮಾಹಿತಿ ಅನ್ನಲಿಲ್ಲ, ಅರ್ಧ ಒಪ್ಪಿಕೊಂಡರು, ಇರಲಿ, ಇದನ್ನು ಇಷ್ಟಕ್ಕೇ ಬಿಡುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿಯವರೆ:– ಖರೀದಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ಆದರೆ through contractor ಅಲ್ಲವೆಂದು ಹೇಳಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:– ವಕೀಲಿಕೆ ಬೇಡ, ಅವರು ನಿಮಗೆ fees ಸಹ ಕೊಡುವುದಿಲ್ಲ, ಏಕೆ ತಲೆ ಕೆಡಿಸಿಕೊಳ್ಳುತ್ತೀರಿ?

ಶ್ರೀ ಕೆ. ಷಡಕ್ಷರಿ:– ಮಾನ್ಯ ಬಸವರಾಜ ಬೊಮ್ಮಾಯಿಯವರೆ, KIADB ಯಿಂದ ಮಾಡಿದರೆ ತಪ್ಪಾಗುತ್ತದೆ, KIADB ಯಿಂದ acquire ಹೇಗೆ ಮಾಡಿಸುತ್ತೀರಿ?

ಶ್ರೀ ಬಸವರಾಜ ಬೊಮ್ಮಾಯಿ.– ನಾನು ಎಲ್ಲಿ ಹೇಳಿದ್ದೇನೆ.

ಶ್ರೀ ಕೆ. ಷಡಕ್ಷರಿ:– ತಾವು ಆಗಲೇ KIADB ಯಿಂದ ಮಾಡಬಹುದೇ? ಎಂದು ಹೇಳಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ:– ನಿಮ್ಮ ಸರ್ಕಾರದಲ್ಲಿ ಚರ್ಚೆಯಾಯಿತೆಂದು ಹೇಳಿದ್ದೇನೆ.

ಉಪಾಧ್ಯಕ್ಷರು:– ಮಾನ್ಯ ಬಸವರಾಜ ಬೊಮ್ಮಾಯಿಯವರೆ, ವಿಷಯ deviate ಆಗುವುದು ಬೇಡ, ಬೇರೆ ವಿಚಾರ ಮಾತನಾಡಿ.

ಶ್ರೀ ಬಸವರಾಜ ಬೊಮ್ಮಾಯಿ:– ಆದ್ದರಿಂದ ಅದು ಏನು ಮಾಡುತ್ತಿರೋ ಹೇಳಿ, ಅದಕ್ಕೂ ತಕರಾರು ಮಾಡುವುದಿಲ್ಲ, ನಾನು ಯಾವುದಕ್ಕೂ ತಕರಾರು ಮಾಡಿಲ್ಲ, ಈ ರೀತಿ ನಡೆಯಿತೆಂದು ಹೇಳಿದ್ದೇನೆ. ಅದಕ್ಕೆ ಏಕೆ ನಾಲ್ಕು ನಾಲ್ಕು ಜನರು ಏಳುತ್ತೀರೋ ಗೊತ್ತಿಲ್ಲ. ಒಟ್ಟಾರೆ ಎತ್ತಿನ ಹೊಳೆ ಬಹಳ ಪ್ರತಿಷ್ಠಿತವಾಗಿರುವಂಥ ಮತ್ತು ಅವಶ್ಯಕವಾಗಿರುವಂಥ ಯೋಜನೆಯಾಗಿದೆ. ಯಾವುದೇ ಕಾರಣಕ್ಕೂ ಅದು ಕಾನೂನಿನ ತೊಡಕಿನಲ್ಲಿ ಸಿಕ್ಕಿ ಹಾಕಿಕೊಳ್ಳಬಾರದೆನ್ನುವ ಕಳಕಳಿಯಿಂದ ನಾನು ಮಾತನಾಡುತ್ತಿದ್ದೇನೆ. ನಿಮ್ಮ ಮುಖ್ಯಮಂತ್ರಿಯವರು ಮೂರು ವರ್ಷಗಳಲ್ಲಿ ಅದನ್ನು ಮುಗಿಸುತ್ತೇನೆಂದು ಹೇಳಿದ್ದಾರೆ. ಇಲಾಖೆಯ 3 ವರ್ಷಗಳಲ್ಲಿ ಮುಗಿಸುವ ರೀತಿಯಲ್ಲಿ ಕೆಲಸ ಮಾಡಬೇಕಲ್ಲಾ? ಇಲ್ಲದಿದ್ದರೆ ನಮ್ಮ ವಿರೋಧ ಪಕ್ಷದ ಮಾನ್ಯ ಕುಮಾರಸ್ವಾಮಿಯವರು ಮೂರು ವರ್ಷಗಳಲ್ಲಿ ಅದನ್ನು ಮುಗಿಸುತ್ತೇನೆಂದು ಹೇಳಿದ್ದಾರೆ. ಇಲಾಖೆಯು 3 ವರ್ಷಗಳಲ್ಲಿ ಮುಗಿಸುವ ರೀತಿಯಲ್ಲಿ ಕೆಲಸ ಮಾಡಬೇಕಲ್ಲಾ? ಇಲ್ಲದಿದ್ದರೆ ನಮ್ಮ ವಿರೋಧ ಪಕ್ಷದ ಮಾನ್ಯ ಕುಮಾರಸ್ವಾಮಿಯವರು ಮೂರು ವರ್ಷಗಳಲ್ಲಿ ಮುಗಿಸಿದರೆ ನಾನು ತಲೆ ಬೋಳಿಸಿಕೊಳ್ಳುತ್ತೇನೆಂದು ಹೇಳಿದ್ದಾರೆ. ಇದು ಇಡೀ ರಾಜ್ಯ ಮಟ್ಟದಲ್ಲಿ ಗಮನ ಸೆಳೆದಿರುವಂಥದ್ದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಮಾತು ಉಳಿಸಿಕೊಳ್ಳಬೇಕು, ಮಾನ್ಯ ಕುಮಾರಸ್ವಾಮಿಯವರು ತಲೆ ಬೋಳಿಸಿಕೊಳ್ಳುವುದನ್ನು ನಿಲ್ಲಿಸಬೇಕು. ಜನರಿಗೆ ನೀರು ಬರುವುದಕ್ಕಿಂತ, ಇದು ಬಹಳ ಮುಖ್ಯವಾಗಿದೆ. ಆದರೆ ನಮ್ಮ ಕಳಕಳಿ ಏನೆಂದರೆ, ಜನರಿಗೆ ನೀರು ಬರಲಿ, ಇವರಿಬ್ಬರ ಮಾತು ಉಳಿಯಲಿ ಎಂದು. ಈಗ

ಏನಾಗಿದೆಯೆಂದರೆ, ಮಾನ್ಯ ಮುಖ್ಯಮಂತ್ರಿಯವರು ಮಾತು ಉಳಿಸುವುದು ಅಥವಾ ಅವರು ತಲೆ ಬೋಳಿಸಿಕೊಳ್ಳುವುದು ಯಾರ ಕೈಯಲ್ಲಿದೆ ಎಂದರೆ ಮಾನ್ಯ ಎಂ.ಬಿ. ಪಾಟೀಲ್‌ರವರ ಕೈಯಲ್ಲಿದೆ. ಅವರು ಏನು ಮಾಡುತ್ತಾರೋ ನೋಡೋಣ, ಅವರು ತಲೆ ಬೋಳಿಸುವಂತೆ ಮಾಡುತ್ತಾರೋ, ಅವರ ಮಾತು ಉಳಿಸುವಂತೆ ಮಾಡುತ್ತಾರೋ?

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಅವರಿಬ್ಬರೂ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ಇಲ್ಲ, ನಮ್ಮ ನಾಯಕರೂ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಅವರು ಹೇಳಿದ್ದು, ಸುಳ್ಳಾ? ಅವರು ಸದನದಲ್ಲೂ ಹೇಳಿದ್ದಾರೆ, ಟಿ.ವಿ. ಯಲ್ಲಿ ಎಲ್ಲರಿಗೂ ಹೇಳಿದ್ದಾರೆ, challenge ಇರಲಿ, ತಪ್ಪು ಏನೂ ಇಲ್ಲ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಬಸವರಾಜ ಅಣ್ಣಾ ಅವರೆ, UKP ಕೃಷ್ಣಾಗೆ ಯಾರು ತಲೆ ಬೋಳಿಸಿಕೊಳ್ಳುತ್ತೇನೆ, ಮಾಡುತ್ತೇನೆಂದು ಹೇಳಿಲ್ಲ. ಅಲ್ಲಿ 3ನೇ ಹಂತಕ್ಕೆ 1960 ಯಿಂದ ಜನರು ಕಾಯುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ:– ಅಲ್ಲಿ ತಲೆ ಬೋಳಿಸಿಕೊಳ್ಳುವುದಲ್ಲ, ತಲೆ ಕೆಡಿಸಿಕೊಂಡರೆ ಆಗುತ್ತದೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಕೃಷ್ಣೆ ಕಣ್ಣೀರು ಹಾಕುತ್ತಿದ್ದಾಳೆ, ಅಲ್ಲಿ ಜನರು ಕೂಗುತ್ತಿದ್ದಾರೆ. ಆದರೆ ಅದರ ಬಗ್ಗೆ ಯಾರೂ challenge ಮಾಡುತ್ತಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಅದಕ್ಕೆ ಮಾನ್ಯ ಎ.ಎಸ್. ಪಾಟೀಲ್ (ನಡಹಳ್ಳಿ) ಯವರನ್ನು ಬಿಟ್ಟಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹೆಚ್.ಕೆ. ಪಾಟೀಲ್‌ರವರು 'ಕೃಷ್ಣೆ ಕಣ್ಣೀರು' ಎಂದು ಒಂದು ಪುಸ್ತಕವನ್ನು ಬರೆದಿದ್ದಾರೆ. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಕಣ್ಣೀರು ಹರಿಸಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಪಾಪ ಅವರು ಪ್ರಯತ್ನ ಮಾಡಿದ್ದಾರೆ, ಆದರೆ ಫಲ ಸಿಕ್ಕಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಬಿ.ಆರ್. ಪಾಟೀಲ್‌ರವರೆ, ನೀವೆಲ್ಲಾ ಹಿರಿಯ ನಾಯಕರು, ಕನಿಷ್ಟ ಪಕ್ಷ ಕರ್ನಾಟಕ ಜನತೆಯ ಆಕರ್ಷಣೆಯನ್ನು ಸೆಳೆದಿರುವಂಥ ಪುಸ್ತಕದ ಹೆಸರು, ಅದನ್ನು ರಾಜಕೀಯವಾಗಿ ಯಾರ್‍ಯಾರೂ ಮಾಡಬಾರದು.

ಶ್ರೀ ಬಿ.ಆರ್. ಪಾಟೀಲ್:– ನಾನು ಅದನ್ನು ಬಹಳ ಗೌರವದಿಂದ ಓದಿದ್ದೇನೆ. ನಾನು ತಮ್ಮ chamber ಗೆ ಒಂದು ಪುಸ್ತಕ ತೆಗೆದುಕೊಂಡು ಹೋಗಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್:– ಒಂದು ಸೆಕೆಂಡ್, ರಾಜಕೀಯವಾಗಿ ಯಾರ್‍ಯಾರು ಏನೇನು ಹೇಳುತ್ತಾರೋ, ಅದನ್ನು ಬಿಡೋಣ. ಆದರೆ ಆ ಪುಸ್ತಕದ ಹೆಸರು "ಕೇಳಿ ಕೃಷ್ಣೆ ಕೂಗು" ಎಂದು ಇರುವುದು.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಆ ಕೂಗು ಯಾರೂ ಕೇಳುತ್ತಿಲ್ಲವಲ್ಲಾ, ಅದೇ ಸಮಸ್ಯೆ ಆಗಿರುವುದು.

ಶ್ರೀ ಎಂ.ಟಿ. ಕೃಷ್ಣಪ್ಪ:– ನೀವು ಇದ್ದೀರಲ್ಲಾ, ಕೇಳುತ್ತಿದ್ದೀರಲ್ಲಾ...

ಉಪಾಧ್ಯಕ್ಷರು:– ಮಾನ್ಯ ಬಸವರಾಜ ಬೊಮ್ಮಾಯಿಯವರೆ, ತಾವು conclude ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಉಪಾಧ್ಯಕ್ಷರೆ, ಎತ್ತಿನಹೊಳೆ ಬಗ್ಗೆ ಭರವಸೆ ಮೂಡುವ ರೀತಿಯಲ್ಲಿ ಮಾಡಬೇಕು. ನಾನು ಈಗಾಗಲೇ ಹೇಳಿರುವಂತೆ ಹದಿನೈದು ನೂರು ಕೋಟಿ ರೂ. ಗಳ ಬಗ್ಗೆ ಬಜೆಟ್‌ನ paragraph ನಲ್ಲಿ ಹೇಳಿದ್ದೀರಿ, ಅದು appendix ನಲ್ಲಿ ಬಂದಿಲ್ಲ. ಅದು ಒಟ್ಟಾರೆ KNNL ನಲ್ಲಿದೆ, ಆದ್ದರಿಂದ ಈ ಹದಿನೈದು ನೂರು ಕೋಟಿ ರೂ. ಗಳನ್ನು ಬಜೆಟ್‌ನಿಂದ ಹೊರತು ಪಡಿಸಿ ಮಾಡಿದರೆ ಮಾತ್ರ, ಅದು ಎತ್ತಿನಹೊಳೆಗೆ ಹೋಗುತ್ತದೆ. ಅದನ್ನು ಎಲ್ಲದರಲ್ಲೂ ಸೇರಿಸಿದರೆ ಹದಿನೈದು

ನೂರು ಕೋಟಿ ರೂ. ಗಳು ಖರ್ಚಾಗುವುದಿಲ್ಲ, ಪ್ರಗತಿಯಾಗುವುದಿಲ್ಲ. ಅದು ತಮಗೂ ಗೊತ್ತಿದೆ, ಆದ್ದರಿಂದ ತಾವು ಮಾನ್ಯ ಮುಖ್ಯಮಂತ್ರಿಯವರ ಬಳಿ ಯಾವ ಪ್ರಭಾವ ಬೀರುತ್ತಿರೋ ಗೊತ್ತಿಲ್ಲ. ಮಾನ್ಯ ಜಾರ್ಜ್‌ರವರ ಸಹಾಯ ತೆಗೆದುಕೊಳ್ಳುತ್ತಿರೋ ಗೊತ್ತಿಲ್ಲ, ತಾವು ಮಾನ್ಯ ಜಾರ್ಜ್‌ರವರ ಸಹಾಯವನ್ನು ತೆಗೆದುಕೊಳ್ಳಿ.

ಶ್ರೀ ಎಂ.ಬಿ. ಪಾಟೀಲ್:– Last time ಕೂಡ ಎತ್ತಿನಹೊಳೆಗೆ 400 ಕೋಟಿ ರೂ. ಗಳಿದ್ದಾಗಲೂ 700 ಕೋಟಿ ರೂ. ಗಳನ್ನು excess ಆಗಿ ಖರ್ಚು ಮಾಡಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ:– ಗೊತ್ತಾಯಿತು, 700 ಕೋಟಿ ರೂ. ಗಳು ಎಲ್ಲಿಂದ ಬಂತು? ಅದಕ್ಕೆ ಎಷ್ಟು payment ಆಯಿತು? ಯಾವಾಗ ಆಯಿತೆಂಬುದನ್ನು detail ಆಗಿ ಮಾತನಾಡೋಣ, ಏನೇನು ಬಂದಿದೆ, ಏನೇನು ಬಂದಿಲ್ಲವೆಂಬುದು, ಅದರಿಂದ ಯಾವ್ಯಾವ ಯೋಜನೆಗಳು ಏನೇನು ಆಯಿತೆಂಬುದು ನನಗೆ ಗೊತ್ತಿದೆ, ಹಾಗೆ ಆಗಬಾರದು. ಇಲ್ಲಿ ನಮ್ಮ ಉದ್ದೇಶವೆನೆಂದರೆ, KNNL ನಲ್ಲಿರುವಂಥ ಇತರ ಎಲ್ಲಾ ಯೋಜನೆಗಳಿಗೂ ಹಣ ಬರಬೇಕು, ಎತ್ತಿನ ಹೊಳೆಗೂ ಹಣ ಬರಬೇಕು.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಆ ಭಾಗದ ಎಲ್ಲಾ ಯೋಜನೆಗಳನ್ನು pending ಇಟ್ಟು, ಆ ಯೋಜನೆಗಳನ್ನು ಬಂದ್ ಮಾಡಿ, ಇದಕ್ಕೆ ಹಣ ಹಾಕಿರುವುದು.

ಶ್ರೀ ಬಸವರಾಜ ಬೊಮ್ಮಾಯಿ:– KNNL ನಲ್ಲಿ ಕಡಿಮೆಯಾಗುತ್ತದೆ ಎಂದ ತಕ್ಷಣ ಮಾನ್ಯ ಯಾವಗಲ್‌ರವರು ಎದ್ದರು. ಮಲಪ್ರಭಾ ಯೋಜನೆಗೆ ಅವರ demand ಇದೆ, ಇನ್ನೂ 400 ಕೋಟಿ ರೂ. ಗಳನ್ನು ಖರ್ಚು ಮಾಡಬೇಕೆಂದು ಇದೆ. ಘಟಪ್ರಭಾ ಯೋಜನೆಗೆ ಇನ್ನೂ ಹಣವಿದೆ, ಮಲಪ್ರಭಾಕ್ಕೆ Right and Left Bank canal, sub distributaries pl drip ಹೀಗೆ modernization ಮಾಡುತ್ತೇವೆಂದು ಬೇರೆ ಅವರಿಗೆ ನೀವು ಹೇಳಿ ಬಿಟ್ಟಿದ್ದೀರಿ. ಆ Drip ಗೆ 500 ಕೋಟಿ ರೂ. ಗಳು, ಹಾಗಾಗಿ ಮಾನ್ಯ

ಯಾವಗಲ್‌ರವರು ಆಸೆ ಇಟ್ಟುಕೊಂಡು ಕುಳಿತಿದ್ದಾರೆ, ಅದಕ್ಕೆ ಎಲ್ಲಿಂದ ಹಣ ತರುತ್ತೀರಿ?

ಶ್ರೀ ಬಿ.ಆರ್. ಯಾವಗಲ್:- ತಾವು ಸಹ ಆ ಭಾಗದಿಂದ ಬಂದಿರುವವರು, ಅದರ ಬಗ್ಗೆ ಬಹಳಷ್ಟು ಹೋರಾಟ ಮಾಡಿದಂಥವರು, ನೀರು ಹೆಚ್ಚು ಬರಲಿ ಎಂದು ರಕ್ತದಲ್ಲಿ ಸಹಿ ಮಾಡಿ ಕೊಟ್ಟಂಥವರು. ತಮ್ಮ ಕಳಕಳಿಯನ್ನು ನಾನು ಒಪ್ಪುತ್ತೇನೆ, ತಾವು ಇದ್ದಾಗ ಕೆಲಸ ಹೆಚ್ಚಿಗೆ ಮಾಡಿದ್ದೀರಿ. ಆದರೆ ಅದನ್ನು ಸಮಗ್ರವಾಗಿ ನೋಡಲಿಲ್ಲ, ಅದು ಒಂದು ರೀತಿಯಲ್ಲಿ ಎಲ್ಲರಿಗೂ "ಬೇಡವಾದ ಕೂಸು" ಎನುವ ಹಾಗೆ ಆಯಿತು.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ:- ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಮೊನ್ನೆ ಮಾನ್ಯ ನೀರಾವರಿ ಮಂತ್ರಿಯವರು ಮಲಪ್ರಭ ವಿಷಯವಾಗಿ ಮೀಟಿಂಗ್ ಕರೆದಂಥ ಸಂದರ್ಭದಲ್ಲಿ ಹಿರಿಯ ಸದಸ್ಯರಾದಂಥ ಮಾನ್ಯ ಬಿ.ಆರ್. ಯಾವಗಲ್‌ರವರು ವಿಷಯವನ್ನು ಪ್ರಸ್ತಾಪ ಮಾಡಿದರು. ಆವತ್ತು Chief Engineer ಎಸ್.ಆರ್. ಪಾಟೀಲ್‌ರವರು 500 ಕೋಟಿ ರೂ. ಗಳ ಕಾಮಗಾರಿಯನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಇಷ್ಟು ಕಿ.ಮೀ. ಗಳ ಕಾಮಗಾರಿಗಳನ್ನು ಮುಗಿಸಿದ್ದೇವೆಂಬ ಮಾತನ್ನು ಹೇಳಿದಾಗ, ಮಾನ್ಯ ಯಾವಗಲ್‌ರವರು ಯಾವಾಗ ಟೆಂಡರ್ ಆಯಿತು, ಯಾವಾಗ ಕೆಲಸವಾಯಿತು, ಏನೇನು ಆಯಿತೆಂಬ ಮಾತನ್ನು ಕೇಳಿದರು. ನಾನು Chief Engineer ಎಸ್.ಆರ್. ಪಾಟೀಲ್‌ರವರಿಗೆ ಅದು 2012-13, 2013-14 ರಲ್ಲಿ ತೆಗೆದುಕೊಂಡ ಕಾಮಗಾರಿಗಳಾಗಿದ್ದು, ಅದು ಮುಂದುವರೆದ ಭಾಗವಾಗಿ ಈ ಕೆಲಸವನ್ನು ಮಾಡಿದ್ದೀರೆಂದು ಹೇಳಿದೆ. ಆಗ ಮಾನ್ಯ ಸಚಿವರು ನಿಮ್ಮ ಕಾಲದಲ್ಲಿ ಆದಂಥ ಟೆಂಡರ್ ಅಮೌಂಟ್ ಅನ್ನು ನಾವು ಪೇಮೆಂಟ್ ಮಾಡುತ್ತಿದ್ದೇವೆಂದು ಹೇಳಿದರು. ಅವತ್ತು ಸಹ ನೀರಾವರಿ ಮಂತ್ರಿಗಳಿದ್ದಂಥ ಸಂದರ್ಭದಲ್ಲಿ ಮಾನ್ಯ ಯಾವಗಲ್‌ರವರು ಮಲಪ್ರಭ ಅಚ್ಚುಕಟ್ಟು ಪ್ರಾಧಿಕಾರಗ right bank and left bank ಗಳ ಬಹಳ ಕಳಕಳಿಯನ್ನು ವ್ಯಕ್ತಪಡಿಸಿದರು.

ಶ್ರೀ ಬಿ.ಆರ್. ಯಾವಗಲ್:– ತಾವು ಹೇಳಿರುವಂಥ ಮಾತನ್ನು ನಾನು ಒಪ್ಪುತ್ತೇನೆ. ತಮ್ಮ ಕಾಲದಲ್ಲಿ ಮಾಡಿದ್ದೀರಿ, ಆದರೆ ಹಿಂದಿನ ಕಾಲದಲ್ಲಿ ಎಲ್ಲರೂ ಮಾಡಿಕೊಂಡು ಬಂದಿದ್ದು, ನಿಮ್ಮ ಕಾಲದಲ್ಲೂ ಬಂದಿದೆ. ನಾನು ಹೇಳುವುದೇನೆಂದರೆ, ಅದು ಅಷಕ್ಕೇ ನಿಲ್ಲಬಾರದು, ಅದರ ಶಾಪವನ್ನು ಮುಕ್ತಿ ಮಾಡುವುದಕ್ಕೆ ಏನೇನು ಬೇಕೋ ಅದನ್ನು ನಾವು ನೀವು ಒತ್ತಾಯ ಮಾಡೋಣ.

ಶ್ರೀ ಬಸವರಾಜ ಬೊಮ್ಮಾಯಿ:– Yes, ಈಗ ಏನಾಗಿದೆಯೆಂದರೆ, ನಾವು AIBP Scheme ನಲ್ಲಿ 330 ಕೋಟಿ ರೂ. ಗಳನ್ನು ತಂದು ಬಳಕೆ ಮಾಡಿದೆವು. ಈಗ AIBP ಮುಂದುವರೆದ ಭಾಗ ಅಲ್ಲಿಗೆ ಮುಗಿದು ಹೋಯಿತು. ನಾನು ಈಗ AIBP ಬಗ್ಗೆ ಮಾತನಾಡುತ್ತೇನೆ, ಬದಲಾದ ಪರಿಸ್ಥಿತಿಯಲ್ಲಿ AIBP ಏನಾಗಿದೆಯೆಂಬುದನ್ನು ಹೇಳುತ್ತೇನೆ, ಹೀಗಾಗಿ ಅದು ಸಮಸ್ಯೆಯಾಗಿದೆ. ಅದು ಏನಿದ್ದರೂ capital account ನಲ್ಲಿ ರಾಜ್ಯ ಸರ್ಕಾರವೇ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಮುಂದುವರೆದ ಭಾಗವಾಗುವುದಿಲ್ಲ, ಮತ್ತೆ ಹಳೆ ಕತೆಯಾಗುತ್ತದೆ. ಈಗ ಮಲಪ್ರಭಾದಲ್ಲಿ ವಿಶೇಷವಾಗಿ ಹಿಂದಿನ ಸಂದರ್ಭದಲ್ಲಿ ಸುಮಾರು 35 ವರ್ಷಗಳಿಂದ ಕೆನಾಲ್‌ಗಳು ಏನಾಗಿದೆ, ಆ ಸಂದರ್ಭದಲ್ಲಿ Black Cotton Soil ಅಲ್ಲಿದೆ, ಅದನ್ನು consider ಮಾಡದೇ ಕೆನಾಲ್ ಮಾಡಿದ್ದರಿಂದ ಅವೆಲ್ಲಾ ನೆಲ ಸಮವಾಗಿದೆ. ಈಗ ನೀರು ಬಿಟ್ಟರೆ ನೇರವಾಗಿ ಹೊಲಕ್ಕೆ ಬರುತ್ತದೆಯೇ ಹೊರತು ಕೆನಾಲ್ ಮುಖಾಂತರ ಬರುವುದಿಲ್ಲ, Tail end ಗಂತೂ ಕಂಡಿಲ್ಲ, ರೋಣ ತಾಲ್ಲೂಕಿಗೆ ಬರುವಂಥದ್ದು ಬಹಳ ದುಸ್ಥಿತಿಯಲ್ಲಿದೆ.

ಶ್ರೀ ಬಿ.ಆರ್. ಯಾವಗಲ್:– 1973 ರಲ್ಲಿ ಬರಗಾಲದ ಟೈಮ್‌ನಲ್ಲಿ ಕುಡಿಯುವ ನೀರಿಗೆ ಮತ್ತು ಏನಾದರೂ ಬೆಳೆ ಬೆಳೆದುಕೊಳ್ಳುವುದಕ್ಕೆ ಮಾಡಿರುವಂಥ ಕಾಲುವೆಗಳೇ ಕಾಲುವೆಗಳಾಗಿದೆ, ಇದು ತಮಗೂ ಗೊತ್ತಿದೆ.

ಉಪಾಧ್ಯಕ್ಷರು:– ಮಾನ್ಯ ಬಸವರಾಜ ಬೊಮ್ಮಾಯಿಯವರೆ, ತಾವು ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಉಪಾಧ್ಯಕ್ಷರೆ, ಕಾವೇರಿ ಜಲಾನಯನ ಪ್ರದೇಶದಲ್ಲೂ ಕೂಡ ಅಷ್ಟೆ, ಮಾಧವ ಮಂತ್ರಿ ಕೂಡಲೇ ಮಾಡುತ್ತೇವೆ, urgent ಮಾಡುತ್ತೇವೆಂದು ಹೇಳಿದ್ದೀರಿ, ಅದರಲ್ಲಿ ಎಲ್ಲಿದೆ ಪ್ರಗತಿ? ಮಾಧವ ಮಂತ್ರಿಯಲ್ಲಿ ಏನು ಪ್ರಗತಿಯಾಗಿದೆ. 700 ವರ್ಷದ್ದು ಅದು ಡ್ಯಾಮೇಜ್ ಆದಾಗ ತಾವು ಕೂಡಲೇ ಮಾಡುತ್ತೇವೆಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಇಲ್ಲಿ ಏನಾದರೂ ಪ್ರಗತಿಯಾಗಿದೆಯೇ? ಏನೂ ಕೂಡ ಆಗಿರುವುದಿಲ್ಲ. ಮಹಾರಾಜ ಆಣೆಕಟ್ಟುಗಳು ನಾವು ಇದ್ದಂತಹ ಸಂದರ್ಭದಲ್ಲಿ ಮಾಡಿದಂತಹ ವೇಗ ಇವತ್ತಿನ ದಿವಸ ಆ ವೇಗ ಅಲ್ಲಿ ಇಲ್ಲ. ನೀವು ಉತ್ತರ ಕೊಡುವಾಗ ಈ ಬಗ್ಗೆ ಹೇಳಿ. ನಾವು ಎಷ್ಟಕ್ಕೆ ಕೊಟ್ಟಿದ್ದೇವೆ, ಅಲ್ಪಾವಧಿಯಲ್ಲಿ ಎಷ್ಟು ಮುಗಿಸಿದ್ದೇವೆ ನಾವು ಇದ್ದಾಗ ಎಷ್ಟಕ್ಕೆ approval ಕೊಟ್ಟಿದ್ದೇವೆ ನೀವು ಬಂದ ಮೇಲೆ ಎಷ್ಟಕ್ಕೆ administration sanction ಕೊಟ್ಟಿದ್ದೀರಿ ಎಷ್ಟು ಕಿ.ಮೀ. ಅನ್ನು ಯಾವುದರಲ್ಲಿ ಮಾಡಿದ್ದೇವೆ ಎಂಬುವುದರ ಬಗ್ಗೆ ಹೇಳಿ. ಮಹಾರಾಜ ಆಣೆಕಟ್ಟನ್ನು ತಾವು ಏನು ಮಾಡಿದ್ದೀರಿ? ಹೇಮಾವತಿಗೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇನ್ನೊಂದು ಆಗಿದೆ. ಅವರು ಎಷ್ಟು ಕೆಲಸ ಮಾಡುತ್ತಾರೋ ಬಿಡುತ್ತಾರೋ ಗೊತ್ತಿಲ್ಲ ಇಲ್ಲಿ ಮಂತ್ರಕ್ಕಿಂತ ಉಗುಳೇ ಜಾಸ್ತಿ ಆಗಿದೆ. ಹೇಮಾವತಿಯನ್ನು ನಾವು modernization ಮಾಡಿಬಿಡುತ್ತೇವೆಂದು ನಮ್ಮ ಕಾನೂನು ಸಚಿವರು ಬಂದ ತಕ್ಷಣ ಹೇಳಿದರು ತಮಿಳುನಾಡಿನ ಮುಖ್ಯಮಂತ್ರಿಯಾದ ಕು. ಜಯಲಲಿತಾರವರು ಯಾವುದೇ ಕಾರಣಕ್ಕೂ modernization ಮಾಡಬಾರದು ಎಂದು ಪತ್ರ ಬರೆದರು. ಇದಕ್ಕೆ ರಾಜ್ಯದ ಜನರು ಕನ್ನಡ ಚಳುವಳಿಗಾರರು ಬೆಂಗಳೂರು ಬಂದ್ ಅನ್ನು ಒಂದು ದಿವಸ ಮಾಡಿದರು. ಬರೀ DPR ಮಾಡುವಂತಹ ವಿಚಾರದಲ್ಲಿ ವೀರಾವೇಶದ ಮಾತುಗಳನ್ನು ಆಡಿ ಅದಕ್ಕೂ ಕೂಡ ತಮಿಳುನಾಡಿನವರು objection ಹಾಕುವ ರೀತಿಯಲ್ಲಿ ಮಾಡಿದರು. ಮೇಕೆದಾಟು ಯೋಜನೆಯನ್ನು ಮಾಡಿ ಯಾರು ಬೇಡ ಅನ್ನುತ್ತಾರೆ. ಆದರೆ DPR ಮಾಡುವುದಕ್ಕ ಇಷ್ಟು ನೀವು ಹೇಳಿಕೆಗಳನ್ನು ಕೊಟ್ಟು ಗೊಂದಲ ಹಿಡಿಸಿ ಜನರನ್ನು ಬೀದಿಗೆ ಎಳೆದ ನೀವು ನಿಮ್ಮ ಇಲಾಖೆಯ ಮಟ್ಟದಲ್ಲಿ DPR ಮಾಡಿ. ನಾವು ಚಾಮರಾಜನಗರವನ್ನು

ಮಾಡಿದೆವು ಹೇಳಿಕೆಯನ್ನು ಕೊಟ್ಟಿದ್ದೇವಾ? ಅಲಿ ಅಡಿಗಲ್ಲು ಹಾಕುವುದಕ್ಕೆ ಹೋದೆವಾ? ಅಲ್ಲಿ ಕೆಲಸವು ಪೂರ್ತಿಯಾಗಿದೆ. ಮಹಾರಾಜ ಆಣೆಕಟ್ಟು ಆಗುವಂತಹ ಸಂದರ್ಭದಲ್ಲಿ ಒಂದು ಕಾಲದಲ್ಲಿ ತಮಿಳುನಾಡಿನವರು objection ಹಾಕಿದರು, ಯಾವುದೇ modernization ತೆಗೆದುಕೊಳ್ಳಬಾರದು ಮತ್ತು ಕೆರೆಗಳಲ್ಲಿ ಹೂಳು ತೆಗೆಯಬಾರದು ಎಂದು Government of India ದವರು objection ಮಾಡಿದರು. ನಾವು ಕೆರೆಗಳ ಕೆಲಸವನ್ನು ಹಾಗೂ Modernization ಕೆಲಸವನ್ನು ಮಾಡಿದೆವು ಆಗ ನಾವು ಈ ಬಗ್ಗೆ ಸುದ್ದಿ ಮಾಡಿದ್ದೇವಾ? ನೀವು ಸುದ್ದಿಮಾಡಿ ಕೈಗೆ ಹಗ್ಗ ಕಟ್ಟಿಸಿಕೊಳ್ಳುವಂತಹ ಕೆಲಸವನ್ನು ಏತಕ್ಕಾಗಿ ಮಾಡುತ್ತೀರಿ? Cauvery is sensitive, Krishna is sensitive and interstate issue. ಆ ಜವಾಬ್ದಾರಿಯನ್ನಿಟ್ಟುಕೊಂಡು ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲಿ ಆಂಧ್ರ ಮತ್ತು ತಮಿಳುನಾಡಿನವರು ಏನು ಮಾಡುತ್ತಾರೆ ಅವರು ಎಲ್ಲಾ ಯೋಜನೆಗಳನ್ನು ಮಾಡುತ್ತಾರೆ ಆದರೆ ಎಲ್ಲಿಯಾದರೂ ಒಂದು ಕಡೆ ಸುದ್ದಿ ಬರುತ್ತದೆಯಾ? ಆದ್ದರಿಂದ ಈ ಬಗ್ಗೆ interstate ಅನ್ನು ಹೇಗೆ ನಿರ್ವಹಣೆ ಮಾಡಬೇಕೆನ್ನುವ maturity ಬೇಕಲ್ಲವೇ? ಇನ್ನೂ DPR ಆಗಿರಲಿಲ್ಲ. ಹೇಮಾವತಿಯದನ್ನು ನಾವು modernization ಮಾಡುತ್ತೇವೆಂದು ಕಾನೂನು ಸಚಿವರು ಹೇಳಿಕೆಯನ್ನು ಕೊಡುತ್ತಾರೆ. ನೀವು modernization ಮಾಡಿ ಯಾರು ಬೇಡವೆನ್ನುತ್ತಾರೆ, Kabini Modernization ಮಾಡಿದ್ದೇವೆ more than 100 k.m. Modernization ನಮ್ಮ ಕಾಲದಲ್ಲಿ ಮಾಡಿದ್ದೇವೆ ಏನಾದರೂ objection ಬಂತಾ, ವಿಶ್ವೇಶ್ವರಯ್ಯ canal distributary modernization 550 k.m. ಮಾಡಿದ್ದೇವೆ ವಿ.ಸಿ. ನಾಲೆಯದು ಬರೀ main canal ಆದ ಮೇಲೆ ಯಾರೂ ಮುಟ್ಟಿರಲಿಲ್ಲ ಅದನ್ನು ಮಾಡಿದ್ದೇವೆ ಯಾವುದಾದರೂ objection ಬಂತಾ? ಹೇಮಾವತಿಯದನ್ನು ನೀವು ಇನ್ನು ಮಾಡಿಯೇ ಇಲ್ಲ ಆಗಲೇ ಈ ಬಗ್ಗೆ ನೀವು ಈ ಬಗ್ಗೆ ಮಾತನಾಡಿದ್ದೀರಿ ಅದಕ್ಕಾಗಿ ತಮಿಳುನಾಡಿನವರು ಪತ್ರವನ್ನು ಬರೆದರು. ನೀವು ಮೈಮೇಲ ಎಳೆದುಕೊಳ್ಳುವಂತಹ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ನೀವು ರಾಜ್ಯದ ಹಿತರಕ್ಷಣೆಯನ್ನು ಮಾಡುವಾಗ ಕೆಲವೊಂದು ಸಂದರ್ಭದಲ್ಲಿ ನಾವು ಕೆಲಸವನ್ನು ಮಾಡಬೇಕಾಗುತ್ತದೆ ಅದರ ಬಗ್ಗೆ

ಮಾತನಾಡುವಂತಹ ಅವಶ್ಯಕತೆ ಇಲ್ಲ. We are mid riparian and upper riparian ಇದನ್ನು ಅರ್ಥಮಾಡಿಕೊಂಡು ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮ ಮಂತ್ರಿಮಂಡಲದ ಸದಸ್ಯರ ನಡುವೆ ಒಂದು co-ordination ಆದರೂ ಮಾಡಿ ಎಂದು ಹೇಳಬೇಕೆಂದು ಇದ್ದೆ. ಆದರೆ ಅವರವರ ಪೈಪೋಟಿಯಲ್ಲಿ ನಮ್ಮ ನೀರಾವರಿ ಯೋಜನೆಗಳು ಸಾಯಬಾರದು ಎಂದು ನಮ್ಮ ಕಳಕಳಿಯಾಗಿದೆ. ಹೊಸ ಯೋಜನೆಗಳಿಗೆ ಕೆಂಪವಾಡ, ವೀರಭದ್ರೇಶ್ವರ, ವೆಂಕಟೇಶ್ವರ ಪಿರಾಪುರ್, ಬೂದಿಹಾಳ, ತುಬಚಿ–ಬಬಲೇಶ್ವರ ಈ ಬಗ್ಗೆ ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– Asian Tender ಏಷ್ಯಾದಲ್ಲಿಯೇ ದೊಡ್ಡ ಮಟ್ಟದಲ್ಲಿಯೇ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದರ ಜೊತೆಗೆ ನಮ್ಮದಷ್ಟು ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಪಾಟೀಲ್‌ರವರೆ, ನೀನು ಅವರ ಪಕ್ಕದಲ್ಲಿಯೇ ಇದ್ದೀಯಾ ನಿನ್ನದನ್ನು ಅವರು ಮಾಡುತ್ತರೆಂಬ ಬಗ್ಗೆ ನನಗೆ ವಿಶ್ವಾಸ ಇದೆ. ಹಾಗೆಲ್ಲಾ ಅವರು ತಾರತಮ್ಯ ಮಾಡುವುದಿಲ್ಲ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:– ನೀವು ಇದ್ದಾಗ 1 ಟಿಎಂಸಿ ನೀರನ್ನು ಕೊಟ್ಟಿದ್ದೀರಿ, ಅವರು ಎಷ್ಟು ಟಿಎಂಸಿ ಕೊಡುತ್ತಾರೆಂದು ನೋಡಬೇಕಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ:– ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ತುಬಚಿ ಬಬಲೇಶ್ವರ ಬಗ್ಗೆ ಎಷ್ಟು ಕಾಳಜಜಿ ಇದೆಯೋ, ಅಷ್ಟು ನಾನು 3–4 ಯೋಜನೆಗಳ ಬಗ್ಗೆ ಹೇಳಿದ್ದೇನಲ್ಲಾ ಕೆಂಪವಾಡ, ವೆಂಕಟೇಶ್ವರ, ವೀರಭದ್ರೇಶ್ವರ, ಪಿರಾಪುರ್–ಬೂದಿಹಾಳ, ಅಬ್ಬೆಫಾಲ್ಸ್ ಇದರ ಬಗ್ಗೆಯೂ ಸ್ವಲ್ಪ ಕಾಳಜಿಯನ್ನು ವಹಿಸಬೇಕು. ನಮ್ಮದು ಸವಣೂರು ಲಿಫ್ಟ್‌ದು ಇದೆ ಅದರ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ವಹಿಸಬೇಕು.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ಮಾನ್ಯ ಬೊಮ್ಮಾಯಿಯವರೆ, ನಮ್ಮನ್ನು ನೀವು sandwich ಮಾಡಿದವರು, ನಾರಾಯಣಪುರದ ಆಲಮಟ್ಟಿಯಲ್ಲಿ ಭೂಮಿಯನ್ನು ಕಳೆದುಕೊಂಡವರು ಮುದ್ದೇಬಿಹಾಳ ಮತ್ತು ಹುನಗುಂದ ತಾಲ್ಲೂಕಿನವರು major ಆಗಿ ಹಾಳಾದವರು. ಈ ಬಗ್ಗೆ ಒಬ್ಬರಾದರೂ ಗಮನಿಸಿದ್ದೀರಾ. ನಾವು ಈ ಬಗ್ಗೆ ನಿಮ್ಮ ಹತ್ತಿರ ಬಂದು ಹೇಳಿಕೊಂಡಾಗ ನೀವೂ ಸಹ ನಮ್ಮನ್ನು ಅಲಕ್ಷ್ಯ ಮಾಡಿದ್ದೀರಿ, ನಾವು drip ಮುಖಾಂತರ ನೀರು ಕೊಡಿ ಎಂದು ಹೇಳಿದರೆ ನೀವು ಅದನ್ನು ತೆಗೆದುಕೊಂಡು ನಿಮ್ಮ ಮತಕ್ಷೇತ್ರಕ್ಕೆ micro irrigation ಪ್ರಾರಂಭ ಮಾಡಿದ್ದೀರಿ. ಆ ನಂತರ ರಾಮಟಾಲಾಕ್ಕೆ start ಮಾಡಿದ್ದೀರಿ. ನೀವು ಎಲ್ಲಾ ಕಡೆಯಲ್ಲಿಯೂ ಕಾನೂನುಬಾಹಿರವಾಗಿ ಮಾಡಿಕೊಂಡಿದ್ದೀರಿ. ನಮ್ಮದು legitimate right. Command ನಲ್ಲಿ ಇರುವಂತಹದ್ದು ಇದ್ದರೂ ಕೂಡ ಅದನ್ನು ಮಾಡುವುದಕ್ಕಾಗಲಿಲ್ಲ. ಎತ್ತರಪ್ರದೇಶದಲ್ಲಿರತಕ್ಕಂತಹವರು ಭೂಮಿಯನ್ನು ಕಳೆದುಕೊಂಡವರಿಗೆ Micro irrigation pickup dams ಮಾಡಿ ಕೊಡಿ ಎಂದು ಹೇಳಿದಾಗ ಆಗ ನೀವು ತಾತ್ವಿಕವಾಗಿ ಒಪ್ಪಿಕೊಂಡು model ಆಗಿ ಮಾಡೋಣ ಎಂದು ಹೇಳಿದ್ದೀರಿ. ಆದರೆ ಇವತ್ತಿನವರೆಗೂ ಆ model ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ನಾವು ಕಣ್ಣಾರೆ ನೋಡೇ ಇಲ್ಲ.

ಉಪಾಧ್ಯಕ್ಷರು:– ಮಾನ್ಯ ಬೊಮ್ಮಾಯಿಯವರೆ ತಾವು ಬೇಗ conclude ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:– ನೀವು ನಮ್ಮ ಅವಧಿಯ ಕೊನೆಗೆ ಬಂದಾಗ ಹೇಳಿದಿರಿ ಅದಕ್ಕೆ ನಾನು ಒಪ್ಪಿಕೊಂಡೆ ಈಗಲಾದರೂ ನಿಮ್ಮ ಮಂತ್ರಿ ಮಂತ್ರಿಗಳು ಇದ್ದಾರೆ ನೀವು ಮಾಡಿಕೊಳ್ಳಿ, ನಾನು Micro Irrigation Pilot ಅಷ್ಟನ್ನೇ ಮಾಡಿದೆ. ಇದು ನಮ್ಮದಲ್ಲ, ಶಿಗ್ಗಾಂವ್–ಸವಣೂರು ಆದ ಮೇಲೆ ಸಿಂಗಟಾಲೂರು proposals, ಕೊಪ್ಪಳ ನಂದವಾಡಗಿ, NLBC ರಾಮಟಾಲ, ಒಟ್ಟು ಸುಮಾರು 7 ಲಕ್ಷ ಎಕರೆ ತುಂಗಾಭದ್ರಾದಿಂದ ಕೃಷ್ಣಾ ನದಿಗುಂಟ Micro Irrigation ಅನ್ನು ಅನ್ನು ನಾವು approve ಮಾಡಿದ್ದೇವೆ. ಅಷ್ಟು ಬಂದರೆ 100 food processing plant ಬರುತ್ತದೆ ಆಗ mini

ಪಂಜಾಬ್ ಆಗುತ್ತದೆ ಎಂದು ನಾವು ದೂರದೃಷ್ಟಿಯನ್ನಿಟ್ಟುಕೊಂಡು ಮಾಡಿರುವಂತಹದಾಗಿದೆ. ಅದನ್ನು ಇವರು ಮುಂದುವರೆಸಿಕೊಂಡು ಹೋಗಿದ್ದಾರೆ. ಅದರಲ್ಲಿ ಬಬಲೇಶ್ವರದನ್ನು add ಮಾಡಿದ್ದಾರೆ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ಇಲ್ಲಿ ವ್ಯಥೆ ಏನೆಂದರೆ ಆ ಸಂದರ್ಭದಲ್ಲಿ ಸಂತ್ರಸ್ತರು ಯಾರು ಇದ್ದಾರೆ ಎನ್ನುವುದು ಮೊದಲು ನೀವು ಆದ್ಯತೆಯನ್ನು ಕೊಡಬೇಕಾಗಿತ್ತು. Project ಬಗ್ಗೆ ತ್ಯಾಗ ಮಾಡಿದವರ ಬಗ್ಗೆ ನೀವು ಯಾರೂ ಮಾತನಾಡುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ನೀವು command area ದಲ್ಲಿದ್ದವರು ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– Command ಎಲ್ಲಿದೆ? ಹೇಳಿ ನೋಡೋಣ. ನಮ್ಮ command ಎಂದರೆ totally ಇರುವಂತಹದ್ದು 40% ಕೊಡುವುದಕ್ಕೆ ಆಗುತ್ತಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ನೀವು ಈಗ ಮಾಡಿಸಿಕೊಳ್ಳಿ, ನಿಮ್ಮ ಜಿಲ್ಲೆಯವರೇ ಮಂತ್ರಿಗಳಾಗಿದ್ದಾರೆ, ನಿಮಗೆ ಅತ್ಯಂತ ಹತ್ತಿರದವರಾಗಿದ್ದಾರೆ. ನೀವು ಈಗ ಮಾಡಿಸಿಕೊಳ್ಳದೇ ಇನ್ಯಾವಾಗ ಮಾಡಿಸಿಕೊಳ್ಳುತ್ತೀರಿ?

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ಇದು ನಮ್ಮ ಹಣೆಬರಹ. ನಾನು ಹೋದ ಸಲವೇ ಹೇಳಿದ್ದೇನೆ. ನಾವುಗಳು ಭೂಮಿಯನ್ನು ಕಳೆದುಕೊಂಡಿದ್ದೇವೆ. ನಮ್ಮ ಆಸ್ತಿಯನ್ನು ಕಳೆದುಕೊಂಡಿದ್ದೇವೆ. ನಾವೆಲ್ಲರೂ ನಿರ್ಗತಿಕರಾಗಿದ್ದೇವೆ. ನಿರ್ಗತಿಕರನ್ನು ಯಾರು ಕೇಳುತ್ತಾರೆ?

ಶ್ರೀ ಬಸವರಾಜ ಬೊಮ್ಮಾಯಿ:– ಸಮುದ್ರದ ನೆಂಟಸ್ಥನ ಉಪ್ಪಿಗೆ ಬರ ಎಂದಾಗಿದೆ ಅದು ನಮಗೆ ಗೊತ್ತಿದೆ. ಇನ್ನೊಂದು ಸಾರಿ ನಿಮಗೆ ಒಳ್ಳೆಯ ಟೈಮ್ ಬರುತ್ತದೆ ಆಗ ಮಾಡಿಸಿಕೊಳ್ಳಿ.

ಉಪಾಧ್ಯಕ್ಷರು:– ಮಾನ್ಯ ಬಸವರಾಜ ಬೊಮ್ಮಾಯಿಯವರೆ ತಾವು ಬೇಗ conclude ಮಾಡಿ. ಈಗಾಗಲೇ ಎರಡು ಗಂಟೆಗಳ ಕಾಲ ಮಾತನಾಡಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ:– ಇನ್ನೊಂದು ರಾಜ್ಯಕ್ಕೆ ಬಹಳ important ಇರುವುದು. AIBP ಏನಿದೆ ಇದು ಕೆಲವು norms ಬದಲಾವಣೆ ಮಾಡಿ, ಕೇವಲ ಕರ್ನಾಟಕ ಅಷ್ಟೇ ಅಲ್ಲ ಎಲ್ಲಾ ರಾಜ್ಯಕ್ಕೂ ಸಹ ತೊಂದರೆಯಾಗಿದೆ. ಮೊದಲು ಇದ್ದಂತಹ norms, ಶೇಕಡ 50% ಪ್ರಗತಿಯನ್ನು ತೋರಿಸಿ Financial and physical progress ಅನ್ನು ತೋರಿಸಿ ಆಮೇಲೆ refinancing start ಮಾಡುತ್ತೇವೆ ಎಂದು ಏನಿದೆ, ಇದರಿಂದ ಹಲವಾರು ಕರ್ನಾಟಕದ ಯೋಜನೆಗಳಿಗೆ ಇವತ್ತು ನಾವು ಅದನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಮಗೆ 500 ಕೋಟಿ ರೂಪಾಯಿಗಳು sanction ಆದರೆ ಕೇವಲ 120–130 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗುವಂತಹ ಪರಿಸ್ಥಿತಿ ಇದೆ. ನಾವು AIBP ಅನ್ನು ನಂಬಿಕೊಂಡು ಸುಮಾರು 1,000 ಕೋಟಿ ರೂಪಾಯಿಗಳಷ್ಟು ಕೆಲಸವನ್ನು ಮಾಡಿದ್ದರೂ ಕೂಡ repayment ಆಗದೇ ಇರುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುವ ಸಲುವಾಗಿ ತಾವು ಈ ಬಗ್ಗೆ ಪ್ರಯತ್ನಗಳು ಪ್ರಾರಂಭ ಮಾಡಬೇಕು ನಾವು ಅದಕ್ಕೆ ಬೆಂಬಲವನ್ನು ಕೊಡುತ್ತೇವೆ. ಇದು ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗಿದೆ. ಈ ಬಗ್ಗೆ ಬದಲಾವಣೆಯನ್ನು ತರಬೇಕಾಗಿದೆ, UPA ಸರ್ಕಾರದ ಕೊನೆಯಹಂತದಲ್ಲಿ ಇದನ್ನು ಮಾಡಿದರು. ಆದರೆ ಇದು ಬದಲಾವಣೆ ಆಗುವಂತಹ ಅವಶ್ಯಕತೆ ಇದೆ. ಇದರ ಬಗ್ಗೆ ನಿಮ್ಮ ನಿಲುವು ಏನು? ಅದನ್ನ ತಾವು ದಯವಿಟ್ಟು ಮಾಡಿ ನಾವು ಸಹ ಬರುತ್ತೇವೆ. ಇದು ಬದಲಾವಣೆ ಮಾಡುವಂತಹದ್ದು ಅತ್ಯಂತ ಅವಶ್ಯಕತೆ ಇದೆ. ಇಲ್ಲದೇ ಇದ್ದರೆ ಮುಂಬರುವಂತಹ ಎಲ್ಲಾ ಯೋಜನೆಗಳಿಗೆ ನಮಗೆ ತೊಂದರೆಯಾಗುತ್ತದೆ ಇದನ್ನು ನಾನು ರಾಜ್ಯದ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರೆ ಒಂದು ನಿಮಿಷ ಹೇಳುತ್ತೇನೆ. ಈ AIBP Modified guidelines ಏನಿದೆ ಮೊದಲೇ drought prone area ಏನಿತ್ತು. ಅದು 90:10 ಇತ್ತು. ಅದನ್ನು ಈಗ ಮುಂದೆ ನಮ್ಮ NLBC technical clearance ಆದಮೇಲೆ ಇವತ್ತು ಕೇಂದ್ರ ಸರ್ಕಾರವು guidelines modify ಮಾಡಿದರು. 90:10 ಇದ್ದದನ್ನು 75:25 for old projects. For new projects after the physicl and financial progress of 50% you are eligible, ಅದರಲ್ಲಿ 75, ಅಂದರೆ net result 37.5% ಬರುತ್ತದೆ ಇದು ಒಂದು ಭಾಗ, ಜಲಮಂಥನ 3 ದಿವಸದ ಕಾರ್ಯಕ್ರಮ ಆಯಿತು. ಅಲ್ಲಿ ಏನಾಯಿತೆಂದರೆ ಕೇಂದ್ರ ಜಲಸಂಪನ್ಮೂಲ ಸಚಿವರೆ ಉಮಾಭಾರತಿಯವರು ಕರೆದಾಗ ಎಲ್ಲಾ ರಾಜ್ಯದವರನ್ನು ಕರೆದಿದ್ದರೆ, ಸರಿ ಇತ್ತು. ಮತ್ತೊಂದು ಅದಕ್ಕಿಂತ ಹೆಚ್ಚಿನ ದೊಡ್ಡ ಗಂಡಾಂತರ ಇವತ್ತಿನ ದಿವಸ ನಮಗೆ ಬಂದಿದೆ. ಅದಕ್ಕೆ ಎಲ್ಲರೂ ಕೂಡಿ ಇವತ್ತಿನ ದಿವಸ ಪ್ರಯತ್ನ ಮಾಡಬೇಕಾಗಿದೆ. AIBP ನಮಗೆ major ಆಗಿ ನಮ್ಮ ಕರ್ನಾಟಕಕ್ಕೆ ಇವತ್ತಿನದಿವಸ benefit ಆಗುವಂತಹದು, ಅದರಲ್ಲಿಯೂ ವಿಶೇಷವಾಗಿ ಈ DPAP area ದಲ್ಲಿ ಆಗಿದೆ. ಏಕೆಂದರೆ AIBP major ಆಗಿ ನಮ್ಮ ಕರ್ನಾಟಕಕ್ಕೆ ವಿಶೇಷವಾಗಿ ಈ dry land DPAP area ದಲ್ಲಿ ಇವತ್ತಿನ ದಿವಸ benefit ಆಗುವಂಥದ್ದು. ಈಗ AIBP ಯಲ್ಲಿ ಕೇಂದ್ರ ಸರ್ಕಾರ ಇಟ್ಟಿರುವುದೇ thousand crores for the entire nation. ನಮ್ಮದೇ limits ಇವತ್ತಿನ ದಿವಸ ನಿಮಗೆ ಗೊತ್ತಿದೆ. ನಮ್ಮ ರಾಜ್ಯದ್ದು ಇವತ್ತಿನ ದಿವಸ available sanctioned limit is 600 crores. ಆದರೆ, AIBP ಇವತ್ತಿನ ದಿವಸ ಇರುವುದೇ thousand crores. ಕಳೆದ ವರ್ಷ ನಮಗೆ ಕೇಂದ್ರದಿಂದ ಎಷ್ಟು ಹಣ ಬಂದಿದೆ ಎನ್ನುವುದನ್ನು ನಾನು ಉತ್ತರದಲ್ಲಿ ಹೇಳುತ್ತೇನೆ. ಆದರೆ, ಮುಖ್ಯವಾಗಿ guidelines modify ಆಗಿದ್ದನ್ನು ಮತ್ತೆ restore ಮಾಡುವುದು, ಇನ್ನೊಂದು AIBP ಗೆ ಇವತ್ತಿನ ದಿವಸ ಏನು allocation cut ಆಗಿದೆ, ಇಡೀ ದೇಶಕ್ಕೇ ಒಂದು ಸಾವಿರ ಕೋಟಿ ರೂಪಾಯಿಗಳು, ಅಂದರೆ ನಮ್ಮ ರಾಜ್ಯಕ್ಕೆ 50

ಕೋಟಿ, 100 ಕೋಟಿ ರೂ. ಸಹ ಬರುವುದಿಲ್ಲ. ಇದು ಕೂಡ ಬಹಳ ಗಂಭೀರವಾದ ಸಮಸ್ಯೆ.

ಶ್ರೀ ಬಸವರಾಜ ಬೊಮ್ಮಾಯಿ:– Water Mission ಎಂದು ಏನಿದೆ ಅದರಲ್ಲಿ ಸ್ವಲ್ಪ ಹಣವಿದೆ. ಅದನ್ನು ಕೂಡ ನಾವು ಬಳಕೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಬೇರೆ ಬೇರೆ Head ನಲ್ಲಿ ಯಾವ್ಯಾವುದು ಇದೆ ಅದನ್ನು ಆ tailor made ಯೋಜನೆಗಳಿಗೆ ಲಾಭವನ್ನು ತೆಗೆದುಕೊಳ್ಳುವಂಥ ಪ್ರಯತ್ನಗಳನ್ನು ಕೂಡ ನಾವು ಮಾಡಬೇಕಾಗುತ್ತದೆ. ಕೊನೆಯದಾಗಿ ಎರಡೇ ಎರಡು ಬಹಳ ಪ್ರಮುಖವಾದ ಅಂಶಗಳನ್ನು ಹೇಳಬಯಸುತ್ತೇನೆ. ಒಂದನೆಯದು, interlinking of rivers. Interlinking of rivers ನಲ್ಲಿ ನಮ್ಮದು ಕೃಷ್ಣ, ಕಾವೇರಿ, ಮಹಾನಂದಿ ಮತ್ತು ಗೋದಾವರಿ ಏನು peninsular linkage ಇದೆ, ಇದನ್ನು NWDA ಯವರು propose ಮಾಡಿದ್ದರು. ಮೊದಲಿನ ಹಂತದಲ್ಲಿ ಸುಮಾರು 164 TMC ನೀರು ನಮ್ಮ ರಾಜ್ಯಕ್ಕೆ ಹೆಚ್ಚುವರಿಯಾಗಿ ಬರುತ್ತದೆ ಎನ್ನುವುದು estimate ಆಗಿತ್ತು. ಮಹಾರಾಷ್ಟ್ರ ಮತ್ತು ತಮಿಳುನಾಡಿನವರು ಅದಕ್ಕೆ guidelines change ಮಾಡಿ ಅದರ DPR change ಮಾಡುವಂಥ ಪ್ರಯತ್ನ ಮಾಡಿ ಕೇವಲ 14 TMC ನೀರು ಮಾತ್ರ ನಮಗೆ ಹೆಚ್ಚುವರಿಯಾಗಿ ಬರುವಂಥ ಒಂದು ಬದಲಾವಣೆಯನ್ನು ಮಾಡಿದ್ದಾರೆ. ನಾವಿದ್ದಾಗ ಅದಕ್ಕೆ objection ಮಾಡಿದ್ದೆವು. ಲಿಖಿತ ಮೂಲಕ objection ಮಾಡಿದ್ದೇವೆ ಮತ್ತು ನಮ್ಮ ವಕೀಲರ ಮುಖಾಂತರ ಕೂಡ NWDA meeting ನಲ್ಲಿ ಅದಕ್ಕೆ objection ಮಾಡಿ ತಡೆಹಿಡಿಸಿದ್ದೇವೆ. ಈಗ ಅದು ಮತ್ತೆ ಪ್ರಗತಿಯಾಗುವಂತಹ ಹಂತಕ್ಕೆ ಬಂದಿದೆ ಎಂದು ನನಗೆ ತಿಳಿದು ಬಂದಿದೆ. ಅದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ interlinking ನಲ್ಲಿ ನಮ್ಮ ರಾಜ್ಯಕ್ಕೆ ಏನು share ಬರಬೇಕೋ ಆ share ಬರುವುದಕ್ಕೆ ಆತಂಕ ಇದೆ. ಸುಮಾರು 150 TMC ನೀರನ್ನು ನಾವು ಕಳೆದುಕೊಳ್ಳುತ್ತೇವೆ. ಆ 150 TMC ನೀರು ಬಂದರೆ ಬಹುತೇಕವಾಗಿ ಇವರೆಲ್ಲರ ಸಮಸ್ಯೆ ಇದೆಯಲ್ಲ, ಕಾವೇರಿಗೂ ನೀರು ಬರುತ್ತದೆ, ಕೃಷ್ಣಗೂ ನೀರು ಬರುತ್ತದೆ. ಆ interlinking ನಲ್ಲಿ ಎರಡು

ನದಿಗಳಿಗೂ ನೀರು ಬರುತ್ತದೆ. ಈ peninsular interlinking ಅನ್ನು ರಾಜ್ಯ ಸರ್ಕಾರ ಬಹಳ ಗಂಭೀರವಾಗಿ ಭವಿಷ್ಯದ ದೃಷ್ಟಿಯಿಂದ ತಾವು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಶಿವಮೂರ್ತಿ:– ಗಂಗಾ–ಕಾವೇರಿ ಬರುವುದಿಲ್ಲವೇ?

ಶ್ರೀ ಬಸವರಾಜ ಬೊಮ್ಮಾಯಿ:– ಇಲ್ಲ, ಅದು ಎರಡು ಭಾಗ ಮಾಡಿದ್ದಾರೆ. ಒಂದನೆಯದು, ನಮ್ಮ ಈ ಸಹ್ಯಾದ್ರಿ ಕೆಳಗಡೆ ಇರುವಂಥದ್ದಕ್ಕೆ peninsular linkage ಎಂದು ಬೇರೆ ಮಾಡಿದ್ದಾರೆ. ಅಲ್ಲಿ ಗಂಗಾ peninsular ಗೆ ಬೇರೆ ಮಾಡಿದ್ದಾರೆ. ಅದನ್ನು NWDA ಯಲ್ಲಿಯೇ ಮಾಡಿದ್ದಾರೆ. ಆದ್ದರಿಂದ ಇವು 4 ನದಿಗಳಾದ ಗೋದಾವರಿ, ಮಹಾನಂದಿ, ಕೃಷ್ಣ, ಕಾವೇರಿ ಇವುಗಳ ಜೋಡಣೆಯ ಒಂದು ಮಹತ್ವಾಕಾಂಕ್ಷಿ ಯೋಜನೆ ಇದೆ. ಅದು ಯಾವತ್ತು ಬರುತ್ತದೋ ಗೊತ್ತಿಲ್ಲ. ಬಂದಾಗ ನಮ್ಮ share ನಮಗೆ ಸರಿಯಾಗಿ ಬರಬೇಕು. ಇಲ್ಲದಿದ್ದರೆ ಈಗ ನಾವೇನಾದರೂ ಸುಮ್ಮನೆ ಕುಳಿತರೆ ನಾವು ಕಳೆದುಕೊಳ್ಳುತ್ತೇವೆ. ಅದರ ಬಗ್ಗೆ ತಾವು ಗಂಭೀರವಾಗಿ ಚಿಂತನೆ ಮಾಡಬೇಕು. ಇನ್ನು ಎರಡನೆಯದಾಗಿ ಬರೀ ಸಮಸ್ಯೆಗಳನ್ನು ಹೇಳುವುದು ಮಾತ್ರವಲ್ಲ, ಅದಕ್ಕೆ ಪರಿಹಾರ ಬೇಕು. ಬೇಡ್ತಿ–ವರದಾ ನದಿಗಳ ಜೋಡಣೆ ಇದು NWDA ದಲ್ಲಿ ಆಗಿರುವಂಥದ್ದು, ಇಡೀ ದಕ್ಷಿಣ ಭಾರತದಲ್ಲಿ approved ಆಗಿರುವಂಥ ಯೋಜನೆ ಕರ್ನಾಟಕದಲ್ಲಿ NWDA ನಲ್ಲಿ ಯಾವುದಾದರೂ ಇದ್ದರೆ ಅದು ಬೇಡ್ತಿ–ವರದಾ. ಈ ಬೇಡ್ತಿ–ವರದಾ ಇದರ ಜೋಡಣೆ ಬಗ್ಗೆ ನಾವು ಮಾಡಿದಂಥ ಪ್ರಯತ್ನದಲ್ಲಿ environmentalists ಬಹಳ ದೊಡ್ಡ ಪ್ರಮಾಣದಲ್ಲಿ ವಿರೋಧ ಮಾಡಿದರು. ಹಾಗಾಗಿ ಆ ಸಂದರ್ಭದಲ್ಲಿ ಆಗಲಿಲ್ಲ. ಆದರೆ, ಬದಲಾದ ಪರಿಸ್ಥಿತಿಯಲ್ಲಿ ತಾವು ಮರುಪ್ರಯತ್ನವನ್ನು ಮಾಡುವುದು ಅವಶ್ಯಕತೆ ಇದೆ. ಸುಮಾರು 24 TMC ನೀರು ವರದಾಕ್ಕೆ ಬಂದರೆ ವರದಾ ಮುಖಾಂತರ ತುಂಗಭದ್ರಾ ನದಿಗೆ ಬರುತ್ತದೆ ಇಲ್ಲಿ ನಮ್ಮ ಉದ್ದೇಶ ಏನಿದೆ ಎಂದರೆ. ಆ ನೀರನ್ನು ವಾಣಿವಿಲಾಸಕ್ಕೆ ಬಳಕೆ ಮಾಡಿ ವಾಣಿವಿಲಾಸ it can be a Grid for entire ಮಧ್ಯ ಕರ್ನಾಟಕದ ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ವಾಣಿವಿಲಾಸ

ಒಂದು ಪ್ರಮುಖವಾದ Water storage Grid ಆಗುತ್ತದೆ. ಅದಕ್ಕೆ ನಾವು ನೀರನ್ನು augment ಮಾಡಿದರೆ ಈ ಬರಗಾಲ ಪ್ರದೇಶ ಅದು ಚಿತ್ರದುರ್ಗ ಇರಬಹುದು, ತುಮಕೂರು ಇರಬಹುದು, ಕೋಲಾರ, ಚಿಕ್ಕಬಳ್ಳಾಪುರಕ್ಕೆ ಇನ್ನೊಂದು source ಆಗುತ್ತದೆ. ಅದಕ್ಕೆ ತಾವು ಪ್ರಯತ್ನಗಳನ್ನು ಮಾಡಬೇಕು.

ಶ್ರೀ ಕೆ. ಶಿವಮೂರ್ತಿ:– ಈಗ ವಾಣಿವಿಲಾಸ dry ಆಗಿಬಿಟ್ಟಿದೆ. ಅದು dry ಆಗಿಬಿಟ್ಟಿದ್ದರಿಂದ ಏನೂ ಉಪಯೋಗವಾಗುತ್ತಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:– ಅದು ಗೊತ್ತಿದೆ. ಸಮಯ ಇಲ್ಲ, ಅದಕ್ಕೆ ನಾನು ಜಾಸ್ತಿ ಮಾತನಾಡುತ್ತಿಲ್ಲ. ನಾವು ಅದನ್ನು ಹೇಗೆ ಪರಿಹಾರ ಮಾಡಬೇಕು ಎಷ್ಟೇ ಮಾತನಾಡುತ್ತಿರುವುದು. ಅದೊಂದು ಭಾಗ. ಎತ್ತಿನ ಹೊಳೆಯಂದಲೂ ಕೂಡ ನೀವು ಈ ನಿಮ್ಮ storage ಅನ್ನು ಮಾಡುವುದಕ್ಕಿಂತ ಮುಂಚೆ ನೀರು ಬಂದರೆ ಅದನ್ನು ವಾಣಿವಿಲಾಸಕ್ಕೆ ಕೂಡ divert ಮಾಡುವಂಥ ಸಾಧ್ಯತೆ ಇದೆ. ನೀವು ನಿಮ್ಮ DPR ನಲ್ಲಿ ಅದನ್ನೂ ಬರೆದುಕೊಂಡಿದ್ದೀರಿ. ಅದರ ಬಗ್ಗೆಯೂ ಕೂಡ ನೀವು ಗಂಭೀರವಾಗಿ ಚಿಂತನೆ ಮಾಡಬೇಕು. ಏಕೆಂದರೆ, ಹೆಚ್ಚುವರಿ ನೀರು ಬಂದಂಥ ಸಂದರ್ಭದಲ್ಲಿ ನೀವು ಅಲ್ಲಿಗೆ ಬಿಟ್ಟರೆ ಚಿತ್ರದುರ್ಗ ಜಿಲ್ಲೆಗೆ ಎಲ್ಲಿ ನೀವು Upper Bhadra ಕೊಡುವುದಕ್ಕೆ ಸಾಧ್ಯವಿಲ್ಲ, ಜಗಳೂರು ಮತ್ತೆ ಕೂಡ್ಲಿಗಿ ಏನು ಕೆಲವು ತಾಲ್ಲೂಕುಗಳ ಬೇಡಿಕೆ ಇದೆ, ಅವುಗಳಿಗೂ ಕೂಡ ಕೊಡುವುದಕ್ಕೆ ಸಾಧ್ಯತೆ ಇದೆ. ನಿಮ್ಮ ಅರಸೀಕೆರೆಯದು ಸಹ DPR ನಲ್ಲಿ ಸೇರಿಸಿಬಿಟ್ಟಿದ್ದಾರೆ. ಎತ್ತಿನ ಹೊಳೆ ಯೋಜನೆಯಲ್ಲಿ ಅರಸೀಕೆರೆಯ 3–4 ತಾಲ್ಲೂಕಿನ ಕೆರೆಗಳನ್ನು ಸಂಪೂರ್ಣವಾಗಿ ತುಂಬಿಸುವುದಕ್ಕೆ ಯೋಜನೆ ಇದೆ. ಶ್ರೀ ಎಂ.ಬಿ. ಪಾಟೀಲರಂತೂ ಅದರ ಬಗ್ಗೆ ವಿಶೇಷವಾದ ಗಮನ ಹರಿಸಿ ನಮ್ಮ ಶಿವಲಿಂಗೇಗೌಡರಿಗೆ ಒಂದು ಕೊಡುಗೆಯನ್ನು ಕೊಡಬೇಕು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ.ಟಿ. ರವಿ:– ಈಗ ಅವರ ಮೇಲೆ ಪ್ರೀತಿ ತೋರಿಸುತ್ತಿದ್ದೀರಿ, ನಮ್ಮನ್ನು ಬಿಟ್ಟೇ ಬಿಟ್ಟಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ:- ನೀವು ನದಿ ಮೂಲದವರು.

ಶ್ರೀ ಸಿ.ಟಿ. ರವಿ:- Additional expenditure ನಮಗೆ ಏನೆಂದರೆ 'ಸಮುದ್ರದಲ್ಲಿ ವಾಸ ಉಪ್ಪಿಗೆ ಬಡತನ' ಎನ್ನುವ ಸ್ಥಿತಿ ನಮ್ಮದು ಇದೆ. ಹೇಮಾವತಿ, ಭದ್ರಾ, ತುಂಗಾ, ನೇತ್ರಾವತಿ ನದಿಗಳು ಹುಟ್ಟುವುದು ನಮ್ಮಲ್ಲಿ, ಆದರೆ, ಚಿಕ್ಕಮಗಳೂರು ಜಿಲ್ಲೆಗೆ ನೀರಾವರಿ ಇಲ್ಲ. ನೇತ್ರಾವತಿ, ತುಂಗಾ, ಭದ್ರಾ, ಹೇಮಾವತಿ, ಯಗಚಿ ಇಷ್ಟೂ ನದಿಗಳು ಹುಟ್ಟುವುದು ಚಿಕ್ಕಮಗಳೂರಿನಲ್ಲಿ. ಆದರೆ ಚಿಕ್ಕಮಗಳೂರಿಗೆ ಯಾವುದೇ ನದಿಯಿಂದ ನೀರಾವರಿ ಯೋಜನೆ ಎಷ್ಟು ಪ್ರಮಾಣದಲ್ಲಿ ಆಗಬೇಕೋ ಅಷ್ಟು ಪ್ರಮಾಣದಲ್ಲಿ ಆಗಲಿಲ್ಲ. ಈಗ ಎತ್ತಿನಹೊಳೆ ಯೋಜನೆಯಲ್ಲಿ ನೀವು ಒಂದು ಸಣ್ಣ alignment change ಮಾಡಿದರೆ ಯಾವುದೇ ಹೆಚ್ಚುವರಿ ವೆಚ್ಚ ಇಲ್ಲದೆ ನೀವವು ಹಳೇಬೀಡು ಕೆರೆಗೆ ನೀರು ತುಂಬಿಸಿ ಅಲ್ಲಿಂದ ಜಾವಗಲ್, ಅರಸೀಕೆರೆ ಅಷ್ಟೂ ಕೆರೆಗಳಿಗೆ gravity ನಲ್ಲಿ ನೀರು ಹೋಗುತ್ತದೆ. ಅದಲ್ಲದೆ ಕಡೂರು ತಾಲ್ಲೂಕಿನಲ್ಲಿ ಮಾನ್ಯ ದತ್ತಣ್ಣರವರ ಮೂರು ಹೋಬಳಿಯನ್ನು ಸೇರಿಸಿದ್ದೀರಲ್ಲ, ಇನ್ನೆರಡು ಹೋಬಳಿಗೂ ಅದೇ gravity ಯಲ್ಲಿ ನೀರು ಹೋಗುತ್ತದೆ. ನೀವು ಇದನ್ನು ಒಂದು survey ಮಾಡಿಸಿ. ಆ gravity ಯಲ್ಲಿ ನಮ್ಮ ಸಕ್ಕರೆ ಪಟ್ಟಣ ಹೋಬಳಿಗೆ ನೀರು ಬರುತ್ತದೆ ಮತ್ತು ಲಕ್ಯಾ ಹೋಬಳಿಯ ಅರ್ಧ ಭಾಗಕ್ಕೆ gravity ಯಲ್ಲಿ ನೀರು ಬರುತ್ತದೆ. ಇಲ್ಲಿ ನೀರಾವರಿಯಾಗಿಲ್ಲ. ಆವತ್ತು ನಮ್ಮ ಹಿರಿಯರು ಏಕೆ ಜಗಳ ಆಡಲಿಲ್ಲವೋ ಗೊತ್ತಿಲ್ಲ. ನಿಜವಾಗಿಯೂ ನಮಗೆ ಅನ್ಯಾಯವಾಗಿದೆ. ಹಳೇಬೀಡಿನ ವಿಷ್ಣುಸಮುದ್ರ ಕೆರೆ ಏನಿದೆ, ಆ ಕೆರೆಗೆ alignment change ಮಾಡಿ gravity ನಲ್ಲಿ ನೀರು ತಂದರೆ ಉಳಿದೆಲ್ಲವೂ ತಾನಾಗಿ ಬರುತ್ತದೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಸಿ.ಎನ್. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಶ್ರೀ ಬಸವರಾಜ ಬೊಮ್ಮಾಯಿಯವರು ಈಗ ಏನು ಅರಸೀಕೆರೆಯದು ಪ್ರಸ್ತಾಪ ಮಾಡಿದರು, ಅರಸೀಕೆರೆಗೆ ಹೊಂದಿಕೊಂಡ ಹಾಗೆ ಬಾಗೂರು ಅಂದರೆ ನಮ್ಮ ತಾಲ್ಲೂಕು, ನಮ್ಮ ವಿಧಾನಸಭಾ ಕ್ಷೇತ್ರದ ಹಳ್ಳಿಗಳು ಬರುತ್ತವೆ. ಬಾಗೂರು-ನವಿಲೆ

ಸುರಂಗದಿಂದ ಸುಮಾರು 250 ಅಡಿ ಆಳದಲ್ಲಿ ನೀರು ಹೋಗಿ ಸುಮಾರು 80 ರಿಂದ 100 ಹಳ್ಳಿಗಳು ಸಂತ್ರಸ್ಥರಾಗಿದ್ದಾರೆ. ಆದ್ದರಿಂದ, ಎತ್ತಿನಹೊಳೆ ಯೋಜನೆಯಿಂದ 20 ಕೆರೆಗಳಿಗಾದರೂ ಕುಡಿಯುವ ನೀರಿನ ಉದ್ದೇಶದಿಂದ ಒದಗಿಸಿದರೆ ಸೂಕ್ತ ಎಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸಿ.ಟಿ. ರವಿ:– ಇದನ್ನು survey ಮಾಡಿಸಿ. ನಮಗೆ ನೀರಾವರಿ ಕೊಡಬೇಡಿ. ಕೆರೆಗಳನ್ನು ತುಂಬಿಸಿ.

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು):– ರವಿಯವರೆ, ಈ ಎತ್ತಿನಹೊಳೆ ಯೋಜನೆ ಏನಿದೆ, ನಾವು first right Kolar, Chickballapur tail end ಗೆ ನೀರು ಕೊಡಬೇಕೆಂದು ಈ ಯೋಜನೆ ಸಿದ್ಧಪಡಿಸಿರುವಂಥದ್ದು. ಈಗಾಗಲೇ ಇರುವಂಥ 24 TMC ನೀರನ್ನು ನಾವು ಇಲ್ಲಿ ಬಳಸಿಕೊಂಡರೆ, ಪಾಪ, ಕೋಲಾರ, ಚಿಕ್ಕಬಳ್ಳಾಪುರ ಜನರ ಕನಸು ಏನಿದೆ ಅದು ಹಾಗೆಯೇ ಉಳಿಯುತ್ತದೆ.

ಶ್ರೀ ಸಿ.ಟಿ. ರವಿ:– ನೀವು ನಮ್ಮ deposit draw ಮಾಡಿಕೊಳ್ಳುತ್ತೀರಿ. ನೀವು ಕೊಡಲ್ಲ ಅಂದರೆ ಹೇಗೆ? ನೀವು ಕೊಡಬೇಕಲ್ಲ.

ಶ್ರೀ ಎಂ.ಬಿ. ಪಾಟೀಲ್:– ಇದ್ದ ನೀರನ್ನೂ ಎಲ್ಲೆಲ್ಲಿ ಹಂಚುವುದಕ್ಕೆ possibility ಇದೆ ಅದನ್ನು ಉತ್ತರದಲ್ಲಿ ಹೇಳುತ್ತೇನೆ. ಆ ಮಾತು ಬೇರೆ.

ಶ್ರೀ ಸಿ.ಟಿ. ರವಿ:– ಕೋಲಾರದವರಿಗೆ ಖಂಡಿತ ನೀರು ಕೊಡಬೇಕು. ನಮ್ಮ ಸಹಾನುಭೂತಿ, ಸಹಕಾರ ಎರಡೂ ಇದೆ.

ಶ್ರೀ ಎಂ.ಬಿ. ಪಾಟೀಲ್:– ನಮ್ಮೆಲ್ಲರ ಜವಾಬ್ದಾರಿ ಕೋಲಾರ, ಚಿಕ್ಕಬಳ್ಳಾಪುರ tail end ಇದೆಯಲ್ಲ, ಆ tail end ಗೆ ನೀರು ಕೊಡಬೇಕೆನ್ನುವುದು.

(ಗೊಂದಲ)

ಶ್ರೀ ಸಿ.ಟಿ. ರವಿ:– ನಮ್ಮನ್ನು ಇವತ್ತಿನ ಕೋಲಾರದ ಸ್ಥಿತಿಗೆ ತೆಗೆದುಕೊಂಡು ಹೋಗುವುದಲ್ಲ. ಹತ್ತಿರದಲ್ಲಿದ್ದವರಿಗೆ ನೀರು ಕೊಡದೆ ಬೇರೆ

ಕಡೆಗೆ ಕೊಡಬೇಕೆನ್ನುವುದು ನ್ಯಾಯವೂ ಅಲ್ಲ. ನೀವು ನಮಗೆ ನೀರು ಕೊಡಿ, ಅವರಿಗೂ ಕೊಡಿ. ನಮಗೆ ಕಡಿಮೆಯೇ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಆಮೇಲೆ water management ನಲ್ಲಿ ಅದನ್ನು ಸರಿದೂಗಿಸೋಣ.

ಶ್ರೀ ಸಿ.ಎನ್. ಬಾಲಕೃಷ್ಣ:- ಈಗ ಚಿಕ್ಕಬಳ್ಳಾಪುರ, ಕೋಲಾರಕ್ಕೆ ನೀರು ಒದಗಿಸುವ ಘನ ಉದ್ದೇಶದಿಂದ ಸರ್ಕಾರ ಮಂಜೂರು ಮಾಡಿದೆ. ನಮಗೂ ಪರಿಸ್ಥಿತಿ ತುಂಬಾ ಬಿಗಡಾಯಿಸಿರುವುದರಿಂದ 15-20 ಕೆರೆಗಳಿಗೆ ಆ ಮೂಲದಿಂದ ನೀರು ಹರಿಯುವುದಕ್ಕೆ ದಯಮಾಡಿ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಸಭಾಧ್ಯಕ್ಷರೆ, conclude ಮಾಡುತ್ತೇನೆ. ಸರ್ಕಾರ ಏನು ಬೇಡಿಕೆ ಇಟ್ಟಿದೆ, ಇದನ್ನು ಅನುಮೋದನೆ ಮಾಡುವಂಥ ಸಂದರ್ಭದಲ್ಲಿ ನಮಗೆ ಬಹಳಷ್ಟು reservations ಇದೆ. ನಾನು ಆಗಲೇ ಪ್ರಾರಂಭದಲ್ಲಿ ಹೇಳಿದಂತೆ ನಿಮ್ಮ ನೀರಾವರಿ ಯೋಜನೆಗಳ ಹರಿವು ಮತ್ತು ನಿಮಗೆ ಕೊಟ್ಟಿರುವಂಥ ಹಣ ಯಾವುದಕ್ಕೂ ಕೂಡ ಸಾಕಾಗುವುದಿಲ್ಲ. ಆದ್ದರಿಂದ, ಹೆಚ್ಚಿನ ಹಣಕಾಸಿನ ನೆರವನ್ನು ಹಣಕಾಸಿನ ಸಚಿವರಾದ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಬೇಕು. ಹಣಕಾಸಿನ ಸಚಿವರೂ ಆದ ಮಾನ್ಯ ಮುಖ್ಯಮಂತ್ರಿಯವರು ನೀರಾವರಿ ಯೋಜನೆಯನ್ನು ಇನ್ನು 5 ವರ್ಷಗಳಲ್ಲಿ ಮುಗಿಸುತ್ತೇವೆಂದು ಅವರು ಏನು ಮಾತು ಹೇಳಿದ್ದಾರೆ ಮತ್ತು ಕೆಲವು ಯೋಜನೆಗಳನ್ನು 3 ವರ್ಷಗಳಲ್ಲಿ ಮುಗಿಸುತ್ತೇವೆ, 2 ವರ್ಷಗಳಲ್ಲಿ ಮುಗಿಸುತ್ತೇವೆ ಎಂದು ನೀವೂ ಕೂಡ ಕೆಲವನ್ನು ಏನು ಹೇಳಿದಿರಿ, 1 ಲಕ್ಷ ಎಕರೆಯನ್ನು ನಾವು ಬಿಜಾಪುರ ಜಿಲ್ಲೆಯಲ್ಲಿ 2015-16 ರಲ್ಲಿ ಕೊಡುತ್ತೇವೆ.

ಶ್ರೀ ಎಂ.ಬಿ. ಪಾಟೀಲ್:- ಬಸವರಾಜ ಬೊಮ್ಮಾಯಿಯವರೆ, ನಿಮ್ಮ ಭಾಷಣವನ್ನು wrong time ನಲ್ಲಿ ಮಾತನಾಡುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಇದ್ದಾಗ ಇದನ್ನು ಮಾತನಾಡಬೇಕಾಗಿತ್ತು. ನಮಗೆ help ಆಗುತ್ತಿತ್ತು.

ಶ್ರೀ ಬಸವರಾಜ ಬೊಮ್ಮಾಯಿ:- ಈಗ ಏನೂ ತೊಂದರೆ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ಎಲ್ಲೂ ಹೋಗುವುದಿಲ್ಲ.

ಅಧ್ಯಕ್ಷರು:- ಪಾಟೀಲರೆ, ಸರ್ಕಾರ ಒಂದೇ ಅಲ್ಲವೆ? ಸರ್ಕಾರ ಒಂದೇ, ನೀವು ಅದರ ಒಂದು ಭಾಗ. ಈಗ ಅವರು ನಿಮಗೆ address ಮಾಡಿದ್ದಾರಲ್ಲ, that is your privilege.

ಶ್ರೀ ಬಸವರಾಜ ಬೊಮ್ಮಾಯಿ:- ಎಂ.ಬಿ. ಪಾಟೀಲರೆ, ನೀವು ಉತ್ತರ ಕೊಡುವಾಗ ಮುಖ್ಯಮಂತ್ರಿಯವರನ್ನು ಒಂದು ರೀತಿ ನೋಡಿಕೊಳ್ಳಿ. ಆವಾಗ ಮತ್ತೆ ಒತ್ತಾಯ ಮಾಡುತ್ತೇವೆ. ತಾವೇನೂ ಚಿಂತೆ ಮಾಡುವುದಕ್ಕೆ ಹೋಗಬೇಡಿ. ನಮ್ಮದು ಒತ್ತುಗೋಲು ಖಾಯಂ ಇರುವುದೇ. ನಾವೇನೂ ಹಿಂತೆಗೆಯುವುದಿಲ್ಲ. ಅದರ ಬಗ್ಗೆ ನೀವೇನೂ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗಬೇಡಿ. ಅದು ನೀವು ನೀರಾವರಿ ಸಚಿವರು ಇರಲಿ, ಯಾರಾದರೂ ಇರಲಿ ಇದೊಂದು ನಿರಂತರವಾಗಿ ಅಭಿವೃದ್ಧಿ development ಮತ್ತು department ಮತ್ತು finance ನವರು ಇರುವಂತದ್ದು ಒಂದು ಎಲ್ಲಾ ಸರ್ಕಾರಗಳಲ್ಲೂ ಇರುವುದೇ. ಅದರಲ್ಲಿ ನೀವು ಎಷ್ಟು ಯಶಸ್ವಿಯಾಗುತ್ತೀರಿ ಎನ್ನುವುದು ಬಹಳ ಮುಖ್ಯ. ಅವರಿಗೆ ಬಹಳ ಹತ್ತಿರವಿದ್ದೀರಿ ಎಂದು ಸುದ್ದಿ ಇದೆ. ನೀವು ಎಷ್ಟು ಯಶಸ್ವಿಯಾಗಿ ನೀರಾವರಿ ಇಲಾಖೆಗೆ ಲಾಭವನ್ನು ತರುತ್ತೀರಿ ಎನ್ನುವುದು ಬಹಳ ಮುಖ್ಯ.

ಅಧ್ಯಕ್ಷರು:- ಬೊಮ್ಮಾಯಿಯವರೆ, ಒಂದೇ ತೆಗೆದುಕೊಳ್ಳಿ, ಅರ್ಧವೇ ತೆಗೆದುಕೊಳ್ಳಿ, ತೆಗೆದುಕೊಂಡದ್ದನ್ನು ಕಾಲಮಿತಿಯೊಳಗೆ ಪೂರೈಸುವಂಥ ಒಂದು ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ, ಏನಾಗುತ್ತದೆಂದರೆ, ಇದೂ ಇಲ್ಲ, ಅದೂ ಇಲ್ಲ. ಇದನ್ನು ಮಂತ್ರಿಯವರು ಗಮನದಲ್ಲಿಟ್ಟುಕೊಂಡು ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:- ತಾವು ಬೆಳಿಗ್ಗೆ ಇರಲಿಲ್ಲ. ನಾನು ವಿಷಯ ಮಾತನಾಡಿದ್ದೇನೆ. ನಾವು ಹೇಗೆ water management ಬಗ್ಗೆ ಲಕ್ಷ್ಯ ಕೊಡಬೇಕು, ಯೋಜನೆಗಳಲ್ಲಿ cost of delay is more than anything else.

ಅದರಿಂದ ಹೇಗಾಗುತ್ತಿದೆ ಎಂದು ನಾನು ಈಗಾಗಲೇ ವಿವರವಾಗಿ ಹೇಳಿದ್ದೇನೆ. ಪುನರುಚ್ಚಾರ ಮಾಡುವುದಿಲ್ಲ. ಆದರೆ, ಕೊಟ್ಟ ಹಣವನ್ನೂ ಕೂಡ ನೀವು ಸರಿಯಾದ ರೀತಿಯಲ್ಲಿ ಉಪಯೋಗಿಸಲು plan, priority ಇಲ್ಲ. ಆದ್ದರಿಂದ, ಇವತ್ತು ಯಾವುದರಲ್ಲಿ yield ಬರಬೇಕು, 1 ಸಾವಿರ ಕೋಟಿ ರೂಪಾಯಿಗಳನ್ನು ಏನು ಹಾಕಿದೆ, ಅದಕ್ಕೆ ಎಷ್ಟು yield ನೀರಾವರಿಯಿಂದ ಬರಬೇಕು, ಆ ನೀರಾವರಿ yield ಬರದೇ ಇರುವುದನ್ನು ನಾವು ನೋಡುತ್ತಿದ್ದೇವೆ. ನಿಮ್ಮ priority ಯನ್ನು ಸರಿ ಮಾಡಿಕೊಳ್ಳಿ. ನಿಮ್ಮ plan, ಸರಿ ಇಲ್ಲ. Target ಇಲ್ಲ. Priority ಇಲ್ಲದ್ದಕ್ಕೆ target ಸಹ ಇಲ್ಲ. ಆದ್ದರಿಂದ ನೀವು 1 ಲಕ್ಷ 20 ಸಾವಿರ ಹೆಕ್ಟೇರ್ ಮಾಡುತ್ತೇವೆಂದಿರಿ. ಅದನ್ನು ಮಾಡುವುದಕ್ಕಾಗಲಿಲ್ಲ. 1 ಲಕ್ಷ ನಿಮ್ಮ FIC ಮಾಡುತ್ತೇವೆಂದಿರಿ. ಅದನ್ನು ಮಾಡುವುದಕ್ಕಾಗಲಿಲ್ಲ. 1 ಲಕ್ಷ ಬಿಸಿಗಾಲುವೆ ಮಾಡುತ್ತೇವೆಂದಿರಿ. ನಾನಲ್ಲ, ನೀವೇ ಹೇಳಿರುವುದು. ನೀವು ಮಾಡಿಲ್ಲ. ಆದ್ದರಿಂದ, ನಿಮ್ಮ priorities ಅನ್ನು ಸರಿ ಮಾಡಿಕೊಳ್ಳುವಂಥ ಪ್ರಯತ್ನ ಬಹಳ ಮುಖ್ಯ. Priority ಇಲ್ಲ. Finances ಇಲ್ಲ. Implementation ನಲ್ಲಿ ಕೂಡ ಸಮರ್ಪಕವಾಗಿ planning ಇಲ್ಲ. ಸರಿಯಾದ implement ಆಗಿಲ್ಲ. ಆದ್ದರಿಂದ ಹಲವಾರು ಸಂದರ್ಭಗಳಲ್ಲಿ ಯಾವ ಯೋಜನೆಗೆ ಹಣವಿದೆ, ಅಲ್ಲಿ ಪ್ರಗತಿಯಾಗಿಲ್ಲ, ಪ್ರಗತಿಯಾದಲ್ಲಿ ಹಣವಿಲ್ಲ. ನಿಮ್ಮ accounts ನಲ್ಲಿ mismatch ಇದೆ. ನೀವು ಅದರ ಬಗ್ಗೆ ಲಕ್ಷ್ಯ ಕೊಡಬೇಕಾಗಿದೆ. Water management ನಲ್ಲಿ ಸಂಪೂರ್ಣವಾಗಿ, CADA works ನಲ್ಲಿ, ಸವಳು ಜವಳು ತೆಗೆಯುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. Priority ಕೊಟ್ಟಿಲ್ಲ. ಲಕ್ಷ್ಯ ಕೊಟ್ಟಿಲ್ಲ. ಸಂಪೂರ್ಣವಾಗಿ ವಿಫಲವಾಗಿದೆ.

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು):- ಬೊಮ್ಮಾಯಿಯವರೆ, ಉತ್ತರದಲ್ಲಿ ಹೇಳುತ್ತೇನೆ. ತಾವು ಮಂತ್ರಿ ಇದ್ದಾಗ CADA ದ್ದು ಹೇಗಾಗಿತ್ತು ಎಂದು ಹೇಳುತ್ತೇನೆ. ನಾವು ಏನೇನು ಮಾಡುತ್ತೇವೆಂದು ಉತ್ತರದಲ್ಲಿ ಹೇಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:– ನೀವು ಹೇಳುತ್ತೀರಿ ಎಂದು ನನಗೆ ಗೊತ್ತಿದೆ ಹಾಗಲ್ಲ. ಪಾಟೀಲರೆ.

ಶ್ರೀ ಹಂಪನಗೌಡ ಬಾದರ್ಲಿ:– Success ಆಗಿದೆ, ಇವರಿದ್ದಾಗ failure ಆಗಿದೆ ಎಂದು ಹೇಳುತ್ತಿದ್ದೀರಿ. ನೀವು ಇದ್ದಾಗಲೂ ಅಷ್ಟೇ ಇತ್ತು, ಈಗ ಅವರು ಇದ್ದಾಗಲೂ ಅಷ್ಟೇ ಇದೆ.

ಶ್ರೀ ಎಂ.ಬಿ. ಪಾಟೀಲ್:– ನಾನು ಉತ್ತರದಲ್ಲಿ ಹೇಳುತ್ತೇನೆ. ತಾವು ಇದ್ದಾಗಲೂ ಕೂಡ ಯಾವ ವ್ಯವಸ್ಥೆ ಏನೇನಿತ್ತು, ನಾವು ಬಂದಾಗ ಏನೇನು ತಂದೆವು, ಏನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:– ನಾವು ಉತ್ತರ ಕೊಡುವಾಗ ಹಿಂದಿನವರು ಏನು ಮಾಡಿದರೆಂದು ಅಲ್ಲ. ನಾವೇನು ಮಾಡಿದೆವು ಎಂದು ಕೊಡುತ್ತಿದ್ದೆವು. ವಿಶೇಷವಾಗಿ ಎಂ.ಬಿ ಪಾಟೀಲರಿಂದ ಏನು ನಿರೀಕ್ಷೆ ಮಾಡುತ್ತೇವೆ?

ಅಧ್ಯಕ್ಷರು:– ಅನುಭವದ ಆಧಾರದ ಮೇಲೆ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ:– ನಾನು ಮಂತ್ರಿಯಾದ ಮೇಲೆ ಬೊಮ್ಮಾಯಿಯವರೆ ಇದನ್ನು ಮಾಡಿದ್ದೇನೆ, ನಾನು ನುಡಿದಂತೆ ನಡೆದಿದ್ದೇನೆ ಎಂದು ಹೇಳಬೇಕು.

ಶ್ರೀ ಎಂ.ಬಿ. ಪಾಟೀಲ್:– ಅವರು ಇದ್ದಾಗ ಏನು ಮಾಡಿದ್ದಾರೆ, ಒಳ್ಳೆಯದು ಮಾಡಿದ್ದರೂ ಕೂಡ ಅದನ್ನೂ ಹೇಳುತ್ತೇವೆ, ಕೆಟ್ಟದ್ದು ಮಾಡಿದ್ದರೂ ಕೂಡ ಹೇಳುತ್ತೇವೆ. ನಾವು ಬಂದಮೇಲೆ ಏನೇನು ಬದಲಾವಣೆ ತಂದೆವು, ಏನೇನು ಮಾಡುತ್ತಿದ್ದೇವೆ ಅದನ್ನೂ ಹೇಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:– ಎಂ.ಬಿ. ಪಾಟೀಲರೆ, ನಾನೇನು ಅಪೇಕ್ಷೆ ಮಾಡುತ್ತೇನೆಂದರೆ, ನಾನು ಮಂತ್ರಿಯಾದ ಮೇಲೆ ಈ ತರಹ ಹೇಳಿದ್ದೆ, ಮಾಡಿದ್ದೇನೆ, ಮಾಡಿ ತೋರಿಸಿದ್ದೇನೆ ಎಂದು ಹೇಳಿದ್ದರೆ

ಶಹಬ್ಬಾಶ್‌ಗಿರಿ ಎನ್ನುತ್ತೇವೆ. ನೀವು ನನ್ನದು ಹೇಳುವುದು. ನಾನು ಹಿಂದಿನವರದ್ದು ಹೇಳಿದರೆ ಖಂಡಿತವಾಗಿಯೂ comparison ನಲ್ಲಿ ನಿಮ್ಮ budget ದಲ್ಲ.

ಶ್ರೀ ಎಂ.ಬಿ. ಪಾಟೀಲ್:- ತಾವು CADA ಬಗ್ಗೆ ಪ್ರಸ್ತಾಪ ಮಾಡಿದಿರಿ. ಉತ್ತರದಲ್ಲಿ ಹೇಳುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:- ನಮ್ಮದು ಇದ್ದ ಬಜೆಟ್, ನಿಮ್ಮದು ಇದ್ದ ಬಜೆಟ್, CADA ದ್ದು ತೆಗೆದುಕೊಳ್ಳಿ. CADA ಇದ್ದಾಗ ನಾನು ಬರುವ ಮುಂಚೆ ಎಷ್ಟು ಖರ್ಚಾಗುತ್ತಿತ್ತು? ನಾವು ಬಂದಾಗ ಎಷ್ಟು ಖರ್ಚಾಗಿದೆ? ನೀವು ಬಂದಮೇಲೆ ಎಷ್ಟು ಖರ್ಚಾಗಿದೆ? ನಾವು ಕೇಂದ್ರಸರ್ಕಾರಕ್ಕೆ ಹೋಗಿ 606 ಕೋಟಿ ರೂಪಾಯಿಗಳ MoU ಮಾಡಿ CADA ದಲ್ಲಿ ಸವಳು ಜವಳು ತೆಗೆದಯುವ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದು ನಮ್ಮ ಕಾಲದಲ್ಲಿ. ಈ ವರ್ಷ ನೀವು ಕೇವಲ 8 ಸಾವಿರ ಹೆಕ್ಟೇರ್ ಪ್ರದೇಶವನ್ನು ತೆಗೆದಿದ್ದೀರಿ. ಸರಿಯೇ? 8,800 ಹೆಕ್ಟೇರ್ ಪ್ರದೇಶ ಮಾತ್ರ ತೆಗೆದಿದ್ದೀರಿ. ಇದರಲ್ಲಿ ನೀವೇ ಹೇಳಿದ್ದೀರಿ. ಅದು ಸರಿಯೇ? ನಿಮಗೆ ಸಮಾಧಾನವಿದೆಯೇ? ಸುಮಾರು 3 ಲಕ್ಷಕ್ಕಿಂತ ಹೆಚ್ಚು ಹೆಕ್ಟೇರ್ ಸವಳು ಜವಳಾಗಿದೆ.

ಅಧ್ಯಕ್ಷರು:- ಅದರ ಜೊತೆಗೆ, ನಾವೆಲ್ಲರೂ ಚಿಂತನೆ ಮಾಡಬೇಕು. ಜವಳು ಆಗಿದೆ, ಅದನ್ನು ನಿಲ್ಲಿಸುವುದು ಹೇಗೆ ಅದು ಒಂದಾದರೆ, ಇದು ಮುಂದೆ ಆಗದ ಹಾಗೆ ನೋಡಿಕೊಳ್ಳಬೇಕಾದ ಒಂದು ಜವಾಬ್ದಾರಿ ಇದೆ.

ಶ್ರೀ ಬಸವರಾಜ ಬೊಮ್ಮಾಯಿ:- ಹೌದು.

ಶ್ರೀ ಎಂ.ಬಿ. ಪಾಟೀಲ್:- ಸುಮಾರು 7 ಲಕ್ಷ ಎಕರೆ ಸವಳು ಜವಳಾಗಿದೆ. ತಾವು ಹೇಳಿದಹಾಗೆ, ಸವಳು ಜವಳಾಗಿದ್ದನ್ನು ಯಾವ ರೀತಿ ಎಂದು ನೋಡಬೇಕು. ಸವಳು ಜವಳು ಆಗದ ಹಾಗೆ ನೋಡಿಕೊಳ್ಳುವುದು ಕೂಡ ಮುಖ್ಯ

ಅಧ್ಯಕ್ಷರು:- ಇದಕ್ಕೆ ಕಾರಣವಿಷ್ಟೇ. ನಮ್ಮ ರೈತರಿಗೆ ಯಾವಾಗ ಎಷ್ಟು ನೀರು ಬಿಡಬೇಕೆನ್ನುವುದು ಗೊತ್ತಿಲ್ಲ. ನೀರು ಬರುತ್ತದೆ. ಬಿಟ್ಟ, ಮನೆಗೆ ಹೋಗಿ ಮಲಗಿದ. ಅದು ಹೋದ ಹಾಗೆ ಹೋಗುತ್ತದೆ. ಬಿಟ್ಟಹಾಗೆ ಬಿಟ್ಟರು.

ಶ್ರೀ ಎಂ.ಬಿ. ಪಾಟೀಲ್:- ನಾವು ಆಂಧ್ರಪ್ರದೇಶ, ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ ಈ 4 ರಾಜ್ಯಗಳಿಗೆ ಎರಡು ಟೀಂಗಳನ್ನು ಕಳುಹಿಸಿದ್ದೆವು. CADA ವ್ಯವಸ್ಥೆ ಬಗ್ಗೆ ಹೇಳುತ್ತೇನೆ. ನಮ್ಮಲ್ಲೇನಾಗಿದೆ ಎಂದರೆ, CADA ಮತ್ತು ನಮ್ಮ ಧಾರವಾಡದಲ್ಲಿ ವಾಲ್ಮಿ ಏನಿದೆ ಮತ್ತು KERS ಈ ಮೂರು ಕೂಡ almost defunct ಆಗಿವೆ. ನಾನು ಈ ಮಾತನ್ನು ಹೇಳಬೇಕಾಗುತ್ತದೆ. ಅದನ್ನು revive ಮಾಡಲಿಕ್ಕೆ 2 ಟೀಂ ಕಳುಹಿಸಿ, ಅವರು report ಕೊಟ್ಟು ಸುಮಾರು 40 recommendations ಮಾಡಿದ್ದಾರೆ. ಆ 40 recommendations ನಲ್ಲಿ immediate ಆಗಿ ಏನು ಮಾಡಬೇಕೆಂದರೆ, medium term, long term ನಲ್ಲಿ ಏನು ಮಾಡಬೇಕೆಂಬ process ಅನ್ನು ನಾವು ಪ್ರಾರಂಭ ಮಾಡಿದ್ದೇವೆ.

ಅಧ್ಯಕ್ಷರು:- ಅದು ಬಹಳ ಮುಖ್ಯ. ನಾನೇಕೆ ಹೇಳುತ್ತೇನೆಂದರೆ, ನಾನು ದಿವಸ ಅಲ್ಲಿ ಓಡಾಡುತ್ತೇನೆ. ಚನ್ನಗಿರಿ ಬದಿಯಲ್ಲಿ ಓಡಾಡುತ್ತೇನೆ ಭತ್ತ ಬೆಳೆಯುವ ಕಡೆಗೆ ಈಗ ತೋಟ ಹಾಕಿಬಿಟ್ಟಿದ್ದಾರೆ. ಜಾಸ್ತಿ ಹಿಡುವಳಿ. ಕೂಲಿ ಸಿಗುವುದಿಲ್ಲ ಎಂದು ಹಾಕಿಬಿಟ್ಟಿದ್ದಾರೆ. ನೀರು ಬಿಟ್ಟಿರೋ 2 ದಿವಸ ನೀರು ತುಂಬಿ ತುಂಬಿ ಹರಿದು ಹೊಳೆ ಸೇರುತ್ತದೆ. ಆದ್ದರಿಂದ ನೀರಿನಂಥ ಅಪರೂಪದ ವಸ್ತು ಮತ್ತೊಂದಿಲ್ಲ. ಅದು ಅಮೃತವಿದ್ದಹಾಗೆ. ಅದನ್ನು ಬಳಸಿಕೊಳ್ಳತಕ್ಕಂಥ ವಿಚಾರದಲ್ಲಿ ನಾವು ಯಶಸ್ವಿಯಾದರೆ ನಮ್ಮ ಜನರಿಗೆ ಆ ಸಂಸ್ಕೃತಿಯನ್ನು ನಾವು ಕಲಿಸಿದ್ದೇ ಆದರೆ ಖಂಡಿತ ಈಗ ಇರತಕ್ಕಂಥ ನೀರಾವರಿಯಲ್ಲಿ ಹೆಚ್ಚು ಮಾಡುವುದಕ್ಕೆ ಸಾಧ್ಯ. ಕಾಗೇರಿಯವರೆ, ಏನು? Level ground ಅಲ್ಲ. ನಮ್ಮದೆಲ್ಲ valley type. ಹಾಳಿ ಹಾಕಿಕೊಂಡು, ಬದು ಹಾಕಿಕೊಂಡು ಹೋಗುತ್ತೇವೆ

ಶ್ರೀ ಎಂ. ಬಿ. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುತ್ತೇನೆ. ತಾವು ಹೇಳಿದ ಹಾಗೆ, ಇವತ್ತಿನ ದಿವಸ ನೀರು ಹರಿಸಿ ನೀರನ್ನು

ಪೋಲು ಮಾಡುತ್ತಿದ್ದೇವೆ. ಮುಖ್ಯವಾಗಿ, ನಮ್ಮ cropping pattern. ನಮ್ಮ ರಾಜ್ಯದಲ್ಲಿ ಕಬ್ಬಿನ ವಿಚಾರದಲ್ಲಿ ಬಹಳ ದೊಡ್ಡದಾಗಿ ಸಮಸ್ಯೆ ಆಗಿದೆ. ತಮಗೆ ಗೊತ್ತಿರಬೇಕು. ಈ ರಾಜ್ಯದಲ್ಲಿ ಕಬ್ಬು ಬೆಳೆಯಲು ಪರವಾನಿಗೆ ಇರುವಂಥದ್ದು ಕೇವಲ 40 ಸಾವಿರ ಹೆಕ್ಟೇರ್ ಕಾವೇರಿಯಲ್ಲಿ. ಆದರೆ, ಇವತ್ತು ಕಬ್ಬು ಬೆಳೆಯುತ್ತಿರುವುದು ಎಂದರೆ, recent ಅಂದಾಜು ಪ್ರಕಾರ, ನಾನು ಮೊನ್ನೆ ನೋಡಿದಾಗ, micro irrigation scheme ಮಾಡಿದಾಗ ಸುಮಾರು 4.5 ;ಲ್ಷ ಹೆಕ್ಟೇರ್ ಇತ್ತು, ಅದು ಈಗ ಸುಮಾರು 5.5 ಲಕ್ಷ, 6 ಲಕ್ಷ ಹೆಕ್ಟೇರ್ ಆಗಿದೆ. ಅಂದರೆ, 40 ಸಾವಿರ ಹೆಕ್ಟೇರ್ ಹೊರತುಪಡಿಸಿ ಇನ್ನುಳಿದ ಕಬ್ಬು ಏನು ಬೆಳೆಯುತ್ತಿದ್ದೇವೆ, ಇದೆಲ್ಲವನ್ನೂ ಇವತ್ತಿನ ದಿವಸ ನಾವು ವಿಚಾರ ಮಾಡಬೇಕಾಗಿದೆ. ಇದನ್ನು ಮಾತನಾಡಿರೆ ನಾನು ರೈತರ ವಿರೋಧಿ ಎನ್ನುತ್ತಾರೆ. ಇದೆಲ್ಲ crop violation ಇರುವಂಥದ್ದು. Crop violation ಇದ್ದಾಗ, ಇದು ನೂರಾರು ವರ್ಷಗಳಿಂದ ಬಂದಿದೆ. ಅದನ್ನು ನಾವು ಈಗ ಒಮ್ಮಿಂದೊಮ್ಮೆಲೇ ಬಂದ್ ಮಾಡುತ್ತೇವೆ ಎನ್ನುವುದಕ್ಕಾಗುವುದಿಲ್ಲ. ಅದಕ್ಕೆ ಪರ್ಯಾಯವಾಗಿ ಇವತ್ತಿನ ದಿವಸ ಕಬ್ಬು ಬೆಳೆಗೆ tripartite agreement ಮಾಡಿಕೊಂಡು sugarcane factories, ಸರ್ಕಾರ ಮತ್ತು ರೈತ ಏನೋ ಒಂದು ಪ್ರಯತ್ನ ಮಾಡುತ್ತಿದ್ದೇವೆ. ಮುಂದಿನ ವಾರದಲ್ಲಿ ಮೀಟಿಂಗ್ ಇದೆ. MoU sign ಮಾಡಿ, ಆ ಪ್ರಕ್ರಿಯೆ ಕೂಡ ನಡೆದಿದೆ. ಇದೂ ಕೂಡ ವಾಸ್ತವ ಸಂಗತಿ. ಆಮೇಲೆ, ನಮ್ಮ ಯಾವುದೇ ಯೋಜನೆಗಳು ಕೂಡ ಕಬ್ಬು ಮತ್ತು ಭತ್ತ ಬೆಳೆಯಲು ಆ ಯೋಜನೆಗಳೇ ಇವತ್ತಿನ ದಿವಸ ತಯಾರು ಮಾಡಿದ್ದೆವು. ಹೀಗಾಗಿ, tail end ಗೆ ನೀರು ಹೋಗುತ್ತಿಲ್ಲ. ನಮ್ಮ ಯೋಜನೆಗಳೇನಿವೆ, ಅವು semi wet crop ಇವತ್ತಿನ ದಿವಸ ಮಾಡಿದ್ದೇವೆ. Crop violation ಕೂಡ ದೊಡ್ಡ ಸಮಸ್ಯೆಯಾಗಿದೆ. ಅದನ್ನೂ ಕೂಡ ನಾವು address ಮಾಡಬೇಕಾಗಿದೆ. ಪುಟ್ಟಣ್ಣಯ್ಯನವರು ಇಲ್ಲಿದ್ದಾರೆ. ಅವರೆಲ್ಲರ ಸಹಕಾರ ತೆಗೆದುಕೊಂಡು ನಾವು ಇದನ್ನೂ ಯಾವ ರೀತಿ ಮಾಡಬಹುದು.

ಶ್ರೀ ಬಸವರಾಜ ಬೊಮ್ಮಾಯಿ:– ಏನೂ ಮಾಡುವುದಕ್ಕಾಗುವುದಿಲ್ಲ. ಬಿಡಿ.

ಶ್ರೀ ಎಂ.ಬಿ. ಪಾಟೀಲ್:– ಯಾವಾಗಲೂ ಕೂಡ ನೀರಾವರಿ ಇಲಾಖೆ ಬಗ್ಗೆ ಟೀಕೆಗಳು ಇರುತ್ತವೆ. ಆತ್ಮಾವಲೋಕನ ಮಾಡಿಕೊಳ್ಳಬೇಕು. ಅದಕ್ಕೆ solution ಕಂಡುಹಿಡಿದಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ:– ನಿಮ್ಮ ಕಾಲದಲ್ಲಿ ಬಂದಿಲ್ಲ, ನಮ್ಮ ಕಾಲದಲ್ಲಿ ಬಂದಿಲ್ಲ. ಏನೂ ಮಾಡುವುದಕ್ಕಾಗುವುದಿಲ್ಲ. DLBC ಯಲ್ಲಿ High Court order ಆಗಿದೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):– ನಿಮಗೆ crop violation ಆಗುತ್ತಿದೆ ಎಂದು ಗೊತ್ತಾಗಿದೆ. Blue print ನಲ್ಲಿ change ಮಾಡಿ. ಇಷ್ಟೊಂದು command ಮಾಡುವುದಕ್ಕೆ ಹೋಗಬೇಡಿ. Notify ಮಾಡುವ area ದಲ್ಲಿ ಯಾವ crops ಬೆಳೆಯಬಹುದು, ಅದಕ್ಕೆ ಭತ್ತ, ಕಬ್ಬು ಎಂದು ತಿಳಿದುಕೊಂಡು notify ಮಾಡಿ. Area ಕಡಿಮೆ ಮಾಡಿ. Infrastructure ಗೇಕೆ ಹಣ ಹಾಕುತ್ತೀರಿ? ಅದನ್ನೂ ಹಾಳು ಮಾಡುತ್ತೀರಿ. ಇಲ್ಲಿ ಇವರನ್ನೂ ಹಾಳು ಮಾಡುತ್ತೀರಿ. ರಾಯಚೂರು ಹತ್ತಿರ ಇನ್ನೂ 20 ಸಾವಿರ ಹೆಕ್ಟೇರ್‌ನಷ್ಟು ನೀರಾವರಿಯಾಗಬೇಕು. ಜಿ.ಎಸ್. ಪಾಟೀಲರು ಕಾಲುವೆ ಮಾಡಿದರು. ಇವತ್ತಿಗೂ ಕಾಲುವೆಯಲ್ಲಿ ಒಂದು ಹನಿ ನೀರಿಲ್ಲ. 1972 ರಿಂದ ಮುಂದೆ ನಮ್ಮ ILBC ಯಲ್ಲಿ ಒಂದು ಹನಿ ನೀರು ಬರುತ್ತಿಲ್ಲ.

ಅಧ್ಯಕ್ಷರು:– ಏಕೆ? ಕಾರಣವೇನು?

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):– ಅದೇ ಹೇಳುತ್ತಿದ್ದೇನೆ. ಎಲ್ಲರೂ crop violation ಮಾಡುತ್ತಾರೆ. ಇವರು ಕೈ ತೊಳೆದುಕೊಂಡುಬಿಡುತ್ತಾರೆ. ನಾವು ನೀರು ಕೊಡಬೇಕಾಗಿತ್ತು. ನಮ್ಮ ಕೆಲಸವಲ್ಲ. Revenue Department ನವರು ನೋಡಿಕೊಳ್ಳಬೇಕೆನ್ನುತ್ತಾರೆ.

ಅಧ್ಯಕ್ಷರು:– ನಾಡಗೌಡರೆ, ಪಕ್ಷಾತೀತವಾಗಿ ಇದನ್ನು ಆಲೋಚನೆ ಮಾಡಿ ಕಾರ್ಯಕ್ರಮ ರೂಪಿಸತಕ್ಕಂಥ ಅವಶ್ಯಕತೆ ಇದೆ ರಾಯರೆಡ್ಡಿಯರೆ. ಭದ್ರಾ ಚಾನೆಲ್‌ನಲ್ಲಿ ನಾನೇ ನೋಡಿದ್ದೇನೆ. ಅಲ್ಲಿ ನಮ್ಮದು ಒಂದು ಲಕ್ಷ authorized ಅಚ್ಚುಕಟ್ಟು ಇದ್ದರೆ ಅದು ಎರಡೂವರೆ ಲಕ್ಷ ಹೋಗಿದೆ. ಈಗ

ಏನಾದರೂ ಮುಟ್ಟಲಿಕ್ಕೆ ಹೋದರೆ ಕಷ್ಟ, ಒಂದು ಸಾರಿ ಹೀಗೆ ಹೋದೆ ಬೆನ್ನತ್ತಿಕೊಂಡು ಬಿಟ್ಟರು, ಕೊನೆಗೆ ಪುಟ್ಟಣ್ಣಯ್ಯನವರು ಹಸಿರುವ ಶಾಲು ಹಾಕಿ ಎದ್ದು ಬಿಟ್ಟರು. ಆದ್ದರಿಂದ ಬಹಳ ಅಪಾಯವಿದೆ, ಆದರೂ ಚಿಂತೆಯಿಲ್ಲ ರಾಜಕೀಯ ದೃಷ್ಟಿಯಿಂದ ನೋಡುವುದಕ್ಕೆ ಹೋಗಬಾರದು, ಅವರುಗಳಿಗೆ ಹೇಳಬೇಕು. ಏಕೆಂದರೆ, ಅವರು ಇದನ್ನು ಹೊಡೆಯುತ್ತಾರೆ. ಇಂದು ಚಿಂತನೆ ಮಾಡಬೇಕಾದ ಅಗತ್ಯವಿದೆ. ನಮ್ಮ ನೀರನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಒಳ್ಳೆಯ ಬೆಳೆ ಬೆಳೆದರೆ ಇವತ್ತು ಬೆಳೆಯುತ್ತಿರುವುದಕ್ಕಿಂತ ಎರಡರಷ್ಟು ಬೆಳೆಯುವುದಕ್ಕೆ ನಮ್ಮ ರೈತರಿಗೆ ಆಗುತ್ತದೆ. ಪಾಪ ಅವನು ಬೆಳೆದಿರುವ ಸಂಸ್ಕೃತಿಯಲ್ಲಿ ನೀವು ಅವನಿಗೆ ಇದೆಲ್ಲಾ ಹೇಗೆ ಹೇಳುತ್ತೀರಿ? ಗಂಗಾವತಿ ಅಲ್ಲಿ ಎಲ್ಲಾ ಏನು ಕಥೆ ಇದೆ ಎಂದು ಅವರನ್ನು ಕೇಳಿ ನೋಡಿ.

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):– ಮಾನ್ಯ ಅಧ್ಯಕ್ಷರೆ, ಗಂಗಾವತಿಯಲ್ಲಿ ಭತ್ತ ಬೆಳೆ ಬೆಳೆಯುವುದನ್ನು ಬಿಟ್ಟರೆ ಬೇರೆ ಬೆಳೆ ಬೆಳೆಯುವುದಕ್ಕೆ ಪರವಾನಿಗೆಯೇ ಇಲ್ಲ.

(ಗೊಂದಲ)

ಅಧ್ಯಕ್ಷರು:– ಒಳ್ಳೆಯ ಭತ್ತ ಬೆಳೆಯುತ್ತಾರೆ. ಅದರ ಬಗ್ಗೆ ಎರಡು ಮಾತಿಲ್ಲ.

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ:– ಮಾನ್ಯ ಅಧ್ಯಕ್ಷರೆ, ನಮ್ಮ ಪರಿಸ್ಥಿತಿ ಹೇಗೆ ಆಗಿದೆ ಎಂದರೆ, cancer patient ಆದಂಗೆ ಆಗಿದೆ. Pethidine injection ಕೊಟ್ಟರೆ ನಾವು ಬದುಕುತ್ತೇವೆ. ಭತ್ತ ಇಲ್ಲದಿದ್ದರೆ ಏನೂ ಬೆಳೆಯುಲಿಕ್ಕೆ ಆಗುವುದಿಲ್ಲ ಆ ಪರಿಸ್ಥಿತಿಯಲ್ಲಿ ನಾವಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಭತ್ತಕ್ಕೆ 24 ಗಂಟೆ ನೀರು ನಿಲ್ಲಿಸಬೇಕಾದ ಅಗತ್ಯವಿರುವುದಿಲ್ಲ. ಒಂದು ಸಾರಿ ನಾವು ಒಂದಿಂಚು ನೀರು ತುಂಬಿಸಿ ಬಿಟ್ಟು ಬಿಟ್ಟರೆ 8 ದಿವಸ ಸಾಕು. ಅದನ್ನು ನಾವ್ಯಾರೂ ಮಾಡುತ್ತಿಲ್ಲ. ಯಾರಾದರೂ water man ಎಂದು ಇದ್ದಾರೆಯೇ?

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ:– ಈಗ ತಾವು ಹೇಳಿದ ವಿಚಾರ, ಅಲ್ಪ ನೀರು ಹೆಚ್ಚಿನ ನೀರಾವರಿ ನೋಡಬೇಕೆಂದರೆ ನಮ್ಮ ಗಂಗಾವತಿ, ಸಿಂಧನೂರಿನಲ್ಲಿಯೇ ನೋಡಬೇಕು. ನೀರಿನ ಪ್ರಮಾಣವನ್ನು ನಾವು ಉಪಯೋಗಿಸುವುದು ಬಹಳ ಕಡಿಮೆ. Urea ಬಹಳ.

ಅಧ್ಯಕ್ಷರು:– ಆದ್ದರಿಂದಲೇ ನೀವು ಜಾಸ್ತಿ ಬೆಳೆಯುತ್ತಿದ್ದೀರಿ.

ಶ್ರೀ ಹಂಪನಗೌಡ ಬಾದರ್ಲಿ:– ಹೌದು ಹೌದು.

(ಗೊಂದಲ)

ಅಧ್ಯಕ್ಷರು:– ಖಂಡಿತ.

ಶ್ರೀ ಹಂಪನಗೌಡ ಬಾದರ್ಲಿ:– ನೀರಿನ ಪ್ರಮಾಣ ಬಹಳ ಕಡಿಮೆ use ಮಾಡಿ ಇಳುವರಿ ಜಾಸ್ತಿ ತೆಗೆಯುತ್ತೇವೆ.

ಶ್ರೀ ಬಸವರಾಜ್ ರಾಯರೆಡ್ಡಿ:– ನೀರು ಕಡಿಮೆ use ಮಾಡುತ್ತಾರೆ, ಆದರೆ ನೀರು ಹಳ್ಳಕ್ಕೆ ಬಿಡುತ್ತಿರುತ್ತಾರೆ.

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ:– ಇಲ್ಲ ಇಲ್ಲ, ರಾಯರೆಡ್ಡಿಯವರೆ, ದಯವಿಟ್ಟು ಆ ಮಾತನ್ನು ಹೇಳಬೇಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ರಾಯರೆಡ್ಡಿಯವರೆ, correct

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ:- ಸಾರ್ ನಾವು ಒಂದೊಂದು crop ಗೂ claculation ಮಾಡುತ್ತೇವೆ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ:- ಮಾನ್ಯ ಅಧ್ಯಕ್ಷರೆ, ಹಂಪನಗೌಡ, ರಾಯರೆಡ್ಡಿ, ಎಂದು ಗದ್ದಿಗೆ ಹೋಗಿದ್ದಾರೆ ಹೇಳಿ ಬಿಡಲಿ. ಹತ್ತಿಪ್ಪತ್ತು ವರ್ಷಗಳಲ್ಲಿ ನೀವಿಬ್ಬರೂ ಎಂದಾದರೂ ಗದ್ದಿಗೆ ಹೋಗಿದ್ದೀರಾ? ಸುಮ್ಮನೆ ಇಲ್ಲಿ ಕುಳಿತು ಕಥೆ ಹೇಳುತ್ತೀರಿ ಅಷ್ಟೇ. ನೀವಿಬ್ಬರೂ ಗದ್ದಿ ನೋಡಿಲ್ಲ. ದೊಡ್ಡ ದೊಡ್ಡ ಗೌಡ್ರು ನೀವು ಗದ್ದಿಗೆ ಹೋಗುವುದಿಲ್ಲ ಬಿಡುವುದಿಲ್ಲ, ಗದ್ದಿಗೆ ಹೇಗೆ ನೀರು ಬಿಡುತ್ತಾರೆ? ನೀವಿಬ್ಬರೂ ಗದ್ದಿಗೆ ಹೋಗಿರುವ ಉದಾಹರಣೆ ಹೇಳಿ.

ಶ್ರೀ ಹಂಪನಗೌಡ ಬಾದರ್ಲಿ:- ನೀವು sugar factory ಹಾಕಿದ್ದೀರಿ. ಅವರು ಕಬ್ಬು ಬೆಳೆಯುತ್ತಾರೆ, ಎಂದು ಕಬ್ಬಿನ ಗದ್ದಿಗೆ ಹೋಗಿದ್ದಾರೆ ಕೇಳ್ರಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ನಾಡಗೌಡರು ಹೋಗಿದ್ದಾರೆಯೇ ಕೇಳಿ.

ಶ್ರೀ ಉಮೇಶ್ ವಿ. ಕತ್ತಿ:- ನಾಡಗೌಡ್ರು, ನೀವಿಬ್ಬರೂ ಗದ್ದಿಗೆ ಹೋಗಿಲ್ಲ.

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ:- ಉಮೇಶ್ ಕತ್ತಿಯವರೆ, ಗದ್ದಿಗೆ ಹೋಗಿದ್ದು ತೋರಿಸಿದರೆ ನೀವು ಏನು ಮಾಡುತ್ತೀರಿ?

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):- ರೀ ಉಮೇಶ್ ಕತ್ತಿಯವರೆ, ಅವರು ಬಾ ಎಂದು ಏಕೆ ಹೇಳುತ್ತಿದ್ದಾರೆಂದರೆ, ಅವರು ಎಷ್ಟು ಎಣ್ಣೆ ಮುಡಿ ಹೊಡೆದಿರುತ್ತಾರೆಂದರೆ, ನೀವು ಹೋದರೆ ಸತ್ತು ಬಿಡುತ್ತೀರಿ, ಬದುಕುವುದೇ

ಇಲ್ಲ. ಅಲ್ಲಿ ಹಂಪನಗೌಡ್ರು ಒಬ್ಬರೇ ಬದುಕುತ್ತಾರೆ. ನಾವು ನೀವು ಅಲ್ಲಿ ಬದುಕುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಅಧ್ಯಕ್ಷರು:– ನಾಡಗೌಡ್ರೆ. ಇಲ್ಲಿ ಇದನ್ನೆಲ್ಲಾ ನಾವು ಗಮನಿಸಿದರೆ water management ನಲ್ಲಿ ತಪ್ಪಿದ್ದೇವೆ. ಈಗಲಾದರೂ ಕೂಡ ಅದನ್ನು ಸರಿಪಡಿಸಬೇಕಾದಂತಹ ಅಗತ್ಯವಿದೆ. 21 ಶತಮಾನದಲ್ಲಿದ್ದೇವೆ, ಮಾತಿಗೆ ಹೇಳಿದರೆ ಇದು ವೈಜ್ಞಾನಿಕ ಯುಗ, ಬದಲಾವಣೆಯ ಯುಗ, ಏನು ರಾಯರೆಡ್ಡಿ?

ಶ್ರೀ ಬಸವರಾಜ್ ರಾಯರೆಡ್ಡಿ:– Water management ಅಲ್ಲ.

(ಗೊಂದಲ)

ಅಧ್ಯಕ್ಷರು:– ಈಗ ಮಂಡ್ಯದವರನ್ನು ಕೇಳಿ ಅವರೇನು ಹೇಳುತ್ತಾರೆ ನೋಡೋಣ. ಊರಿಗಿಂತ ಮುಂಚೆ ನೀರಾವರಿ ಪಡೆದವರು.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ಹೇಳಲಿಕ್ಕಾಗಿಯೇ ಎದ್ದು ನಿಂತೆ, ತಾವು ಕೊನೆಗೆ finish ಮಾಡಿದಿರಿ. Water maintenance zero. Throughout Karnataka, ಎಲ್ಲಾ project ಕಾವೇರಿ ಅಚ್ಚುಕಟ್ಟು ಅಥವಾ ಭದ್ರಾ ಮೇಲ್ದಂಡೆ ಇರಬಹುದು ಎಲ್ಲಾ ಕಡೆ ಅಷ್ಟೆ. ಜೊತೆಗೆ maintenance ಇದೆಯಲ್ಲ very very poor. ದಯಮಾಡಿ, ಮಾನ್ಯ ಎಂ.ಬಿ. ಪಾಟೀಲ್‌ರವರೆ ಕೇಳಿ. Maintenance zero, water maintenance zero, ಜೊತೆಗೆ ನಿಮ್ಮಲ್ಲಿ engineers ಕೊರತೆ ಸಿಕ್ಕಾಪಟ್ಟೆ ಇದೆ. ನೀವು project ನ್ನು announce ಮಾಡಿಕೊಂಡು ಹೋಗುತ್ತಿದ್ದೀರಿ. 25 ವರ್ಷಗಳಾದರೂ ನೀವು ಮಾಡಿರತಕ್ಕಂಥ projects ಗಳನ್ನು complete ಮಾಡುವುದಕ್ಕಾಗುವುದಿಲ್ಲ. ನಾವು ಕಾವೇರಿ ಅಚ್ಚುಕಟ್ಟಿನಲ್ಲಿ tail end ಗಳಲ್ಲಿ ಕಾಲುವೆಯಲ್ಲಿ ನೀರು ಹೋಗದಿರುವಂಥವುಗಳಿಗೆ ಕಳೆದ ಎರಡು

ವರ್ಷಗಳಿಂದ ಬಡಿದುಕೊಂಡರೂ ಮಾಡಲಿಕ್ಕಾಗಿಲ್ಲ. ಇನ್ನು ನೀವು ಯಾವ project ನಲ್ಲಿ ಮಾಡುತ್ತೀರಿ? ಸಾಧ್ಯವೇ ಇಲ್ಲ, ನಾವು helpless ಮಾಡುವುದಕ್ಕೆ ಆಗುವುದಿಲ್ಲವೆಂದು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ನೀವು ಆಡಳಿತದ ವ್ಯವಸ್ಥೆ ಹೇಗೆ ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. Secretariat, ನಿಮ್ಮ ನಿಗಮದ engineer ಗಳನ್ನು ಹೇಗೆ ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. Totally, ನೀವು ಸಾಹೇಬ್ರು ಹೇಳಿದ ಹಾಗೆ maintenance ನ್ನು improve ಮಾಡಿದರೆ violation ಇದ್ದರೂ ಕೊನೇಭಾಗಕ್ಕೆ 30 to 40% problem ಆಗಬಹುದು, at least ನೀರು ಕೊಡಬಹುದು. ನೀರು ಕೊಡಲಿಕ್ಕೆ ಆಗದಿರುವಂಥ area ವನ್ನು maintenance ನಿಂದ improve ಮಾಡಬಹುದು.

(ಗೊಂದಲ)

ಅಧ್ಯಕ್ಷರು:- ನಮ್ಮ ಹಿರಿಯರು ಕೆರೆ maintain ಮಾಡುವುದಕ್ಕೆ ನೀರುಗಂಟಿ ಇಟ್ಟುಕೊಳ್ಳುತ್ತಿದ್ದರು. ಈಗ ನೀರುಗಂಟಿ ಎನ್ನುವ ಹೆಸರು ಎಲ್ಲಿಂದ ಬಂತು? ನೀರಾವರಿ ಇಲ್ಲವೇ? ಈಗ ನೀರು ನೀರುಗಂಟಿ ನೇಮಕ ಮಾಡಿಕೊಂಡಿದ್ದೀರಾ? ಇಲ್ಲ. ನೀರು ಬಿಡುವವರು ಯಾರು? ನೀರು ಕಟ್ಟುವವರು ಯಾರು? ನೋಡುವವರೇ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ಇದ್ದಾರೆ out source ಮಾಡುತ್ತಾರೆ.

ಅಧ್ಯಕ್ಷರು:- ಯಾವ out sorce ರೀ?

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ:- ಮೊನ್ನೆ ಯಾರೋ Council ನಲ್ಲಿ question ಮಾಡಿದ್ದಾರೆ. ನೀವು emergency ನಾಳೆ ನೀರು ಬಿಡಬೇಕು. ಕಾಲುವೆಯಲ್ಲಿ ಹೂಬು ಕಟ್ಟಿಕೊಂಡಿದೆ, ಅದು ಒಡೆದು ಹಾಕಲಿಕ್ಕೆ 50 ಸಾವಿರ ಬೇಕು. ರೀ ಯಾವನ್ರೀ 50 ಸಾವಿರ ಕೆಲಸ ಮಾಡುವುದಕ್ಕೆ ಹೇಳಿದವನು tender ಕರೆಯಿರಿ ಎಂದು close ಮಾಡಿದರು. ನಮ್ಮ Secretary order ಹೊರಡಿಸಿದ್ದಾರೆ. ಒಂದು ನಿಮಿಷ ಇಲ್ಲಿ ಕೇಳಿ. ಉತ್ತರ ಕೊಡಬೇಕಾದರೆ ಮಂತ್ರಿಗಳು defend ಮಾಡಿಕೊಳ್ಳಬೇಕು, ನಿಮ್ಮ ಇಲಾಖೆ, ನೀವು ಇಡೀ

ರಾಜ್ಯದ ಜನಕ್ಕೆ ನೀರು ಕೊಡಬೇಕು. ಅವಶ್ಯಕತೆ ಇದ್ದರೆ ಮಾಡುತ್ತೇನೆ ಎನ್ನಬೇಕು. ನಾವೇನಾದರೂ ನಿಮ್ಮನ್ನು ನುಂಗುತ್ತೇವೆಯೇ? ನಿಮ್ಮ ಅಧಿಕಾರಿಗಳನ್ನು ಯಾರಾದರೂ suspend ಮಾಡಿ ಬಿಡುತ್ತಾರೆಯೇ? ನೀವು ಇಂದಿನ ಕಾಲದಲ್ಲಿ ಜನರಿಗೆ ಸಮರ್ಥವಾಗಿ ನೀರು ಕೊಡತಕ್ಕಂಥ ಜವಾಬ್ದಾರಿಯ ಪುಣ್ಯದ ಕೆಲಸ ನಿಮ್ಮದು. ನಿಮ್ಮ ಇಲಾಖೆಯನ್ನು ಸಮರ್ಥವಾಗಿ ನಿರ್ವಹಿಸುವುದಕ್ಕೆ ಸೌಡಿಗಳಿಗೆ ಒಂದು rule ಮಾಡಿ. ಬೇಕಾದಷ್ಟು ಜನ ಸೌಡಿಗಳು road ನಲ್ಲಿ ಕುಳಿತುಕೊಂಡಿದ್ದಾರೆ. ಅವರ್‍ಯಾರೂ ಕೆಲಸ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಬಿ.ಆರ್. ಯಾವಗಲ್:- ಇದು ಒಂದು ರೀತಿ ನೀರು ಹೋಗಿ ಕೊನೆ ಮುಟ್ಟುವುದು miracle ಇದ್ದ ಹಾಗೆ. ಯಾರು ಬಂದು ನೀರು ಪ್ರಾರಂಭ ಮಾಡಿ ಎಂದು consultative committee ಯಿಂದ ಆದೇಶ ಬಂದರೆ ಅದು ನೀರು ಮುಗಿದ ಬಳಿಕ ಹೋಗಿ close ಮಾಡುತ್ತೀರಿ. ಒಬ್ಬರೂ ಬರುವುದಿಲ್ಲ. ನೀರು ಗಂಟಿ ಎಂದು ತಾವು ಹೇಳುತ್ತೀರಿ, ತಾಟ್ಕರಿ ಎಂದು ಹೇಳುತ್ತಾರೆ. ಇದಕ್ಕೆ ಕಾರಣ ಹೇಳುವುದು ಇಷ್ಟೆ. ಅದು ನೀವು ನೀರು ಜಾಸ್ತಿ ತೆಗೆದುಕೊಳ್ಳುತ್ತೀರಿ, violation ಇದೆ, ಮತ್ತೊಂದು ಇದೆ, ಎಂದು ಹೇಳುವವ ಕಾರಣ ಅಷ್ಟೆ ಹೇಳುತ್ತಾರೆ. ಸರಿಯಾದ ನಿರ್ವಹಣೆ ಮಾತ್ರ big zero.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ತಾವು ಹೇಳುತ್ತಿರುವುದು water user efficiency ಏನಿದೆ ಇದು ಬಹಳ ಮುಖ್ಯವಾಗಿರುವುದು. ಕಬ್ಬಿನ ಬೆಳೆಗೆ ನಾನು ಈಗ ಏನು ಹೇಳುತ್ತಿದ್ದೆ? ಇವತ್ತಿನ ದಿವಸ crop violation ಅದನ್ನು ಅದನ್ನು ತೆಗೆಯಲಿಕ್ಕಂತೂ ಆಗುವುದಿಲ್ಲ. ಏಕೆಂದರೆ, 5 ಲಕ್ಷ ಹೆಕ್ಟೇರ್ ನಷ್ಟು ಕಬ್ಬು ಇದೆ. ಅದಕ್ಕೆ solution ಗಾಗಿ ನಾವಿಂದು ಕಬ್ಬಿಗೆ micro irrigation concept, tripartite agreement ಮಾಡಿಕೊಂಡು ಪರ್ಯಾಯ

ಪರಿಹಾರವನ್ನು ಕಂಡುಕೊಂಡು ಮಾಡಿದ್ದೇವೆ. ಇದಲ್ಲದೆ ತಾವು ಭತ್ತಕ್ಕು ಕೂಡ ಹೇಳಿದಿರಿ. ಅದನ್ನೂ ಕೂಡ ನಾವಿಂದು identify ಮಾಡಿದೆವು. 25 ಜನ ಎಲ್ಲಾ ಬೇರೆ various scientists ಮತ್ತು ಯಾರು ಇಂದು paddy ಬೆಳೆದಿರುವಂಥವರು, ಎಲ್ಲರೂ ಕೂಡಿಕೊಂಡು ಒಂದು symposium ಮಾಡಿದರು, ಎಲ್ಲಿ ಕಡಿಮೆ ನೀರಿನಿಂದ ಇದನ್ನು ಯಾವ ರೀತಿಯಾಗಿ ಬಳಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಆ ಒಂದು ಪ್ರಯತ್ನ ಕೂಡ ನಡೆದಿದೆ. ಅದನ್ನು ಕೂಡ ಕಬ್ಬಿನ ನಂತರ ಆ ಒಂದು symposium ನ್ನು ಸಹ ನಾವು ನಡೆಸುತ್ತೇವೆ.

(ಗೊಂದಲ)

ಅಧ್ಯಕ್ಷರು:- ಆಯಿತು ಮಾಡಿ, ಬೇಗ ಪೂರೈಸಿ ಸಾಕು ಬಿಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಆಯಿತು conclude ಮಾಡಿ ಬಿಡುತ್ತೇನೆ. Water management ಬಗ್ಗೆ ನಾವು ಎಷ್ಟು ಮಾತನಾಡಿದರೂ ಕಡಿಮೆಯೇ. ಅದಕ್ಕೆ ಹಲವಾರು unauthorized pumpsets canal ನಲ್ಲಿವೆ. ಅದರ ಬಗ್ಗೆ ಇಲ್ಲಿ ಯಾರೂ ಮಾತನಾಡುವಂಥ ಪರಿಸ್ಥಿತಿಯಲ್ಲಿಲ್ಲ.

ಅಧ್ಯಕ್ಷರು:- ಮಾತನಾಡಿದರೆ ಹಸಿರು ಶಾಲು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಅದು ಬರುತ್ತವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಕರ್ನಾಟಕದಲ್ಲಿ pumpsets ಹಾಕಿಕೊಂಡು ಸುಮಾರು 35, ತಮಿಳು ನಾಡಿನಲ್ಲಿಯೂ ಆದೇರೀತಿ ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು:- ರೀ ಪುಟ್ಟಣ್ಣಯ್ಯನವರೆ, ಬದುಕಿನಲ್ಲಿ ಒಂದು ಸಂಸ್ಕೃತಿ ಬೆಳೆಯಬೇಕು. ಸರ್ಕಾರ ಎಂದು ಏಕಿರಬೇಕು? ನೀರಾವರಿ ಇಲಾಖೆ ಏಕಿರಬೇಕು? ನೀರು ಇತ್ತೋ ಅವರ ಅನುಮತಿ ತೆಗೆದುಕೊಂಡು ಹಾಕಿಕೊಳ್ಳಿ, ಹಾಗೆ ಹೋಗುವುದು ಹಾಕುವುದು, ನಂದೇ ರಾಜ್ಯ ಎಂದು ಹೊಡಿದಿದ್ದೇ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಪುಟ್ಟಣ್ಣಯ್ಯನವರು ಹೇಳಿದರು. ತಮಿಳು ನಾಡಿಗೆ ನಮಗೆ ಬಹಳ ವ್ಯತ್ಯಾಸವಿದೆ. ಅವರು lower riparian ನಾವು upper riparian. ಅಲ್ಲಿ difference ಇದೆ.

ಶ್ರೀ ಬಸವರಾಜ್ ಬೊಮ್ಮಾಯಿ:- ಇರಲಿ ಬಿಡಿ. Water management ಬಗ್ಗೆ ಪುನರ್ ಚಿಂತನೆ ಮಾಡುವಂಥದ್ದು ಬಹಳ ಅವಶ್ಯಕತೆಯಿದೆ.

(ಗೊಂದಲ)

ಅಧ್ಯಕ್ಷರು:- It is a must.

ಶ್ರೀ ಬಸವರಾಜ್ ಬೊಮ್ಮಾಯಿ:- It is a must. ಇಲ್ಲದಿದ್ದರೆ ನಾವು ನೀರಾವರಿ ಯೋಜನೆಗಳನ್ನು ಮಾಡುತ್ತೇವೆ ನೀರು ಇರುವುದಿಲ್ಲ ಇಷ್ಟೇ. ಆದ್ದರಿಂದ ನಾನು ಆಗಲೇ beginning ನಲ್ಲಿ ಹೇಳಿದ್ದೇನೆ. ಇಷ್ಟು ವರ್ಷ water ನ್ನು ನಾವು store ಮಾಡುವುದಕ್ಕೆ ಅಲಕ್ಷ್ಯ ವಹಿಸಿದ್ದೇವೆ, ಇನ್ನು ಎಲ್ಲಾ ನಮ್ಮ ಲಕ್ಷ್ಯ water management ಗೆ ಇರಬೇಕು ಎನ್ನುವ ಮಾತನ್ನು beginning ನಲ್ಲಿ ನಾನು ಹೇಳಿದ್ದೇನೆ. ಎರಡನೆಯದಾಗಿ water audit ಇಲ್ಲ. ಹೀಗಾಗಿ ನಾವು ಇದ್ದಂಥ ಸಂದರ್ಭದಲ್ಲಿ ಒಂದು ಸಣ್ಣ ಪ್ರಯತ್ನ ಮಾಡಿದೆವು. Concurrent audit of water ಯೋಜನೆಯಲ್ಲಿ telemeter use ಮಾಡಿ ಇಲ್ಲಿ ಬೆಂಗಳೂರಿನಲ್ಲಿ ಯವ್ಯಾವ canal ನಲ್ಲಿ sub-distributory ನಲ್ಲಿ ಎಷ್ಟು ನೀರು ಹೋಗುತ್ತದೆ, ಸರಿಯಾಗಿ ಹೋಗಿದೆ ಇಲ್ಲವೋ, ಹೋಗಲಿಲ್ಲವೆಂದರೆ ಜಾಸ್ತಿ ಹೇಗೆ ಮಾಡಬೇಕು, ಕಡಿಮೆ ಹೇಗೆ ಮಾಡಬೇಕು, ಎಲ್ಲಾ ಇಲ್ಲಿಯೇ ನಾವು telemeter ನ್ನು use ಮಾಡಿದ್ದೇವೆ. ಇನ್ನೊಂದು ಏನಾಗಿದೆ ಎಂದರೆ, water cycle ಇರುತ್ತದೆ. ಹದಿನೈದು ದಿವಸ ಇಲ್ಲಿ ಬಿಟ್ಟರೆ ಹದಿನೈದು ದಿವಸ ಮುಂದೆ ಬಿಡಬೇಕು. ಅದನ್ನು ಸರಿಯಾಗಿ ಮಾಡುವುದಿಲ್ಲ. ನಿರಂತರವಾಗಿ ನೀರು ಬಿಡುತ್ತಾರೆ. ಆದರೆ. ಘಟಪ್ರಭಾದಲ್ಲಿ ಅದನ್ನು ಮಾಡಿದ ಮೇಲೆ 6 TMC ನೀರನ್ನು ಒಂದೇ ವರ್ಷದಲ್ಲಿ ನಾವು ಉಳಿಸಿದ್ದೇವೆ. ಆ ಪ್ರಯತ್ನವನ್ನು ನೀವು ಮಾಡಿ, water cycle ನ್ನು ನೀವು strict ಆಗಿ follow

ಮಾಡಿದರೆ ಎಷ್ಟೋ ನೀರು ಉಳಿತಾಯವಾಗುತ್ತದೆ, ಕೊನೆಯ ಭಾಗದಲ್ಲಿ ನೀರು ಮುಟ್ಟುತ್ತದೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಉಮೇಶ್ ಕತ್ತಿಯವರದ್ದು ಹೇಳಿದಿರಿ. ಹಿರಣ್ಯಕೇಶಿದು ನಮ್ಮ ಉಮೇಶ್ ಕತ್ತಿ ಸಾಹುಕಾರರು.

ಶ್ರೀ ಉಮೇಶ್ ವಿ. ಕತ್ತಿ:- ಒಂದೇ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಕತ್ತಿಯವರದ್ದು ಹಿರಣ್ಯಕೇಶಿ regenerated water ಬಗ್ಗೆ ಬೊಮ್ಮಾಯಿರವರು ಹೇಳಿದರು, ಅದು ಇನ್ನೂ ಕತ್ತಿಯವರ ಕೈಯಿಂದ ಹೊರಗೆ ಬಂದಿಲ್ಲ.

ಶ್ರೀ ಜೆ.ಟಿ. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಉಮೇಶ್ ಕತ್ತಿಯವರು ಇದ್ದಂಥ ಅವಧಿಯಲ್ಲಿ ನಮ್ಮ ಟೇಲ್ ಲ್ಯಾಂಡ್‌ಗೆ ನೀರು ಬರಲಿಲ್ಲ.

ಶ್ರೀ ಎಂ.ಬಿ. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೆ, ನಾನು ಹೋಗಿ ಅದನ್ನು inspection ಮಾಡಿದ ಮೇಲೆ ಅದನ್ನು complete ಮಾಡುವುದಕ್ಕೆ ಕ್ರಮ ಕೈಗೊಂಡಿದ್ದೇವೆ. ಈಗ ಕೇವಲ electrification ಮಾತ್ರ ಬಾಕಿ ಇದೆ.

ಶ್ರೀ ಉಮೇಶ್ ವಿ. ಕತ್ತಿ:- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಬ್ಬು ಬೆಳೆಗೆ ಒಟ್ಟು 20 ಸಾವಿರ ಹೆಕ್ಟೇರ್‌ಗೆ ಮಾತ್ರ ನೋಟಿಫೈ ಆಗಿದೆ. ಇದರಲ್ಲಿ ಮಂಡ್ಯ ಜಿಲ್ಲೆ ಕೂಡ ಸೇರಿದೆ. ಆದರೆ, ಇವತ್ತಿನದಿವಸ ನಾವ ರಾಜ್ಯದಲ್ಲಿ 6 ದಶ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬನ್ನು ಬೆಳೆಯುತ್ತಿದ್ದೇವೆ. ಇದರಿಂದ 6.20 ಕೋಟಿ ಟನ್ ಕಬ್ಬು ಉತ್ಪಾದನೆ ಆಗುತ್ತಿದೆ. ಇದಕ್ಕೆ 150 ರೂಪಾಯಿ tax ಮತ್ತೆ ಕಬ್ಬು ಹಾಕಿರುವುದರಿಂದ 1500 ರೂಪಾಯಿ ದಂಡ ಇದೆ. ಇದುವರೆಗೆ 150 ರೂಪಾಯಿ ತೆರಿಗೆ ಮತ್ತು 1500 ರೂಪಾಯಿ ದಂಡವನ್ನು ತುಂಬಿರತಕ್ಕಂಥ ಒಂದಾದರೂ ಉದಾಹರಣೆ ಇದೆಯೇ? ಯಾರದ್ದೋ ಕಣ್ಣು ಮುಚ್ಚುವಂಥ

ಕೆಲಸವನ್ನು ಮಾಡದೆ, ಎಷ್ಟೇ ಆದರೂ ಪರವಾಗಿಲ್ಲ ಎಂದು ಸರಿಯಾದ ಕೆಲಸ ಮಾಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ಮಾನ್ಯ ಉಮೇಶ್ ಕತ್ತಿಯವರೇ, ನಾನು ಒಂದು ಮಾತನ್ನು ಹೇಳುತ್ತೇನೆ ಕೇಳಿ. ನೀವು ಹಿಂದೆಯೇ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದೀರಿ. ಅಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ಲ್ಯಾಂಡ್ ಅಂದರೆ, ಇದು ಕಬ್ಬನ್ನು ಬೆಳೆಯುವ ಪ್ರದೇಶ ಎಂದು ಸರ್ಕಾರ ಕಡೆಯಿಂದ identify ಮಾಡಿ agreement ಮಾಡಿಕೊಂಡಿದ್ದೀರಾ?

ಶ್ರೀ ಉಮೇಶ್ ವಿ. ಕತ್ತಿ:– ಮಾನ್ಯ ಅಧ್ಯಕ್ಷರೆ, ನನ್ನ ಜಿಲ್ಲೆಯಲ್ಲಿ 22 ಕಾರ್ಖಾನೆಗಳಿವೆ. 22 ಕಾರ್ಖಾನೆಗಳು ಪ್ರತಿದಿವಸ 2.5 ಲಕ್ಷ ಟನ್ ಕಬ್ಬನ್ನು ಕ್ರಷ್ ಮಾಡುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ command area ಎಂದು ಡಿಕ್ಲೇರ್ ಆಗಿದೆ. ಒಂದೊಂದು ಶುಗರ್ ಫ್ಯಾಕ್ಟರಿಗೂ command area ಕೊಟ್ಟಿದ್ದಾರೆ. ಆ ಏರಿಯಾದಲ್ಲಿ ಬೆಳೆದಂಥ ಕಬ್ಬಿನಲ್ಲಿ 95% ತೆಗೆದುಕೊಳ್ಳಬೇಕೆಂದು agreement ಆಗಿದೆ. Sugar cane control ಗೆ order ಮಾಡಬೇಕು. ಮಾನ್ಯ ನೀರಾವರಿ ಮಂತ್ರಿಯವರಲ್ಲಿ ನನ್ನ ವಿನಂತಿ ಏನೆಂದರೆ, ತಾವು ಹೇಳುತ್ತಿರುವುದು ಸರಿ ಇದೆ. ಗಳಿಕೆ, ಉಳಿಕೆ, ಬಳಕೆ ಬಗ್ಗೆ ಒಂದು ನೀತಿಯನ್ನು ಸೃಷ್ಟಿ ಮಾಡಿ. ಪ್ರಕೃತಿ ಕೊಡುವ ನೀರನ್ನು ಗಳಿಸಿ, ಉಳಿಸಿ ಬಳಕೆ ಹೇಗೆ ಮಾಡಬೇಕೆಂದು ವೈಜ್ಞಾನಿಕವಾಗಿ ಒಂದು ನೀತಿಯನ್ನು ಮಾಡಬೇಕು. ನಮ್ಮ ತಂದೆ ಯಾವುದೇ ವಿಜ್ಞಾನಿ ಅಲ್ಲ, 8ನೇ ತರಗತಿ ಓದಿದ್ದಾನಷ್ಟೆ. ಆದರೆ ಅವರು ಏನು ಹೇಳುತ್ತಿದ್ದರೆಂದರೆ, ನೀರನ್ನು ಒಂದು ಡ್ರಾಪ್ ವೇಸ್ಟ್ ಮಾಡಬಾರದು ಹಾಗೆಯೇ fast ಆಗಿ ನೀರನ್ನು ಬಿಡಬೇಡ. ಮಣ್ಣು disturb ಆಗದ ಹಾಗೆ ನೀರನ್ನು ಹಾಯಿಸುವಂಥದ್ದನ್ನು ಕಲಿತುಕೊಳ್ಳಬೇಕು. ಜೋರಾಗಿ ನೀರನ್ನು ಬಿಟ್ಟ ತಕ್ಷಣ ಮಣ್ಣು disturb ಆಗುತ್ತದೆ. ಆ ರೀತಿ ಮಾಡಿದರೆ soil erosion ಆಗುತ್ತದೆ. ನೀನು ಟೈಂ ನೋಡಿಕೊಂಡು ನೀರು ಬಿಡಬೇಕೆಂದು ಹೇಳುತ್ತಿದ್ದರು ಹಾಗೆಯೇ ನೀನು ಗದ್ದೆ ಬಿಟ್ಟು ಎಲ್ಲಿಗೂ ಹೋಗದೆ

ಗದ್ದೆಯಲ್ಲಿಯೇ ಕುಳಿತುಕೊಂಡು ನೀರು ಹಾಯಿಸಬೇಕೆಂದು ಹೇಳುತ್ತಿದ್ದರು. ಆದರೆ, ಈಗ ಆ ರೀತಿ ಇಲ್ಲ, ಒಡ್ಡು ಹಾಕಿ ಹಟ್ಟಿಗೆ ಬಂದು ಬಿಡುತ್ತಾರೆ.

ಅಧ್ಯಕ್ಷರು:– ನಾವೂ ಹೋಗುವುದಿಲ್ಲ, ನೀವೂ ಸಹ ಹೋಗುವುದಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ನೀರು ಪಾಡಿಗೆ ನೀರು ಅದರ ಪಾಡಿಗೆ ಅದು.

ಅಧ್ಯಕ್ಷರು:– ವಿದ್ಯಾವಂತರೆಲ್ಲ ಪಟ್ಟಣ ಸೇರಿಕೊಂಡಿದ್ದಾರೆ. ಅಲ್ಲಿ ಯಾರೋ ಕೈಗೆ ಕೊಟ್ಟು ಬರುತ್ತೇವೆ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ನೀರನ್ನು ತುಪ್ಪದ ರೀತಿಯಲ್ಲಿ ಬಳಕೆ ಮಾಡಿ ಎಂದು ನಾನು ಸಚಿವನಾಗಿದ್ದ ಸಂದರ್ಭದಲ್ಲಿ ಒಂದು statement ಅನ್ನು ಕೊಟ್ಟಿದ್ದೆ. ಆದರೆ ಇಡೀ ರೈತರೆಲ್ಲರೂ ನನ್ನ ವಿರುದ್ಧ ಬಿದ್ದರು.

ಅಧ್ಯಕ್ಷರು:– ಯಾವುದಕ್ಕೂ ಒಂದು ಪ್ರಯತ್ನ ಇರಬೇಕು.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಆ ರೀತಿ ಅಲ್ಲ. ಆ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ನೀರನ್ನು ತುಪ್ಪದ ರೀತಿಯಲ್ಲಿ ಬಳಕೆ ಮಾಡಿ ಎಂದರೆ ನನ್ನ ವಿರುದ್ಧ ಎಲ್ಲರೂ ಬಿದ್ದರು.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಯುವುದಕ್ಕೆ ನಿಮ್ಮ ಕಾರ್ಖಾನೆಗೆ ಒಂದು ಏರಿಯಾ ಇರಬೇಕಲ್ಲವೇ ಎಂದು ತಾವು ಮಾನ್ಯ ಉಮೇಶ್ ಕತ್ತಿಯವರನ್ನು ಕೇಳಿದ್ದೀರಿ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, 40 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಪರವಾನಿಗೆ ಇದೆ. ಉಳಿದಿರುವುದಕ್ಕೆ ಏನಾಗಿದೆ ಎಂದರೆ, crop violation ಇದ್ದರೂ ಕೂಡ ಕೃಷಿ ಇಲಾಖೆಯಲ್ಲಿ ಏನಾಗುತ್ತಿದೆಂದರೆ, ಹಿಂದಿನಿಂದಲು ಇದು ಪಕ್ಷಾತೀತವಾಗಿ ನಡೆದು ಬಂದಿರುವುದು ಏನೆಂದರೆ, ಈ ಏರಿಯಾದಲ್ಲಿ ಇಷ್ಟು ಕಬ್ಬು ಇದೆ ಎಂದು ಮಾಹಿತಿ ಕೊಡುತ್ತಾರೆ. ಆನಂತರ village allocation ಆಗುತ್ತದೆ. ಆಮೇಲೆ ನಾವು sugar factory ಗೆ ಲೈಸೆನ್ಸ್ ಕೊಡುತ್ತೇವೆ. ಆದರೆ, basic ಆಗಿ

ನೀರಾವರಿ ಇಲಾಖೆ ನಮ್ಮ opinion ಅನ್ನು ಕೇಳುವುದಿಲ್ಲ. ಅಲ್ಲಿ ಕಬ್ಬು ಬೆಳೆಯುವುದಕ್ಕೆ ಪರವಾನಿಗೆ ಇರುವುದಿಲ್ಲ. ಈ ಎಲ್ಲಾ ಪ್ರಕ್ರಿಯೆಗಳು ನಡೆದು ಹೋಗುತ್ತವೆ. ಇದು ರಾಜ್ಯದಲಲಿರುವಂಥ ನಿಜವಾದ ವಾಸ್ತವ ಸಂಗತಿ ಆಗಿದೆ.

ಅಧ್ಯಕ್ಷರು:– ನೀವು sugar factory ಗೆ ಪರ್ಮಿಷನ್ ಕೊಡುವಾಗ.

ಶ್ರೀ ಬಿ.ಆರ್. ಪಾಟೀಲ್:– ಕಾರ್ಖಾನೆಗಳಿಗೆ ಲೈಸೆನ್ಸ್ ಕೊಡುವುದು ತಪ್ಪು.

ಅಧ್ಯಕ್ಷರು:– ಮಾನ್ಯ ಪಾಟೀಲ್‌ರವರೇ, ಗಾಡಿ ಹಳಿ ತಪ್ಪಿದೆ. ಈಗಲಾದರೂ ಹಳಿಗೆ ತರುವ ಕೆಲಸವನ್ನು ಮಾಡಬೇಕು. ಇದನ್ನು ಹೀಗೆ ಬಿಡುತ್ತಾ ಹೋದರೆ ವ್ಯವಸ್ಥೆ ಕೆಟ್ಟು ಹೋಗುತ್ತದೆ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಕಬ್ಬು ವಿಚಾರಕ್ಕೆ ಹೋದರೆ ದಾರಿ ತಪ್ಪುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ:– ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯನ್ನು ಉದಾಹರಣೆಗೆ ತೆಗೆದುಕೊಂಡರೆ ಅಲ್ಲಿ ಎಲ್ಲಿ ಮನೆಗಳಿವೆಯೋ ಅದರ ಮೇಲೂ ಸಹ ಕಬ್ಬು ಬೆಳೆಸಿದ್ದೇವೆ ಎಂಬುದು ಕೃಷಿ ಇಲಾಖೆಯ ವರದಿ ಆಗಿದೆ. ಈ ತಾಲ್ಲೂಕಿನಲ್ಲಿ ಇಷ್ಟು ಕಬ್ಬು ಇದೆ ಎಂದು ಮತ್ತು ನಮ್ಮ ಮನೆಗಳು ಎರಡು ಭಾಗ ಮಾಡಿದರೂ ಸಹ ಇಷ್ಟು ಕಬ್ಬು ಇದೆ ಎಂದು ಹೇಳಿದ್ದಾರೆ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಕತ್ತಿಯವರು ಮಾಡುವುದೆಲ್ಲಾ illegal and unauthorized ಆಗಿರುತ್ತದೆ.

ಅಧ್ಯಕ್ಷರು:– ನಾನು ಹೇಳುವುದನ್ನು ಕೇಳಿ. ಇದೊಂದು ಸರ್ಕಾರ, ನಾವು ನೀವು ಸಕಾರದಲ್ಲಿದ್ದೇವೆ. ಇದು ನಮ್ಮ ಅನುಭವಕ್ಕೆ ಬಂದಿದೆ. ಆದ್ದರಿಂದ, ಈಗಲಾದರೂ ನಾವು ಪುನರ್ ಪರಿಶೀಲನೆ ಮಾಡುವಂಥ ಪ್ರಯತ್ನವನ್ನು ಮಾಡಬೇಕು. ಅವರ ಮೇಲೆ ನೀವು, ನಿಮ್ಮ ಮೇಲೆ ಅವರು

ಹೇಳುವ ಕಾಲ ಮುಗಿದು ಹೋಗಿದೆ. ನಿಮಗೋಸ್ಕರ ಕಾಲ ಕಾಯುವುದಕ್ಕೆ ಆಗುವುದಿಲ್ಲ. ನೀವು ಕಾಲಕ್ಕೋಸ್ಕರ ಬೆನ್ನು ಹತ್ತಿಕೊಂಡು ಇರಬೇಕು. ಈ ಚಿಂತನೆಯ ಬಗ್ಗೆ ದಯವಿಟ್ಟು ಸರ್ಕಾರ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ಎಲ್ಲರೂ ಒಂದು ತೀರ್ಮಾನ ಮಾಡಿದ ಮೇಲೆ ಅಂದರೆ, ಅದು ಕೃಷಿ, ಕೈಗಾರಿಕೆ ಇಲಾಖೆ ಇರಬಹುದು ಅಥವಾ ಯಾವುದೇ ಇಲಾಖೆ ಇರಬಹುದು. ಇವತ್ತು ನೀರನ್ನು ಬಳಕೆ ಮಾಡತಕ್ಕಂಥದ್ದು ಹಾಗೂ ರೈತರನ್ನು ಜಾಗೃತಿ ಮಾಡತಕ್ಕಂಥದ್ದು ಬಹಳ ಮುಖ್ಯವಾದ ಕೆಲಸವಾಗಿದೆ.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ನಿಮ್ಮ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇದು ಇಡೀ ಸದನದ ಒಂದು ಭಾವನೆ ಆಗಿದೆ. ಸರ್ಕಾರ ಈ ಬಗ್ಗೆ initiate ತೆಗೆದುಕೊಂಡರೆ ನಾವು ಖಂಡಿತವಾಗಿ ಪಕ್ಷಾತೀತವಾಗಿ ಬೆಂಬಲವನ್ನು ಕೊಡುತ್ತೇವೆ. ಎಲ್ಲೋ ಒಂದು ಕಡೆ ಕಠಿಣವಾದಂಥ ಮತ್ತು ಸತ್ಯಕ್ಕೆ ಹತ್ತಿರ ಇರತಕ್ಕಂಥ ವಿಷಯಗಳ ಆಧಾರದ ಮೇಲೆ ನಾವು ನಿರ್ಣಯವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಜಲಸಂಪತ್ತು ನಿರಂತರವಾಗಿ ಮುಂದಿನ ಪೀಳಿಗೆಗೆ ತೆಗೆದುಕೊಂಡು ಹೋಗಬೇಕಾದರೆ ಈ ಕೆಲಸವನ್ನು ಮಾಡಬೇಕಾಗುತ್ತದೆ. ನಮ್ಮಷ್ಟಕ್ಕೆ ಮಾತ್ರ ನೀರಿನ ಬಳಕೆಯನ್ನು ನಾವು ನೋಡಿಕೊಳ್ಳಬಾರದು, ಈ ಹಿನ್ನೆಲೆಯಲ್ಲಿ ಇದನ್ನು ಖಂಡಿತವಾಗಿ ತಾತ್ವಿಕವಾಗಿ ಒಪ್ಪಿಕೊಳ್ಳುತ್ತೇವೆ. ಆದರೆ, ಇಲಾಖೆ ನಿರ್ವಹಣೆಯಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ ಹಾಗೆಯೇ ಹಣವನ್ನು priority ಮೇಲೆ ಖರ್ಚು ಮಾಡುವುದರಲ್ಲಿ ಹಾಗೂ ನಿಮ್ಮ ಗುರಿ ಮುಟ್ಟುವುದರಲ್ಲಿ ಮತ್ತು ಅಚ್ಚುಕಟ್ಟು ಮಾಡುವುದರಲ್ಲಿ ಹಾಗೂ ನೀರಿನ ನಿರ್ವಹಣೆಯಲ್ಲಿ ವಿಫಲರಾಗಿದ್ದೀರಿ. ನೀವು ಈಗ ಮಾತನಾಡಿದರೆ global tender ಎಂದು ಹೇಳುತ್ತೀರಿ. ಈ ಸಂದರ್ಭದಲ್ಲಿ ನನ್ನದೊಂದು ವಿನಂತಿ, ಆಗ್ರಹ ಏನೆಂದರೆ, ನೀವು ಗ್ಲೋಬಲ್ ಗ್ಲೋಬಲ್ ಎಂದು ಆಕಾಶದಲ್ಲಿ ಹಾರಾಡಬೇಡಿ. ಲೋಕಲ್ ಆಗಿ ಭೂಮಿಯ ಮೇಲೆ ಬನ್ನಿ. ನೀವು ನೀರಾವರಿ ಸಚಿವರಾಗಿರುವುದರಿಂದ ಭೂಮಿಯ ಮೇಲೆ ಬಂದು ಮಣ್ಣು

ಮತ್ತು ನೀರಿನ ಜೊತೆಗೆ ಇದ್ದಾಗ ಮಾತ್ರ ಆಗುತ್ತದೆ. ಅಂತರರಾಷ್ಟ್ರ ಇಷ್ಯೂ ಬಗ್ಗೆ ನಿಮಗೆ ಗಂಭೀರತೆ ಇಲ್ಲ. ನಿಮಗೆ ಯಾವುದೇ ಒಂದು ರೀತಿಯ ಮಾರ್ಗದರ್ಶನವನ್ನು ರಾಜ್ಯಕ್ಕೆ ಕೊಡುವುದಕ್ಕೆ ನೀವು ತಯಾರಿಲ್ಲ. R & R ನೀತಿ ಇಲ್ಲ. ಯಾವುದೇ ರೀತಿಯ ಸ್ಪಷ್ಟತೆ ಇಲ್ಲ. ನಿಮ್ಮೊಳಗಡೆ confusion ಇದೆ ಮತ್ತು ನಮಗೂ ಸಹ confusion ಮಾಡುತ್ತಿದ್ದೀರಿ. ಆದ್ದರಿಂದ, ನೀರಾವರಿ ಇಲಾಖೆಯಲ್ಲಿ ಯಾವುದೇ ರೀತಿಯಾದಂಥ ಗಮನಾರ್ಹವಾದಂಥ ಪ್ರಗತಿ ಕಾಣುತ್ತಿಲ್ಲ. ಇದು ಕೇವಲ ನನ್ನ ವಿಚಾರ ಅಲ್ಲದೆ ಈ ಕಡೆ, ಆ ಕಡೆ ಇರುವಂಥ ಎಲ್ಲಾ ಶಾಸಕರ ಭಾವನೆಯನ್ನು ನಾನು ನಿಮಗೆ ಕೇಳುತ್ತಿದ್ದೇನೆ. ಈಗ ನೀವು ಅರ್ಧದಲ್ಲಿ ಇದ್ದೀರಿ. ನಿಮಗೆ ಇನ್ನೂ ಅರ್ಧ ಅವಕಾಶ ಇದೆ. ಆದ್ದರಿಂದ, ಈಗಲಾದರೂ ಸುಧಾರಣೆ ಮಾಡತಕ್ಕಂಥ ಪ್ರಯತ್ನ ಮಾಡಿ. ಇಲ್ಲದಿದ್ದರೆ ಖಂಡಿತವಾಗಿ ನೀರಾವರಿ ಇಲಾಖೆ ರೈತರ ವಿರೋಧಿ ಇಲಾಖೆ ಆಗುವ ರೀತಿಯಲ್ಲಿ ಪರಿಣಮಿಸುತ್ತದೆ ಎನ್ನುವ ಎಚ್ಚರಿಕೆಯನ್ನು ಕೊಡುತ್ತೇನೆ. ಇದಕ್ಕೆ ನೀವೇ ಕಾರಣೀಭೂತರಾಗುತ್ತೀರಿ ಎಂದು ನಿಮಗೆ ಎಚ್ಚರಿಕೆಯನ್ನು ಕೊಟ್ಟು ಈ ಬೇಡಿಕೆಯನ್ನು ತಾತ್ವಿಕವಾಗಿ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಇದ್ದರೂ ಕೂಡ ರೈತರ ಹಿತದೃಷ್ಟಿಯಿಂದ ಇದನ್ನು ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು:– ಮಾನ್ಯ ದತ್ತಾತ್ರರವರೇ, ಪ್ರಾರಂಭ ಮಾಡಿ.

ಶ್ರೀ ಉಮೇಶ್ ವಿ. ಕತ್ತಿ:– ಮಾನ್ಯ ಅಧ್ಯಕ್ಷರೆ, ಮುಂದಿನ ಸಾಲಿನಲ್ಲಿ ಯಾರೂ ಸಚಿವರು ಇಲ್ಲ. ಚರ್ಚೆಯನ್ನು ಕೇಳುವುದಕ್ಕೆ ಇಬ್ಬರಾದರೂ ಕುಳಿತುಕೊಳ್ಳಬೇಕು. ನೀವು ಬರೆದುಕೊಳ್ಳುವುದಕ್ಕೆ ಹೋಗಬೇಡಿ, ಕೊನೇಪಕ್ಷ ಕೇಳುವುದಕ್ಕಾದರೂ ಕುಳಿತುಕೊಳ್ಳಿ, ನೀವು ಬರೆದುಕೊಂಡು ಅದಕ್ಕೆ ಉತ್ತರ ಹೇಳಿ ಎಂದು ನಾವೇನೂ ಹೇಳುವುದಿಲ್ಲ. ಕೊನೇಪಕ್ಷ ಕೇಳುವುದಕ್ಕೆ ಯಾರಾದರೂ ಒಬ್ಬರು ಇರಿ.

ಶ್ರೀ ಎಂ.ಬಿ. ಪಾಟೀಲ್.– ಮಾನ್ಯ ಅಧ್ಯಕ್ಷರೆ, ನೀರಾವರಿ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಆಗುತ್ತಿದೆ. ಆದ್ದರಿಂದ, ನಾನು ಇಲ್ಲಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ:– ನೀವು ಒಬ್ಬರು ಇದ್ದೀರಿ ಉಳಿದವರು ಯಾರೂ ಇಲ್ಲ.

ಅಧ್ಯಕ್ಷರು:– ಸದನ ನಡೆಯುವಂಥ ಸಂದರ್ಭದಲ್ಲಿ ಸಚಿವರುಗಳು ಈ ಸದನದಲ್ಲಿ ಅಥವಾ ಆ ಸದನದಲ್ಲಿರಬೇಕು. ಎರಡೂ ಕಡೆ ಇಲ್ಲದೆ ಕಳ್ಳತಪ್ಪಿಸಿಕೊಂಡು ತಿರುಗುವಂಥ ಕೆಲಸ ಇದೆಯಲ್ಲ ಅದು ಒಳ್ಳೆಯ ಗುಣವಲ್ಲ. ಇದನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಆ ಸದನದಲ್ಲಿ ಮತ್ತು ಈ ಸದನದಲ್ಲಿ ಇಲ್ಲದೇ ಕಳ್ಳತಪ್ಪಿಸಿಕೊಂಡು ತಿರುಗುತ್ತಿರುವವರು ಯಾರೆಂದು ಮತ್ತು ಅವರು ಎಲ್ಲಿದ್ದಾರೆಂದು ಪತ್ತೆ ಮಾಡುವುದು ಹೇಗೆ?

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಹುಲಿಗಳು ಎಲ್ಲೆಲ್ಲಿ ಹೋಗುತ್ತವೆ ಮತ್ತು ಏನೇನು ಮಾಡುತ್ತವೆಂದು ನೋಡುವುದಕ್ಕೋಸ್ಕರ ಹುಲಿಗಳಿಗೆ radio collar ಹಾಕುತ್ತಾರೆ. ಆದ್ದರಿಂದ, ಮಾನ್ಯ ಮಂತ್ರಿಗಳಿಗೂ ಸಹ ಆ ರೀತಿ ಹಾಕಿದರೆ ಹೇಗೆ? ನಮ್ಮ ಮಂತ್ರಿಗಳಿಗೆ ಒಂದು radio collar ಹಾಕಿದರೆ ಅವರು ಎಲ್ಲೆಲ್ಲಿಗೆ ಹೋಗುತ್ತಾರೆಂದು ಮತ್ತು ಅವರು ಏನು ಕೆಲಸ ಮಾಡುತ್ತಾರೆಂದು ತಾನಾಗಿಯೇ ಗೊತ್ತಾಗುತ್ತದೆ. ಅದನ್ನು ನಿಮ್ಮ ರೂಮ್‌ನಲ್ಲಿ ಟಿ.ವಿ. ಇಟ್ಟುಕೊಂಡು ಇದೆಲ್ಲವನ್ನು ನೋಡುವಂಥದ್ದು ಆಗಬೇಕು.

ಅಧ್ಯಕ್ಷರು:– ಆಯಿತು. ಮಾನ್ಯ ದತ್ತಾರವರೆ, ತಾವು ಪ್ರಾರಂಭ ಮಾಡಿ. ನಾನು ಹೇಳುವುದೇನೆಂದರೆ, ಇದರ ಅರಿವು ಎಲ್ಲರಲ್ಲಿಯೂ ಸಹ ಬರಬೇಕು. ಅದನ್ನು ಹೇಳಿ ಕಳಿಸುವುದು ಅಲ್ಲ.

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):– ಮಾನ್ಯ ಅಧ್ಯಕ್ಷರೆ, ನೀರಾವರಿ ಇಲಾಖೆಯ ಬೇಡಿಕೆ ಬಗ್ಗೆ ಮಾತನಾಡುವುದಕ್ಕೆ ತಾವು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಮೊಟ್ಟಮೊದಲಿಗೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನೀರಾವರಿ ಇಲಾಖೆಯ ಬೇಡಿಕೆ ಬಗ್ಗೆ ಪ್ರಥಮವಾಗಿ ಮಾನ್ಯ ಬಸವರಾಜ ಬೊಮ್ಮಾಯಿರವರು ಮಾತ್ರ ಮಾತನಾಡಿದ್ದಾರೆ. ಅವರು

ಸುಮಾರು ಮೂರು ಗಂಟೆಗಳ ಕಾಲ ಅವರ ಅನುಭವದಿಂದ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ ಹಾಗೆಯೇ ಅವರು ಸ್ವಯಂ ನೀರಾವರಿ ಇಲಾಖೆಯ ಸಚಿವರಾಗಿ ಕೆಲಸ ಮಾಡಿರುವುದರಿಂದ ಇಲಾಖೆಯಲ್ಲಿರುವ ಹುಳುಕು ಮತ್ತು ಕೊಳಕು ಸಹ ಅವರಿಗೆ ಗೊತ್ತಿದೆ ಹಾಗೆಯೇ ಅದನ್ನು ತೊಳೆಯುವ ರೀತಿ ಸಹ ಅವರಿಗೆ ಗೊತ್ತಿದೆ ಹಾಗೆಯೇ ಇಲಾಖೆಯ ಆಳ, ಅಗಲ ಅವರಿಗೆ ಚೆನ್ನಾಗಿ ಗೊತ್ತಿರುವುದರಿಂದ ಅವರು ಎಲ್ಲಾ ವಿಷಯಗಳನ್ನು ಬಹಳ ಸಮಗ್ರವಾಗಿ ಹೇಳಿದ್ದಾರೆ. ಆದ್ದರಿಂದ, ಅವರು ಹೇಳಿರುವ ವಿಷಯವನ್ನು ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಅವರು ಕೇಳದೇ ಇರುತಕ್ಕಂಥ ಕೆಲವೊಂದು ವಿಷಯಗಳು ಮತ್ತು ಅವರು ಹೇಳಿರುವ ವಿಷಯಗಳಲ್ಲಿ ಸ್ವಲ್ಪ ಸ್ಪಷ್ಟತೆ ದೃಷ್ಟಿಯಿಂದ ಕೆಲವು ಮಾಹಿತಿಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಒಪ್ಪಿತವಾಗಿರುವ ಅಂಶ, ನೀರಾವರಿ ಇಲಾಖೆ ಒಳಗಡೆ ನಮ್ಮ ಕಹಿ ಅನುಭವ, ಕಟ್ಟುವಾದ ಅನುಭವವನ್ನು ನೀರಾವರಿ ಸಚಿವರು ಮಾಡಿರುವಂಥದ್ದು ಇರಬಹುದು. ಈಗ ನೀವು ಅನುಭವಿಸುತ್ತಿರುವ ತೊಂದರೆ ಸಹ ಆಗಿರಬಹುದು. ಆದರೆ, ಇಲ್ಲಿ ಮುಖ್ಯವಾಗಿ ಆಗಿರತಕ್ಕಂಥದ್ದು ಏನೆಂದರೆ, ನಾವು ಏನು ಒಂದು ಯೋಜನೆ ಮಾಡಿ ಅದಕ್ಕೆ ಇಷ್ಟು ಅಂದಾಜು ಎಂದು ಮಾಡಿದ ವರ್ಷ ಮತ್ತು ಆನಂತರ ಅದನ್ನು ಮುಗಿಸುವುದಕ್ಕೆ ತೆಗೆದುಕೊಳ್ಳುವ ಅವಧಿ, ಈ ಎರಡೂ ಸಹ ಇವತ್ತಿನದಿವಸ ಬಹಳ ದೊಡ್ಡ ಪ್ರಮಾಣದ ಪ್ರಮಾದ ಆಗುತ್ತಿದೆ. ಆದ್ದರಿಂದ ಆ ಕಾರಣಕ್ಕೆ ಈಗ ಆಗುತ್ತಿರುವ ತೊಂದರೆ ಏನೆಂದರೆ, ಇಷ್ಟು ಸಾವಿರಾರು ಕೋಟಿ, ಲಕ್ಷ ಕೋಟಿ ನೀರಾವರಿಗೆ, ನಾವು ಒಂದು ವರ್ಷಕ್ಕೆ U.K.P. ಗೆ 10,000 ಕೋಟಿ ರೂ. ಗಳನ್ನು ಇಟ್ಟಿರುತ್ತೇವೆ. ಇಡೀ ರಾಜ್ಯದ ನೀರಾವರಿ ಯೋಜನೆಗೆ ವರ್ಷಕ್ಕೆ 9–10 ಸಾವಿರ ಕೋಟಿ ರೂ. ಗಳ ಬೇಡಿಕೆ ಇಟ್ಟು ಮಂಡನೆಗೆ ನೀವು ನನ್ನ ಅನುಮೋದನೆಯನ್ನು ಕೇಳುತ್ತಿದ್ದೀರಿ. ಆದರೆ ಒಂದೇ ಒಂದು ಯೋಜನೆಗೆ 10,000 ಕೋಟಿ ರೂ. ಗಳನ್ನು ಖರ್ಚು ಮಾಡಿದರೂ ಕೂಡ ಮುಗಿಯುತ್ತದೆ ಎನ್ನುವ ಗ್ಯಾರಂಟಿ ಇಲ್ಲವೆನ್ನುವ ಸ್ಥಿತಿಯೊಳಗಡೆ ನಾವು ಇದ್ದೇವೆ. ಏಕೆ ಹೀಗೆ ಆಗಿದೆ ಎಂದರೆ, ಮುಖ್ಯವಾಗಿರುವ ದೋಷ ನಾವು ಅಂದಾಜು ಮಾಡಿದ್ದರ ಜೊತೆಗೆ ಇಷ್ಟನ್ನು

ಕಾಲಬದ್ಧವಾಗಿ, ಇಷ್ಟರೊಳಗೆ ಮುಗಿಸಬೇಕು ಎನ್ನುವ ಹಠ ನಮ್ಮಲ್ಲಿ ಬಂದಿಲ್ಲ. ಅದಕ್ಕೆ ಇರುವ ಅಡ್ಡಿ ಆತಂಕಗಳ ಬಗ್ಗೆ ನಾನು ಆಮೇಲೆ ಹೇಳುತ್ತೇನೆ, ಸಾವಿರ ಇದೆ. ನಮ್ಮ inter-state river dispute ಗಳು, ಆಯಾಯಾ ಗಳಿಗೆಯ tribunal ಗಳು, ನ್ಯಾಯ ಮಂಡಲಿಗಳು, High Court, Supreme Court, ಆ ರಾಜ್ಯದ ತಕರಾರು, ಈ ರಾಜ್ಯದ ತಕರಾರು ಇದನ್ನು ಆಮೇಲೆ ಹೇಳುತ್ತೇನೆ. ಇವೆಲ್ಲವೂ ಕೂಡ ಒಂದಲ್ಲ ಒಂದು ಕಾರಣವಾಗಿವೆ. ಒಂದು ಸಣ್ಣ ಮಾಹಿತಿಯನ್ನು ಮಾತ್ರ ನಿಮಗೆ ಹೇಳುತ್ತೇನೆ. ನಾವು ಎಷ್ಟರಮಟ್ಟಿಗೆ ಎಡವಿದ್ದೇವೆ? ಇದರೊಳಗಡೆ ಕಾಲಮಿತಿ ಹಾಕಿಕೊಳ್ಳದೇ ವಿಳಂಬವಾಗಿ ಎಳಸಿಕೊಂಡು ಹೋಗುತ್ತಿರುವುದರಿಂದ ಯಾವ ಹಣೆಬರಹ ತಲುಪಿದ್ದೇವೆಂದರೆ, Upper Krishna Project (U.K.P.) ನಮಗೆ ಕಣ್ಣು ತೆರೆಸುವಂಥ ಒಂದು ಪ್ರಾಜೆಕ್ಟ್. ಇದು ನಮ್ಮ ಕಹಿ ಅನುಭವವು ಕೂಡ, ಆ ಭಾಗದ ಜನರ ದುರಂತವೂ ಕೂಡ. ಇದಕ್ಕೆ ಯಾರೇ ಹೊಣೆಗಾರರು ಆಗಿರಲಿ, ನಾವೆಲ್ಲಾ ಆ ಪಾಪದ ಹೊಣೆಗಾರರು. 1963 ರಲ್ಲಿ ಈ ಯೋಜನೆಗೆ ಮಂಜೂರಾತಿ ಆದಾಗ ಇದರ ಅಂದಾಜು ವೆಚ್ಚ 53 ಕೋಟಿ ರೂ. ಗಳು. ಇವತ್ತು U.K.P.-1, U.K.P.-2, U.K.P.-3 ಗೆ ಸೇರಿಸಿದರೆ ಒಟ್ಟು 12,903 ಕೋಟಿ ರೂ. ಗಳು. ಲೆಕ್ಕಹಾಕಿ, ಎಲ್ಲಿಂದ ಎಲ್ಲಿಗೆ ಹೋಗಿರುತ್ತದೆ? 12903 ಕೋಟಿ ರೂ. ಗಳು ಬರೀ U.K.P. ಗೆ ಅಂದರೆ, 53 ಕೋಟಿ ರೂ. ಗಳು ಇದ್ದದ್ದು 1963 ರಲ್ಲಿ, ಇವತ್ತು 12903 ಕೋಟಿ ರೂ. ಗಳು ಆಗಿದೆ. ಒಂದು ಉದಾಹರಣೆ ಕೊಟ್ಟಿರುತ್ತೇನೆ. ಹಾಗೆ ಎಲ್ಲಾ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಿ, ಇವತ್ತು ನೀವು ಹಾಕಿಕೊಂಡಿರುವಂಥ ಎತ್ತಿನಹೊಳೆ ಯೋಜನೆ ತೆಗೆದುಕೊಂಡರೂ ಕೂಡ ನೀವು ಕಾಲಮಿತಿಯಲ್ಲಿ ಮುಗಿಸಲಿಲ್ಲ, ಇನ್ನು 10 ವರ್ಷದಲ್ಲಿ ಅದರ ಹಣೇಬರಹ ಬೇರೆ ಆಗುತ್ತದೆ. ಹಾಗಾಗಿ ರಾವಣಾಸುರನ ಹೊಟ್ಟೆಗೆ ಮೂರುಕಾಸಿನ ಮೊಸರು ಎನ್ನುವ ಹಾಗೆ ಎಲ್ಲಾ ಸರ್ಕಾರಗಳು ಕೂಡ ಇದೊಂದು cumulative ಪಾಪ ಸೇರಿಸಿಕೊಂಡು ಹೋಗುತ್ತಿರುತ್ತದೆ. ಆಯಾಯಾ ಸರ್ಕಾರಗಳಿಗೆ ಹಣ ಹೊಂಚುವ ಸವಾಲು ಎದುರಾಗುತ್ತದೆ. ಹಣ ಹೊಂಚುವುದಕ್ಕಾಗುವುದಿಲ್ಲ. 5 ರೂ. ಗಳು ಕೊಡುವ ಜಾಗದಲ್ಲಿ ಒಂದು ರೂಪಾಯಿ ಮುಂದಿನ ವರ್ಷಕ್ಕೆ carry over.

ಹೀಗಾಗಿಯೇ ನಮ್ಮ ರಾಜ್ಯದಲ್ಲಿ ನೀರಾವರಿಯ ಪ್ರಗತಿ ಅಷ್ಟರಮಟ್ಟಿಗೆ ಸಾಧ್ಯವಾಗಿಲ್ಲದಿರುವುದಕ್ಕೆ ಕಾರಣ ಅಗಾಧವಾದ ವೆಚ್ಚ ಜಾಸ್ತಿಯಾಗಿರುವುದಕ್ಕೆ ಕಾರಣ ನಾವು time bound programme ಹಾಕಿಕೊಂಡಿಲ್ಲ. ಮೊಟ್ಟಮೊದಲನೆಯದಾಗಿ ನಾವು ಇಗ ಕೈಗೆತ್ತಿಕೊಂಡಿರುವ ಹೊಸ ಯೋಜನೆಗಳು ಏನಿವೆ, ಅವುಗಳಲ್ಲಿ ಮೊದಲಿಗೆ ಸ್ಪಷ್ಟವಾಗಿ ಹೇಳಬೇಕು. ಇಲ್ಲ ಇಷ್ಟು ಅಂದಾಜು ವೆಚ್ಚ, ಇಷ್ಟು ವರ್ಷ ಖರ್ಚು ಮಾಡುತ್ತೇವೆಂದು ಅಲ್ಲ, at any cost ಇಷ್ಟು ವರ್ಷಗಳೊಳಗಾಗಿ ಮುಗಿಸಿಯೇ ಮುಗಿಸುತ್ತೇವೆ ಎನ್ನುವ ಒಂದು ರೀತಿಯ ಬದ್ಧತೆ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶನ ಮಾಡಲಿಲ್ಲವೆಂದರೆ, ಇದು ನಾವು ಹೇಳುತ್ತಿರುತ್ತೇವೆ, ನೀವು ಹೇಳುತ್ತಿರುತ್ತೀರಿ ಎನ್ನುವ ತರಹದಲ್ಲಿ ಆಗುತ್ತದೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಮೊಟ್ಟಮೊದಲನೆಯದಾಗಿ ನಿಮಗೆ ನಿವೇದನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಹಣಕಾಸಿನ ಒದಗಣೆ, ಸಂಪನ್ಮೂಲ ಕ್ರೋಢೀಕರಣ, ನೀರಾವರಿಗೆ ಸಂಪನ್ಮೂಲ ಕ್ರೋಢೀಕರಣ ಹೇಗೆ ಮಾಡಬೇಕಾಗುತ್ತದೆ. ಇದಕ್ಕೆ ದುಡ್ಡು ಎಲ್ಲಿಂದ ತರಬೇಕು ಎನ್ನುವುದು ಬಹಳ ಮುಖ್ಯ. 12,000 ಕೋಟಿ ರೂ. ಗಳಲ್ಲಿ ನೀವು ಭದ್ರಾ ಯೋಜನೆ ನಮ್ಮ ಭಾಗಕ್ಕೆ, ನಾವು, ತರೀಕೆರೆ, ಕಡೂರು ಭಾಗದವರು ಬಹಳ ಆಸೆಯಿಂದ ಕಾಯುತ್ತಿರುವ ಹಾಗೆಯೇ ಮುಂದಿನ ಜಿಲ್ಲೆಗಳು ಕಾಯುತ್ತಿವೆ. ಭದ್ರಾ ಮೇಲ್ದಂಡೆ ಯೋಜನೆಗೆ 12,000 ಕೋಟಿ ರೂ. ಗಳು ಎಂದು ಹೇಳಿದಿರಿ. 1000 ಕೋಟಿ ರೂ. ಗಳನ್ನು ತೆಗೆದಿಟ್ಟಿರುತ್ತೀರಿ. ಇನ್ನು 3 ವರ್ಷದಲ್ಲಿ ಮುಗಿಸುತ್ತೇವೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ, ಇನ್ನು 11,000 ಕೋಟಿ ರೂ. ಗಳಿಗೆ ಹಣ ಬರುವ ಖಾತರಿ ಬೇಕಲ್ಲವೆ? ಎಲ್ಲಿ ಹೊಂಚುತ್ತೀರಿ ಎನ್ನುವ ಖಾತರಿ ಬೇಕಲ್ಲವೆ? ನಾನು ಏಕೆ ಹೇಳುತ್ತೇನೆಂದರೆ, ನೀರಾವರಿ ಇಲಾಖೆಯನ್ನು ಕರ್ನಾಟಕ ರಾಜ್ಯದಲ್ಲಿ ಬಹಳ ತಜ್ಞರಾದಂಥವರು, ದೂರದೃಷ್ಟಿ ಇರುವಂಥ ಅನೇಕ ಪುಣ್ಯಾತ್ಮರುಗಳು ಈ ಇಲಾಖೆಯ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲರನ್ನು ಮೊದಲುಗೊಂಡು ಬಹಳ ಜನ ಕೆಲಸ ಮಾಡಿದ್ದಾರೆ. ಆಯಾ ಕಾಲಘಟ್ಟದೊಳಗಡೆ ಅವರೆಲ್ಲಾ ಹೊಸ ರೀತಿಯೊಳಗೆ ಅವರು ಆಲೋಚನೆ ಮಾಡಿದ್ದಾರೆ. ನೀವು ಯುವಕರು

ಇದ್ದೀರಿ, ಬಸವರಾಜ ಬೊಮ್ಮಾಯಿಯವರು ಕೂಡ ನೀರಾವರಿ ಸಚಿವರಾಗಿದ್ದರು. ಹಾಗಾಗಿ ನಿಮಗೆ ಸಂಪನ್ಮೂಲ ಕ್ರೋಢೀಕರಣ ಒಂದು ದೊಡ್ಡ ಸವಾಲು ನೀವು ನೆನಪಿಟ್ಟುಕೊಳ್ಳಿ. ರಾಜ್ಯದ ಬಜೆಟ್ ಒಳಗಡೆ ನೀವು ನೀರಾವರಿ ಯೋಜನೆಗಳನ್ನು ಕಾಲಮಿತಿಯೊಳಗಡೆ ಮುಗಿಸಬೇಕು ಎಂದರೆ ತೊಡಗಿಸಬೇಕಾದ ಹಣಕ್ಕೂ ಬಜೆಟ್ ಒಳಗಡೆಯಲ್ಲಿ ಇಡುವಷ್ಟು ಹಣಕ್ಕೂ ಲೆಕ್ಕಾಚಾರ ಮಾಡಿದರೆ ಖಂಡಿತವಾಗಿ ಇದನ್ನು ಮುಗಿಸುವುದಕ್ಕಾಗುವುದಿಲ್ಲ. ನಾವು ನಿರಾಶಾವಾದಿಗಳು ಅಲ್ಲ, ಸಿಡುಕುತನವಲ್ಲ, ಆದರೆ ಆಗುವುದಿಲ್ಲ. ಹಾಗಾಗಿ ಏನಾಗುತ್ತದೆಂದರೆ, ಗೋಪಾಲಕೃಷ್ಣ ಅಡಿಗರು ಒಂದು ಕಡೆ ಹೇಳುತ್ತಾರೆ. "ಹೆಳವನ ಮೇಲೆ ಕುರುಡ ಕುಳಿತಿದ್ದಾನೆ ದಾರಿ ಸಾಗುವುದು ಹೇಗೋ? ಎಂದು ಒಂದು ಕವನ ಹೇಳುತ್ತಾನೆ. ಹಾಗಾಗಿ 12,000 ಕೋಟಿ ರೂ. ಗಳು, 1000 ಕೋಟಿ ರೂ. ಗಳ ಬಜೆಟ್ ಆಲೋಕೇಶನ್, ಬಿಡುಗಡೆ 800 ಕೋಟಿ ರೂ. ಗಳು, ಖರ್ಚು ಆಗಿದ್ದು 650 ಕೋಟಿ ರೂ. ಗಳು. ಈ ಲೆಕ್ಕಾಚಾರವನ್ನು ನಾವು ಪುಸ್ತಕದೊಳಗಡೆ ಇಟ್ಟುಕೊಂಡು ಹೋದರೆ ಯಾವ ಕಾಲಕ್ಕೆ 12,000 ಕೋಟಿ ರೂ. ಗಳನನ್ನು ಖರ್ಚು ಮಾಡುತ್ತೇವೆ? ಯಾವ ಕಾಲಕ್ಕೆ ಅದು ಆಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳುತ್ತೇನೆ. ಹೊಸ ಆಲೋಚನೆ ಮಾಡಬೇಕಾಗುತ್ತದೆ. ಇದೇ ತರಹ U.K.P. ನೋಡಿ ಇಚ್ಛಾಶಕ್ತಿ ಬೇಕು ಎಂ.ಬಿ. ಪಾಟೀಲರೆ, ಸರ್ಕಾರಕ್ಕೂ ಇಚ್ಛಾಶಕ್ತಿ ಬೇಕು. ಮನಸ್ಸು ಮಾಡಿದರೆ ಮಾಡಿಯೇ ಮಾಡುತ್ತೇವೆ. ನಾವು ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ರಾಜಕಾರಣ ಬೆರೆಸುತ್ತಿಲ್ಲ. ಆದರೆ ರಾಜಕಾರಣವು ಕೆಲಸುವ ಸಂದರ್ಭದಲ್ಲಿ ನಮಗೆ ಎಡವಟ್ಟು ಮಾಡಿದೆ. ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡಿದೆ ಎಂದು ಹೇಳಬೇಕಾದರೆ, ನನಗೆ ಮುಜುಗರವೂ ಇಲ್ಲ, ದಯದಾಕ್ಷಿಣ್ಯ ಇಲ್ಲವೆಂದು ಹೇಳುವಂಥದ್ದಕ್ಕೆ ನಾನು ಇದ್ದೇನೆ. ನೀವು ಒಂದನ್ನು ಜ್ಞಾಪಕ ಇಟ್ಟುಕೊಳ್ಳಬೇಕು. ಬಚಾವತ್ ಅವಾರ್ಡ್ ಬಂತು, ಆಗ ಸನ್ಮಾನ್ಯ ಸಭಾಧ್ಯಕ್ಷರು ಸರ್ಕಾರದ ಭಾಗ. ಬಚಾವತ್ ಅವಾರ್ಡ್ ಬಂದಾಗ ನಮಗ 734 ಟಿ.ಎಂ.ಸಿ. ನೀರು ಕರ್ನಾಟಕದ ಹಕ್ಕು ಎಂದು ಏನು ಆಲೋಕೇಶನ್ ಆಯಿತು. ಅದನ್ನು ಮಾಡಬೇಕಾದರೆ ಬಚಾವತ್ ಆಯೋಗದವರು ಒಂದು

ಕಂಡೀಷನ್ ಹಾಕಿದರು. 2001ನೇ ಇಸ್ವಿಯೊಳಗಾಗಿ ಈ ನೀರನ್ನು ನೀವು ಬಳಕೆ ಮಾಡಕೊಳ್ಳತಕ್ಕದ್ದು. ನೀವು 734 ಟಿ.ಎಂ.ಸಿ. ನೀರನ್ನು 2001 ನೇ ಇಸ್ವಿಯೊಳಗಡೆಯಲ್ಲಿ ಬಳಕೆ ಮಾಡಿಕೊಳದಿದ್ದರೆ ಬಳಕೆಯಾಗದೆ ಉಳಿಯುವ ನೀರು ಏನಿದೆ ಅದನ್ನು ಕೂಡ ಸ್ಕೀಂ–ಬಿ ಒಳಗಡೆಯಲ್ಲಿ ಪುನರ್ ಹಂಚಿಕೆ ಮೂರು ರಾಜ್ಯಕ್ಕೆ ಮಾಡಲಾಗುತ್ತದೆ, ಮೂರು ರಾಜ್ಯಕ್ಕೆ ಆಂಧ್ರಪ್ರದೇಶ, ಮಹಾರಾಷ್ಟ್ರ, ಕರ್ನಾಟಕಕ್ಕೆ ಎಂದು ಹೇಳಿತು. ಹಾಗಾಗಿ ಆಗಿನ ಸರ್ಕಾರಗಳ ಮೇಲೆ ಒಂದು ತುರ್ತು ಇತ್ತು, ದರ್ದು ಇತ್ತು. 2001 ರೊಳಗಡೆ 734 ಟಿ.ಎಂ.ಸಿ. ನೀರನ್ನು ನಾವು ಹಿಡಿದಿಟ್ಟುಕೊಳ್ಳಲೇಬೇಕು ಎನ್ನುವ ತುರ್ತು ಇತ್ತು. ಆ ಕಾರಣಕ್ಕೆ ಆಗ ಎಷ್ಟು ಕಷ್ಟ ಪಟ್ಟು 2001 ರೊಳಗಡೆ ಆ ನೀರನ್ನು ಆ ಮಂತ್ರಿ, ಈ ಮಂತ್ರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ಪಕ್ಷದ ಸರ್ಕಾರ, ಈ ಪಕ್ಷದ ಸರ್ಕಾರ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಹೇಳುವುದಕ್ಕೆ ಹೋಗಿ ಮತ್ತೆ ನಾನು ಪುನಃ ಗಲಾಟೆ ಮಾಡಿಕೊಂಡು ನಾನು ನನ್ನ ಟೈಮ್ ಅನ್ನು ಮತ್ತೆ ಬೇರೆಯವರು ಕಿತ್ತುಕೊಳ್ಳುವುದಕ್ಕೆ ಅವಕಾಶ ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದನ್ನು ಹೇಳುತ್ತೇನೆ. 1995 ರಿಂದ ಇದರ ತುರ್ತು ಜಾಸ್ತಿ ಇತ್ತು, ಏಕೆ ಇನ್ನೂ ಆಗಿಲ್ಲ, 2001 ಹತ್ತಿರ ಬರುತ್ತಿದೆ. 1995 ಆಗಿದೆ, ಇನ್ನು 5 ವರ್ಷದಲ್ಲಿ ಅ ನೀರನ್ನು ತುಂಬಿಸಿಕೊಳ್ಳಬೇಕು. ಇಲ್ಲವೆಂದರೆ ಬಚಾವತ್ ಅವಾರ್ಡ್ ಪ್ರಕಾರ ಮತ್ತೆ ಆ ನೀರು ಪುನರ್ ಹಂಚಿಕೆ ಆಗುತ್ತದೆ. ಆಗ ಇವೆಲ್ಲಾ ಆಲೋಚನೆಗಳು ಬಂದಿದ್ದು. KBJNL ಏನಿದೆ ಅದನ್ನು ಏಕೆ ಸರ್ ನಾವು ಮಾಡಿದ್ದು? ಕರ್ನಾಟಕ ನೀರಾವರಿ ನಿಗಮ ಅದು ಏಕೆ ಮಾಡಿದ್ದು? ಕಾವೇರಿ ನೀರಾವರಿ ನಿಗಮ ಏಕೆ ಮಾಡಿದ್ದು? ನಿಗಮಗಳನ್ನು ಮಾಡಿದ್ದರ ಉದ್ದೇಶವನ್ನು ನಾನು ಹೇಳುತ್ತಿದ್ದೇನೆ. ಕೃಷ್ಣಭಾಗ್ಯ ಜಲ ನಿಗಮನ್ನು ಮಾಡಿದ್ದರ ಉದ್ದೇಶ ಈ ಹಣ ಹೊಂಚಬೇಕೆಂದು. ಕೃಷ್ಣಭಾಗ್ಯ ಜಲ ನಿಗಮ ಸೃಷ್ಟಿ ಆಗಿರುವುದು water monitoring ಅಲ್ಲ, water management ಗೆ ಅಲ್ಲ, ಸಂಪನ್ಮೂಲ ಕ್ರೋಢೀಕರಣಕ್ಕೆ. ಆಗಿನ ಆಡಳಿತಗಾರರು ನೀರಾವರಿ ಮಂತ್ರಿಗಳು ಯಾರೇ ಇರಲಿ ಸರ್ಕಾರ ಯಾವುದೇ ಇರಲಿ. At least, we should appreciate their venture. ಅವರ ಸಾಹಸ, ಅವರ

ದೂರದೃಷ್ಟಿಯನ್ನು ನಾವು ಮೆಚ್ಚಿಕೊಳ್ಳಬೇಕು. ಅವರು ಹೇಳಿದರು ಬಾಂಡ್‌ಗಳ ಮೂಲಕ ಹಣ ಎತ್ತಿಕೊಳ್ಳಬೇಕು. ದುಡ್ಡನ್ನು ಹೊಂಚಿಕೊಳ್ಳಬೇಕು. ದುಡ್ಡು ಇದ್ದರೆ ಮಾಡುವುದಕ್ಕೆ ಆಗುತ್ತದೆಂದು ಹೇಳಿ ಆ ಕಾರಣಕ್ಕೆ ಆ ಕೆಲಸ ಮಾಡುವುದಕ್ಕೆ ಹೋದರು. ಆ ಕಾರಣಕ್ಕಾಗಿ ನಾನು ಹೇಳುತ್ತೇನೆ. ಇವತ್ತು ಕೃಷ್ಣಭಾಗ್ಯ ಜಲ ನಿಗಮ ಆವತ್ತು ಸೃಷ್ಟಿಯಾಗದೇ ಇದ್ದಿದ್ದರೆ, ಬಾಂಡ್‌ಗಳ ಮೂಲಕ ಹಣ ಕ್ರೋಢೀಕರಿಸಿದೆ ಇದ್ದಿದ್ದರೆ ಅಷ್ಟು ಪ್ರಮಾಣದಲ್ಲಿ ಸಂಪನ್ಮೂಲ ಕ್ರೋಢೀಕರಿಸದೆ ಇದ್ದಿದ್ದರೆ ಖಂಡಿತ ಇವತ್ತು ನಿಮ್ಮ ಆಲಮಟ್ಟಿ ಡ್ಯಾಂ ನಲ್ಲಿ ನೀರು ಇರುತ್ತಿರಲಿಲ್ಲ. ಇದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಇಷ್ಟೊತ್ತಿಗೆ 734 ಟಿ.ಎಂ.ಸಿ. ನೀರು ಎಷ್ಟು ಆಗಿತ್ತು ಅಷ್ಟೇ ಸಿಕ್ಕು ಉಳಿದಿದ್ದು ಕೂಡ ಮಹಾರಾಷ್ಟ್ರ, ಆಂಧ್ರಪ್ರದೇಶ ಪಾಲಾಗುತ್ತಿತ್ತು ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆ ಆಡಳಿತಗಾರರು ತೋರಿದ ದೂರದೃಷ್ಟಿತನ, ಬದ್ಧತೆ ಹೊಸ ಸಾಹಸ ಇದೆಯಲ್ಲಾ ಅದು ನಿಮಗೆ ಒಂದು ರೀತಿಯಲ್ಲಿ ಅನುಭವ ಆಗಬೇಕು. ಮಾನ್ಯ ಬಸವರಾಜ ಬೊಮ್ಮಾಯಿಯವರು ಸೀಟಿನಲ್ಲಿ ಇಲ್ಲ ಹೊರಗಡೆ ಹೋಗಿದ್ದಾರೆ. 1988 ರಲ್ಲಿ ಅವರ ತಂದೆ ಮಾನ್ಯ ಎಸ್.ಆರ್. ಬೊಮ್ಮಾಯಿಯವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಮಾನ್ಯ ದೇವೇಗೌಡರು ನೀರಾವರಿ ಸಚಿವರಾಗಿದ್ದರು. ಮಾನ್ಯ ಬಸವರಾಜ ಬೊಮ್ಮಾಯಿಯವರು ಮಾತನಾಡುವಾಗ R&R ಬಗ್ಗೆ ಹೇಳಿದರು. ಆಗಲೆ ನೀರಾವರಿ ಇಲಾಖೆಯ ಬಗ್ಗೆ ಈ ಸರ್ಕಾರ ಭೂಸ್ವಾಧೀನವನ್ನು contractor ಗಳ ಮೂಲಕವೇ ಮಾಡಿಸಿಕೊಳ್ಳುವುದಕ್ಕೆ ಹೋಗುತ್ತಿದೆ ಎಂದು ಒಂದು ಚರ್ಚೆ ಬಂದಿತು. ನೋಡಿ ತೀರ್ಮಾನ ಆಗಬೇಕೆಂದರೆ ನಾನು ಹೇಳುತ್ತೇನೆ, ಎಲ್ಲೋ ಒಂದು ಕಡೆಯಲ್ಲಿ ನಾವು ಅಳುಕಿಕೊಂಡು, ಅಂಜಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನಮ್ಮ ರಾಜ್ಯದ ರೈತರ ಹಿತಾಸಕ್ತಿ ಉಳಿಸಬೇಕೆಂದರೆ ನೀರಾವರಿ ಯೋಜನೆಗಳು ಕಾಲಬದ್ಧವಾಗಿ, ತ್ವರಿತವಾಗಿ ನಡೆಯಬೇಕೆಂದರೆ ಕೆಲವು ನಿಷ್ಠೂರವಾದಂತಹ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ನೀವು ನಿಷ್ಠೂರತೆಯನ್ನು ಮೈಗೂಡಿಸಿಕೊಳ್ಳದೇ ಇದ್ದರೆ, ಹಾಗೂ ಹೀಗೂ ಹೇಗೋ manage ಮಾಡಿಕೊಂಡು ಹೋಗೋಣ ಎನ್ನುವುದು ಬೇರೆ ರಾಜಕಾರಣ. ಆದರೆ ಮೈ ಮೇಲೆ ಹಾಕಿಕೊಂಡು

ಮಾಡುತ್ತೇನೆ ಕಣಯ್ಯಾ, ಅದೇನೇ ಬರಲಿ ನಾನು ಎದುರಿಸುತ್ತೇನೆ ಎನ್ನುವ ತಾಕತ್ತು ಕೆಲವು ನೀರಾವರಿ ಸಚವರಿಗೆ ಬೇಕಾಗುತ್ತದೆ. ನಾನು ಇದಕ್ಕೆ ಮಾತ್ರ ಮಾನ್ಯ ದೇವೇಗೌಡರನ್ನು ಮೆಚ್ಚಿಕೊಳ್ಳುತ್ತೇನೆ. ದತ್ತರವರು ಮಾತನಾಡಬೇಕಾದರೆ ದೇವೇಗೌಡರ ಹೆಸರನ್ನು ಪ್ರಸ್ತಾಪ ಮಾಡದೇ ಮಾತನಾಡುವುದಿಲ್ಲ ಎಂದು ಹೇಳುತ್ತಾರೆ. ಆದರೆ ನಾನು ಅದಕ್ಕೆ ಹೇಳುವುದಿಲ್ಲ. ವಾಸ್ತವ ಆ ರೀತಿ ಇರುತ್ತದೆ. ನಾನು ಏಕೆ ಹೇಳುತ್ತೇನೆ ಎಂದರೆ, ಆ ಸಂದರ್ಭದಲ್ಲಿ ನಾನು ಒಂದು quote ಮಾಡುತ್ತೇನೆ. 1988 ರಲ್ಲಿ World Bank ನಮಗೆ Upper Krishna Project ಗೆ ಸಾಲ ಕೊಡುವುದನ್ನು ನಿಲ್ಲಿಸಿಬಿಟ್ಟಿತು. ಆಗ ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ದೇವೇಗೌಡರು ನೀರಾವರಿ ಸಚಿವರಾಗಿದ್ದರು. ಅದಕ್ಕೆ World Bank ನವರು ಏನು ಕಾರಣ ಕೊಟ್ಟಿದ್ದರು ಗೊತ್ತೇ? ನೀವು ಅಲ್ಲಿ R&R ಅನ್ನು ಪ್ರಾಮಾಣಿಕವಾಗಿ ಮಾಡಿಲ. ಆ ಜನರಿಗೆ ಏನೂ ಪುನರ್ವಸತಿ ಕಲ್ಪಿಸಿಲ್ಲ. ಮುಳುಗಡೆಯಾಗುವ ಹಳ್ಳಿಗಳಿಗೆ ಪುನರ್ವಸತಿ ಮಾಡಿಲ್ಲ. ನೀವು ಪುನರ್ವಸತಿಯೊಳಗೆ ವಿಳಂಬ ಮತ್ತು ನಿಧಾನಗತಿ ತೋರುತ್ತಿರುವುದರಿಂದ ನಾವು World Bank assistance ಅನ್ನು ನಿಲ್ಲಿಸುತ್ತೇವೆ ಎಂದು ಕಳುಹಿಸಿದರು. ಮಾನ್ಯ ದೇವೇಗೌಡರ ಬಗ್ಗೆ ರೆಕಾರ್ಡ್‌ಗೆ ಹೋಗಬೇಕೆಂದು ನಾನು ಹೇಳುತ್ತಿಲ್ಲ. ನಿಮಗೆ ಒಂದು ಛಾತಿ, ಹಠ ಬರಲಿ ಎನ್ನುವ ಕಾರಣಕ್ಕಾಗಿ ಹೇಳುತ್ತಿದ್ದೇನೆ. ಆ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ತಕ್ಷಣವೇ ಜಾಮ್‌ದಾರ್ ಎನ್ನುವ ಒಬ್ಬರು ಐ.ಎ.ಎಸ್. ಅಧಿಕಾರಿಯನ್ನು ವಿಶೇಷವಾದ ಸವಲತ್ತುಗಳನ್ನು ಕೊಟ್ಟು, ವಿಶೇಷ ಅಧಿಕಾರ ಕೊಟ್ಟು, ಬರೀ R&R ಕೆಲಸವೇ ಮಾಡಬೇಕು, ಬೇರೆ ಐ.ಎ.ಎಸ್. ಕೆಲಸ ಅಲ್ಲ. ಅವರಿಗೆ ಇದೇ ಕೆಲಸವನ್ನು ಮಾಡಬೇಕೆಂದು special ಜವಾಬ್ದಾರಿ ಹಾಕಿ ಅಲ್ಲಿ ಕೂರಿಸಿ R&R ಅನ್ನು speed up ಮಾಡಿದರು. ಆ ರೀತಿ ಮಾಡಿ ತಕ್ಷಣವೇ World Bank ಗೆ ಆ ಮಾಹಿತಿ ಹೋದ ಮೇಲೆ Worl Bank sent a telex. ನನ್ನ ಹತ್ತಿರ ದಾಖಲೆ ಇದೆ. ಹೇಗೆ ಕೆಲಸ ಮಾಡಿ ಹೇಗಾಯಿತು ಎಂದು ಬೇಕಾದರೆ ನಿಮಗೆ ಕಳುಹಿಸುತ್ತೇನೆ. World Bank ನೀವು ತೆಗೆದುಕೊಂಡ ಕ್ರಮ ನಮಗೆ ಮೆಚ್ಚುಗೆ ಆಯಿತು. ಈಗ work ಅನ್ನು speed up ಮಾಡಿದ್ದೀರಿ. ಅದಕ್ಕೆ ಒಬ್ಬರು IAS

ಅಧಿಕಾರಿಯನ್ನು Special Commissioner ಆಗಿ ನೇಮಕ ಮಾಡಿದ್ದೀರಿ. ಹಾಗಾಗಿ ಇಷ್ಟು ಹಳ್ಳಿಗಳು ಇದ್ದಿದ್ದು, ಇಷ್ಟು ಹಳ್ಳಿಗಳಿಗೆ R&R ಆಗಿದೆ. ಹಾಗಾಗಿ World Bank assistance ಅನ್ನು continue ಮಾಡುತ್ತೇವೆ ಎಂದು telex message ಬಂದಿತು. ನಾನು ಏಕೆ ಹೇಳುತ್ತೇನೆ ಎಂದರೆ, ಇಂತಹ ಅನೇಕ ಉದಾಹರಣೆಗಳು ನಮ್ಮ ಕಣ್ಣಿನ ಮುಂದೆಯೇ ಇದೆ. ಹಿಂದೆ ಅಂತಹ ಕಾಲಘಟ್ಟಗಳಲ್ಲಿ ಆ ರೀತಿ ಮಾಡಿದ್ದಾರೆ. ಆದ್ದರಿಂದ ನಾನು ನಿಮ್ಮಲ್ಲಿ ಕೈ ಮುಗಿದು ಕೇಳಿಕೊಳ್ಳುತ್ತೇನೆ, ಇಂತಹ ಹಿರಿಯರ ದಾರಿಯೊಳಗೆ ಇವತ್ತು ನೀವು ಬಂದಿದ್ದೀರಿ. ನಿಮ್ಮ ಪುಣ್ಯ. ಅಂತಹ ಮಹಾನ್ ಹಿರಿಯರೆಲ್ಲರೂ ಕೂಡ ಕೆಲಸ ಮಾಡಿದ್ದಾರಲ್ಲಾ ಇವತ್ತು ಅಂತಹ ಇಲಾಖೆಯನ್ನು ನೀವು ನಿರ್ವಹಣೆ ಮಾಡುತ್ತಿದ್ದೀರಿ. ಆದ್ದರಿಂದ ನೀವು ಏನೋ ನಾನು ಮೂರು ವರ್ಷ ನೀರಾವರಿ ಸಚಿವನಾಗಿ ಹೇಗೋ ಕಾಲ ಹಾಕಿಕೊಂಡು ಹೋಗುತ್ತೇನೆ ಎನ್ನುವುದರ ಬದಲಿಗೆ ಅವರುಗಳೆಲ್ಲಾ ದಯಾ ದಾಕ್ಷಿಣ್ಯ ಇಲ್ಲದೇ ಯಾವ ಹಾದಿಯಲ್ಲಿ ಹೋದರು. ಆ ತರಹದ ಹೋಗಬೇಕು. ಮಾನ್ಯ ದೇವೇಗೌಡರ ಮೇಲೂ ಸಾವಿರಾರು ಆಪಾದನೆಗಳು ಬಂದಿತು. ತುಂಡು ಗುತ್ತಿಗೆಯಂತೆ, ಮಣ್ಣಂತೆ, ಮಸಿಯಂತೆ ಎಂದು ಸಾವಿರಾರು ಆಪಾದನೆಗಳು ಬಂದಿತು. ತುಂಡು ಗುತ್ತಿಗೆಯಂತೆ, ಮಣ್ಣಂತೆ, ಮಸಿಯಂತೆ ಎಂದು ಸಾವಿರಾರು ಆಪಾದನೆಗಳು ಬಂದಿತು. ಆದರೆ ಆ ಸಂದರ್ಭದಲ್ಲಿ ಒಂದು ಗುರಿ, ಆಲೋಚನೆ ನಮ್ಮ ಮುಂದೆ ಇತ್ತು. 2001 ನೇ ಇಸವಿಯೊಳಗೆ 734 ಟಿ.ಎಂ.ಸಿ. ನೀರನ್ನು, ಆವತ್ತು ನಾವು ಏನಾದರೂ ಇವುಗಳಿಗೆಲ್ಲಾ ಅಂಜಿಕೊಂಡು ಕುಳಿತುಕೊಂಡು ಒಂದು ದಿಟ್ಟ ತೀರ್ಮಾನ ತೆಗೆದುಕೊಳ್ಳದೇ ಹೋಗಿದ್ದರೆ ಆಗುತ್ತಿರಲಿಲ್ಲ. Land acquisition, ಎತ್ತಿನ ಹೊಳೆ ಬಗ್ಗೆ ಹೇಳಿದರೆ ಮಾನ್ಯ ಶಿವಲಿಂಗೇಗೌಡರು ನಾಳೆ ನಮ್ಮ ಗತಿ ಏನಪ್ಪಾ ಎಂದು ಕಂಗಾಲಾಗುತ್ತಾರೆ. ನಾನು ಅರಸೀಕೆರೆ ಜನರಿಗೆ ಮುಖ ತೋರಿಸಲು ಹೇಗೆ ಹೋಗಲಿ ಎಂದು ಹೇಳುತ್ತಾರೆ. ಎತ್ತಿನಹೊಳೆ ಬಗ್ಗೆ ಮಾನ್ಯ ಜಯಚಂದ್ರರವರು ಮೊನ್ನೆ ಮಾಡಿದ statement ಅನ್ನು ನೋಡಿದ್ದೇನೆ. Mr. Siddaramaiah Government is in a fix ಎಂದು ಬಂದಿದೆ. ಆ ಕಡೆ ಒಂದು

Land Acquisition Act ಆಗಿದೆ. ಇವತ್ತು ಅದು Central Government ನ Joint Parliamentary Committee ಮುಂದೆ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸರ್ಕಾರ negotiation ಮಾಡಬೇಕು. ಕಾಯುವುದು ಬೇಕಾಗಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಆ ವಿಷಯಕ್ಕೆ ನಾನು ಬರುತ್ತಿದ್ದೇನೆ. ಇವತ್ತು ಎತ್ತಿನ ಹೊಳೆ ಪ್ರಾಜೆಕ್ಟ್‌ಗೆ ಭೂಸ್ವಾಧೀನ ಎನ್ನುವುದು ಕೂಡ ನಿಮ್ಮ ಸರ್ಕಾರಕ್ಕೆ ಅಷ್ಟರ ಮಟ್ಟಿಗೆ ಕಗ್ಗಂಟಾ? ಅಷ್ಟರಮಟ್ಟಿಗೆ ಒಂದು ಸಮಸ್ಯೆನಾ? ಆ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಿಕೊಳ್ಳುವುದಕ್ಕೆ ಪರಿಹಾರ ಕಂಡುಕೊಳ್ಳುವುದು ಬೇರೆ. ಅಷ್ಟರಮಟ್ಟಿಗೆ ಭೂಸ್ವಾಧೀನ ಸಮಸ್ಯೆ ಆಗಿದೆಯೋ ಇಲ್ಲವೋ? ಹಾಗೆ ನೋಡಿದರೆ ಕುತ್ತಿಗೆಗೆ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ದತ್ತಾರವರೆ, ತಾವು explain ಮಾಡುತ್ತಿಲ್ಲ. ನಾನು ನಿಮ್ಮ ಮಾತಿನಲ್ಲಿ ಮಧ್ಯಪ್ರವೇಶ ಮಾಡುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ರೇವಣ್ಣನವರೆ ಅದೇನು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ದತ್ತರವರು ಇನ್ನೂ ಕೆಲವು ವಿಷಯಗಳನ್ನು ಬಿಡಿಸಿ ಹೇಳುತ್ತಿಲ್ಲ. ಏಕೆಂದರೆ 1966 ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಡಿಗಲ್ಲು ಹಾಕಿದರು. 1966-83 ರವರೆಗೆ ಎಷ್ಟು ಹಣ ಖರ್ಚಾಯಿತು? 1983-89 ರ ವರೆಗೆ ಎಷ್ಟು ಹಣ ಖರ್ಚಾಯಿತು? ಮತ್ತೆ 1995-2000 ರ ವರೆಗೆ ಎಷ್ಟು ಹಣ ಖರ್ಚಾಯಿತು ಎನ್ನುವುದನ್ನು ಬಿಡಿಸಿ ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟರೆ ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- ಹೇಳಬೇಕಾಗುತ್ತದೆ. ನೀವು ನಮ್ಮ ಪಾರ್ಟಿಯ Deputy Leader. ಮಾನ್ಯ ಬಸವರಾಜ ಬೊಮ್ಮಾಯಿಯವರು

ಸುಮಾರು 4 ಗಂಟೆಗಳ ಕಾಲ ಮಾತನಾಡಿದ್ದಾರೆ. ನಿಮಗೆ ಇನನ್ನೂ ಒಂದೆರಡು ಗಂಟೆ extra ಕೊಡುತ್ತೇವೆ ಮಾತನಾಡಿ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರು ಹೆಚ್ಚು ಸಮಯ ಕೊಡಬೇಕು. ನೀವು ಕೊಟ್ಟರೆ ಹೇಗೆ ಆಗುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರು ಹೆಚ್ಚು ಸಮಯ ಕೊಡುತ್ತಾರೆ ಮಾತನಾಡಿ. ಏನೂ worry ಮಾಡುವುದು ಬೇಡ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಪಾಟೀಲ್‌ರವರೆ ಮಾನ್ಯ ರೇವಣ್ಣನವರ ಸಮಾಧಾನಕ್ಕೋಸ್ಕರ statistics ಹೇಳಬೇಕೆಂದರೆ ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:- ನಾನು ಹೇಳಬೇಕೆಂದರೆ ಹೇಳುತ್ತೇನೆ ವೆಂಕಟೇಶಣ್ಣನವರೆ. ಆದರೆ ನಮ್ಮ Deputy Leader ರವರು ಮಾತನಾಡಲಿ ಎಂದು ಹೇಳಿದೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಪಾಟೀಲ್‌ರವರೆ, ತಮ್ಮ ಮಾಹಿತಿಗೋಸ್ಕರ ಹೇಳುತ್ತಿದ್ದೇನೆ. ನಾನು ಮಾತನಾಡುವಾಗ ಮೊದಲೇ ಹೇಳಿದೆ. ನಾನು ನಿರ್ವಿಕಾರವಾಗಿ ಹೇಳುತ್ತಿದ್ದೇನೆ. ನನ್ನ ಅಂಕಿ-ಅಂಶಗಳೆಲ್ಲವೂ ಕೂಡ ಯಾವುದೇ ರಾಜಕೀಯ ಪ್ರೇರಿತವಾದವುಗಳಲ್ಲ. ಎಲ್ಲವೂ ಕೂಡ ಅಧಿಕೃತವಾದ ಅಂಕಿ-ಅಂಶಗಳು. ನಾನು ನೀರಾವರಿ ಸಚಿವನಾಗಿ ಏನೂ ಕೆಲಸ ಮಾಡಿಲ್ಲ. ನಾನು ಸಚಿವನೂ ಆಗಿಲ್ಲ. ನಾನು ಈ ಸದನಕ್ಕೆ ಬಂದು ಎರಡು ವರ್ಷಗಳಾಗಿದೆ ಅಷ್ಟೇ ಬಹಳ ಹೊಸಬ, ಅನನುಭವಿ. ಈ ಸದನಕ್ಕೆ ಎರಡು ವರ್ಷದ ಶಾಸಕ.

ಶ್ರೀ ಜಿ.ಹೆಚ್. ಶ್ರೀನಿವಾಸ್:- ಮಾನ್ಯ ದತ್ತರವರೆ Upper House ನಲ್ಲಿ ಐದು ವರ್ಷ ಇದ್ದಿರಲ್ಲಾ?

ಶ್ರೀ ವೈ.ಎಸ್.ವಿ. ದತ್ತಾ:- ನಾನು ಈ ಸದನಕ್ಕೆ ಹೇಳುತ್ತಿದ್ದೇನೆ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. 53 ಕೋಟಿ, 63 ಕೋಟಿ ರೂ. ಗಳಿದ್ದ UKP 12,000 ಕೋಟಿ ರೂ. ಗಳು ಏಕೆ ಆಯಿತು ಎಂದರೆ ನಾವು

ಹಣವನ್ನು ಒದಗಿಸುವುದರೊಳಗೆ ಹೇಗೆ ಎಡವಿಕೊಂಡು ಬಂದೆವು ಎನ್ನುವುದಕ್ಕೆ ಮಾಹಿತಿಯನ್ನು ಉದಾಹರಣೆಗೆ ಹೇಳುತ್ತೇನೆ. ಏಕೆಂದರೆ ಯಾವ್ಯಾವ ಮುಖ್ಯಮಂತ್ರಿಗಳ ಕಾಲದಲ್ಲಿ UKP ಗಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದು ದಾಖಲೆಗಳು ಬರಲಿ ಮಾನ್ಯ ನಿಜಲಿಂಗಪ್ಪನವರು 1956–62 ರವರೆಗೆ ಆರು ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿದ್ದರು. ಅವರ ಅವಧಿಯಲ್ಲಿ UKP ಯ ಅಂದಾಜು ವೆಚ್ಚ 75 ಕೋಟಿ ರೂ. ಗಳು ಆಗಿತ್ತು. ಖರ್ಚು ಮಾಡಿದ್ದು 3 ಕೋಟಿ ರೂ. ಗಳು.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):– ಆಗ size of the budget ಎಷ್ಟಿತ್ತು ಎನ್ನುವುದನ್ನೂ ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:– Budget size ನ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದರೆ against to that ಹೇಳಿಕೊಂಡು ಬರುತ್ತಿದ್ದೇನೆ. ಎಲ್ಲಾ ಮುಖ್ಯಮಂತ್ರಿಗಳಿಗೂ ಹಾಗೆಯೇ ಕೊಡುತ್ತಿದ್ದೇನೆ. ಹಾಗಾಗಿ ಅದು ಎಲ್ಲರಿಗೂ equal ಆಗಿ ಅನ್ವಯವಾಗುತ್ತದೆ. ಹಾಗೆ ಲೆಕ್ಕ ಹಾಕಿಕೊಂಡರೆ ಆವತ್ತಿನ price ಬೇರೆ ಇರುತ್ತದೆ. ಇವತ್ತಿನ constant price ಬೇರೆ, present price ಬೇರೆ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಆಗ ವಿಧಾನಸೌಧ ಕಟ್ಟಲಿಕ್ಕೆ 3 ಕೋಟಿ ರೂ. ಗಳು ಖರ್ಚಾಯಿತು. ಈಗ ಸುವರ್ಣಸೌಧ ಕಟ್ಟಲು 500 ಕೋಟಿ ರೂ. ಗಳು ಖರ್ಚಾಗಿದೆ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಜಾರ್ಜ್‌ರವರೆ, ನಾನು 3 ಕೋಟಿ, 75 ಕೋಟಿ ಪ್ರಶ್ನೆ ಹೇಳುತ್ತಿಲ್ಲ. Percentage ಅನ್ನೇ ಲೆಕ್ಕ ಹಾಕಿಕೊಳ್ಳಿ. 75 ಕೋಟಿ ರೂ. ಗಳಿಗೆ 3 ಕೋಟಿ ಖರ್ಚು ಮಾಡಿದರೂ ಅದನ್ನು percentage ಲೆಕ್ಕ ಹಾಕಿಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಗೃಹಸಚಿವರಲ್ಲಿ ಮನವಿ ಮಾಡುವ್ರಿಗೂ ಇಷ್ಟೆ ತಮಗೆ ನೀರಾವರಿ ಬಗ್ಗೆ ಅಷ್ಟು ತಿಳುವಳಿಕೆ ಇಲ್ಲ. ಉದಾಹರಣೆಗೆ ಹೇಳುವುದಾದರೆ 1964 ರಲ್ಲಿ ಲಾಲ್ ಬಹದ್ದೂರ್

ಶಾಸ್ತ್ರಿಯವರು foundation ಹಾಕಿದ ವರ್ಷದಿಂದ 50 ವರ್ಷದಿಂದ ಎಷ್ಟು ಹಣ ಖರ್ಚಾಗಿದೆ ಎಂದು ದಯಮಾಡಿ ತಿಳಿಸಬೇಕು.

ಶ್ರೀ ಕೆ.ಜೆ. ಜಾರ್ಜ್:- ನನಗೆ ತಿಳುವಳಿಕೆ ಇಲ್ಲ ಎಂದು ಹೇಳಿದಿರಿ. ಆದರೆ ನನಗೆ commonsense ಇದೆ. ಆವತ್ತು ನಿಜಲಿಂಗಪ್ಪನವರ ಕಾಲದಲ್ಲಿ, ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ budget size ಎಷ್ಟಿತ್ತು ಎಂದು ನೋಡಬೇಕು. ಆಗ ಬರೀ 75 ಕೋಟಿ ಇತ್ತು, ಬರೀ 3 ಕೋಟಿ ಖರ್ಚು ಮಾಡಿದರು ಎಂದು ಹೇಳಿದರೆ ಹೇಗೆ? Budget size ಅನ್ನೂ ನೋಡಬೇಕಲ್ಲವೇ?

ಅಧ್ಯಕ್ಷರು:- ಈಗೇನು ಮಾಡಬೇಕು ಎಂದು ಹೇಳಿ ಮಹರಾಯರೇ. ರೇವಣ್ಣನವರೇ ಒಂದು ಹಳೆಯ ಗಾದೆ ಇದೆ, ಅದನ್ನು ನಾನು ಈಗ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಈಗ ಏನು ಮಾಡಬೇಕು ಎಂದು ಹೇಳಿ ಸಾಕು.

ಶ್ರೀ ಕೆ.ಷಡಕ್ಷರಿ:- ಅಧ್ಯಕ್ಷರೆ, ಆ ಗಾದೆಯನ್ನು ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:- ರೇವಣ್ಣನವರು ಹೇಳುವುದನ್ನು ಕೂಡ ನಾನು 50% ಒಪ್ಪುವುದಿಲ್ಲ. ನನಗೆ ಗೊತ್ತು, ನಾನು ಎದ್ದ ತಕ್ಷಣ ನೀವು, ಹಳೆಯ ಕತೆ ಬೇಡಪ್ಪಾ, ಈಗೇನಾಗಬೇಕು ಎಂದು ಹೇಳಿ ಎನ್ನುತ್ತೀರಿ. ಈಗೇನಾಗಬೇಕು ಎಂದರೆ 1, 2, 3 ಎಂದು ಮೂರು ಪಾಯಿಂಟ್‌ಗಳನ್ನು ಹೇಳಿದರೆ ಮುಗಿದೇ ಹೋಗುತ್ತದೆ. ಕಾಲಮಿತಿಯಲ್ಲಿ ಸರಿಯಾಗಿ ಹಣವನ್ನು ಖರ್ಚು ಮಾಡಬೇಕು, ಹೆಚ್ಚು ಹಣವನ್ನು ಹೊಂಚಬೇಕು, ತಕ್ಷಣವೇ ಮುಗಿಸಬೇಕು, ಇದು ನಮ್ಮ ಅಭಿಪ್ರಾಯ ಎಂದರೆ ಅಲ್ಲಿಗೆ ಮುಗಿದೇ ಹೋಗುತ್ತದೆ. ಹಾಗಲ್ಲ, ಹಳೆಯ ಅನುಭವವನ್ನೂ ನಾವು ಹೇಳಿಕೊಳ್ಳಬೇಕಾಗುತ್ತದೆ. ಎಲ್ಲಿ ತಪ್ಪಾಗಿದೆ? ಏಕೆ ಈ ರೀತಿಯ ತಾಪತ್ರಯಕ್ಕೆ ಸಿಕ್ಕಿಹಾಕಿಕೊಂಡಿರಿ ಎನ್ನುವುದನ್ನು ನೋಡಬೇಕಾಗುತ್ತದೆ. ಉದಾಹರಣೆಗೆ, ಬಸವರಾಜ ಬೊಮ್ಮಾಯಿಯವರು ಎಂ.ಬಿ. ಪಾಟೀಲರಿಗೆ ಒಂದು ಪ್ರಶ್ನೆ ಕೇಳಿದರು. All party meeting ನಲ್ಲಿ ನಾವೂ ಇದ್ದೆವು, Upper Krishna

Project ನಲ್ಲಿ ಇರುವ ಜಲವಿವಾದಗಳು ನಮ್ಮ ಕುತ್ತಿಗೆಯನ್ನು ಹಿಸುಕಿ ಹಾಕಿವೆ. ನಮ್ಮ ರೈತರನ್ನು ಬಹಳ ಹಾಳು ಮಾಡಿವೆ. ಮಾತೆತ್ತಿದರೆ ಕಾವೇರಿ ನ್ಯಾಯ ಮಂಡಳಿ, ಕೃಷ್ಣ ಟ್ರಿಬ್ಯುನಲ್ ಎಂದು ಹೇಳುತ್ತಾರೆ. ನೀವೇ ಲೆಕ್ಕ ಹಾಕಿ, ಈ ಎರಡೂ ನ್ಯಾಯ ಮಂಡಳಿಯ ತೀರ್ಪುಗಳು ಮತ್ತು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನಿಂದ ಬಂದಿರುವ ತೀರ್ಪುಗಳಲ್ಲಿ ಎಷ್ಟು ತೀರ್ಪುಗಳು ನಮ್ಮ ಕರ್ನಾಟಕದ ಪರವಾಗಿ ಬಂದಿವೆ ಎಂದು ನೋಡಿ. ನೂರು ತೀರ್ಪುಗಳು ಬಂದಿದ್ದರೆ ಅದರಲ್ಲಿ ಕನಾಟಕದ ಪರವಾಗಿ ಬಂದಿರುವುದು 3 ತೀರ್ಪುಗಳು ಮಾತ್ರ. ಉಳಿದ 97 ತೀರ್ಪುಗಳು ನಮಗೆ ವಿರುದ್ಧವಾಗಿ ಬಂದಿವೆ.

ಶ್ರೀ ಎಂ.ಬಿ. ಪಾಟೀಲ್:– ತಾವು ಬಹಳ sensitive ವಿಷಯದ ಬಗ್ಗೆ ಮಾತನಾಡುತ್ತಿದ್ದೀರಿ. ಟ್ರಿಬ್ಯುನಲ್‌ಗೆ 2–3–4 ರಾಜ್ಯಗಳು ಹೋಗಿರುತ್ತವೆ. ಎಲ್ಲ ರಾಜ್ಯಗಳೂ 100% ನಮಗೇ ಬೇಕು ಎಂದು ಕೇಳುತ್ತವೆ. ಯಾವುದೇ ಒಂದು ರಾಜ್ಯಕ್ಕೆ ಅಥವಾ ಎಲ್ಲ ನಾಲ್ಕು ರಾಜ್ಯಗಳಿಗೆ 100% ಸಿಕ್ಕರೆ ಈ ಟ್ರಿಬ್ಯುನಲ್ ಎನ್ನುವ ಪ್ರಶ್ನೆ ಬರುವುದಿಲ್ಲ. ದತ್ತಾರವರೇ, ಇಲ್ಲಿ ನಾವು ನೋಡಬೇಕಾದುದೆಂದರೆ, amounts to situation ನಮ್ಮ ಹಾಗೆ ಬೇರೆ ರಾಜ್ಯಗಳೂ ಇರುತ್ತವಲ್ಲ, ಎಲ್ಲರಿಗೂ 1000% ಕೊಟ್ಟರೆ ಮುಗಿಯುತ್ತದಲ್ಲ, ಇನ್ನೇನು ಉಳಿಯುತ್ತದೆ? ಹಾಗಾಗಿ ಈ ರೀತಿಯಾಗಿ ಲಘುವಾಗಿ ಮಾತನಾಡುವುದು ಸರಿಯಲ್ಲ. ಎಲ್ಲ ತೀರ್ಪುಗಳೂ ನಮ್ಮ ಪರವಾಗಿ ಬಂದಿವೆ ಎಂದು ಹೇಳುತ್ತಿಲ್ಲ. ಯಾವ ನಿರ್ಣಯಗಳೂ ನಮ್ಮ ಪರವಾಗಿ ಬಂದಿಲ್ಲ, ಎಲ್ಲವೂ ನಮ್ಮ ವಿರೋಧವಾಗಿವೆ ಎನ್ನುವುದೂ ಸತ್ಯವಲ್ಲ. Amounts to situation ಏನಾಗುತ್ತದೆ ಎಂದರೆ ಯಾವಯಾವ ರಾಜ್ಯಕ್ಕೆ ಏನೇನು ಸಿಗುತ್ತದೆ ಎನ್ನುವುದು ಮಹತ್ವವಾಗುತ್ತದೆ. 100% ಎಲ್ಲ ರಾಜ್ಯಗಳಿಗೂ ಯಾರೂ ಕೊಡುವುದಕ್ಕೆ ಆಗುವುದಿಲ್ಲ. ಎಲ್ಲ ರಾಜ್ಯಗಳಿಗೂ 100% ಕೊಡಬೇಕೆಂದರೆ ಅದು ಬೇರೆಯೇ ಆಗುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ವೈ.ಎಸ್.ವಿ. ದತ್ತಾ:- ಎಲ್ಲ ತೀರ್ಪುಗಳು ಕರ್ನಾಟಕದ ಪರ ಇರಬೇಕು ಎಂದು ನಾನು ಹೇಳುತ್ತಿಲ್ಲ.

ಅಧ್ಯಕ್ಷರು:- ದತ್ತಾರವರೇ, ಒಂದು inter state ಕಾನೂನು ಇದೆ.

ಶ್ರೀ ವೈ.ಎಸ್.ವಿ. ದತ್ತಾ:- ಕಾನೂನಿದೆ. ಆದರೆ ನಾನು ಹೇಳುವುದಕ್ಕೆ ಹೊರಟಿರುವುದು ಇನ್ನೂ ಮುಖ್ಯವಾದುದು. ಕಾನೂನುಗಳಿವೆ, ಆ ಕಾನೂನುಗಳು ಬರೀ ಕರ್ನಾಟಕಕ್ಕೆ ಮಾತ್ರ ಅನ್ವಯವಾಗುತ್ತದೆಯೇ? ಆಂಧ್ರಕ್ಕೆ, ತಮಿಳುನಾಡಿಗೆ ಅನ್ವಯವಾಗುವುದಿಲ್ಲವೇ? ಅದಕ್ಕೇ ನಾನು ಹೇಳುತ್ತಿರುವುದು.

ಶ್ರೀ ಎಂ.ಬಿ. ಪಾಟೀಲ್:- ನಾನು ಹೇಳಿದ್ದು ಇಷ್ಟೇ, ಎಲ್ಲ ರಾಜ್ಯಗಳಿಗೂ ಕೂಡ 100% ಸಿಕ್ಕಿರುವುದಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಅದಕ್ಕೇ ನಾನು ಹೇಳುತ್ತಿರುವುದು. ನ್ಯಾಯ ಮಂಡಳಿಗಳ ವಿಷಯದಲ್ಲಿ ಕೇಂದ್ರ ಸರ್ಕಾರಗಳು ಕರ್ನಾಟಕದ ಮಟ್ಟಿಗೆ ಯಾವಾಗಲೂ ಕೂಡ ನ್ಯಾಯವನ್ನು ಒದಗಿಸಿಲ್ಲ. ಇದು ನನ್ನ ಪಾಯಿಂಟ್.

ಶ್ರೀ ಬಸವರಾಜ್ ರಾಯರೆಡ್ಡಿ:- ಟ್ರಿಬ್ಯುನಲ್‌ಗಳಿಗೂ ಕೇಂದ್ರ ಸರ್ಕಾರಕ್ಕೂ ಏನು ಸಂಬಂಧ?

ಶ್ರೀ ವೈ.ಎಸ್.ವಿ. ದತ್ತಾ:- ರಾಯರೆಡ್ಡಿಯವರೇ, ನಾನು ಯೀಲ್ಡ್ ಆಗಿಲ್ಲ, ಕುಳಿತುಕೊಳ್ಳಿ, ನೀವು ಆಮೇಲೆ ಹೇಳುವಿರಂತೆ. ನಾನು ಉದಾಹರಣೆ ಸಮೇತ ಹೇಳುತ್ತೇನೆ. ಏಕೆ ಹಾಗೆ ಆಗಿದೆ ಎನ್ನುವುದಕ್ಕೆ ಉದಾಹರಣೆ ಹೇಳುತ್ತೇನೆ. ನ್ಯಾಯ ಮಂಡಳಿಗಳ ಮುಂದೆ ಕೇಂದ್ರ ಸರ್ಕಾರಗಳು ಹಾಕುವ Affidavit ಗಳಿವೆಯಲ್ಲ, ಅದರ ವಿಚಾರ.

ಶ್ರೀ ಬಸವರಾಜ್ ರಾಯರೆಡ್ಡಿ:- ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗಲೂ ಆಯಿತಲ್ಲ, ಅದಕ್ಕೆ ದೇವೇಗೌಡರು ಏನು ಮಾಡಬೇಕು?

ಶ್ರೀ ವೈ.ಎಸ್.ವಿ. ದತ್ತಾ:- Yes, ನಾನು ಅದನ್ನೇ ಹೇಳುತ್ತೇನೆ, ಅವರು ಮಾಡಿದ್ದು ಏನು ಎನ್ನುವುದನ್ನೂ ಹೇಳುತ್ತೇನೆ. ಉದಾಹರಣೆಗೆ ಎಂದು ಜನರಲ್‌ಆಗಿ ಹೇಳುತ್ತಿರುವುದಲ್ಲ, ಸ್ಪೆಸಿಫಿಕ್ ಆಗಿಯೂ ಹೇಳುತ್ತೇನೆ. U.K.P. ವಿಷಯದಲ್ಲೂ ಹೇಳುತ್ತೇನೆ, ಕಾವೇರಿ ವಿಷಯದಲ್ಲೂ ಹೇಳುತ್ತೇನೆ. ನಾನು ಉದಾಹರಣೆಗೆ ಹೇಳುತ್ತೇನೆ, ಕಾವೇರಿಯಲ್ಲಿ 1992 ರಲ್ಲಿ ಕಾವೇರಿ ಟ್ರಿಬ್ಯುನಲ್‌ನವರು ಒಂದು ಮಧ್ಯಂತರ ವರದಿಯನ್ನು ಕೊಟ್ಟರು. ಪ್ರತಿ ವಾರ ಅಥವಾ ಪ್ರತಿ ತಿಂಗಳು ತಮಿಳುನಾಡಿಗೆ ಇಷ್ಟಿಷ್ಟು ಟಿ.ಎಂ.ಸಿ. ನೀರು ಹರಿಸಿ ಎಂದು ಮಧ್ಯಂತರ ವರದಿಯನ್ನು ಕೊಟ್ಟಿತಲ್ಲ, ಅದನ್ನು ಕೇಂದ್ರ ಸರ್ಕಾರದವರು notiofication ಮಾಡಲಿಲ್ಲ. ಬೊಮ್ಮಾಯಿಯವರು ಕೇಳಿದದರು, All Party Meeting ನಲ್ಲಿ ತೆಲಂಗಾಣ ಮತ್ತು ಆಂಧ್ರ ಬೇರೆ ರಾಜ್ಯಗಳಾದ ಮೇಲೆ ತೆಲಂಗಾಣ ಒಂದು ತಕರಾರು ಎತ್ತಿದೆ. ಬ್ರಿಜೇಶ್‌ಕುಮಾರ್‌ರವರ ಎರಡನೇ ನ್ಯಾಯ ಮಂಡಳಿಯನ್ನು ಪುನರ್ ರೂಪಿಸಬೇಕು, ಏಕೆಂದರೆ, ಈಗ ನಮ್ಮ ರಾಜ್ಯ ಮತ್ತು ಆಂಧ್ರ ಬೇರೆಬೇರೆಯಾಗಿದೆ, ಹಾಗಾಗಿ, ಅವರು ಹಂಚಿಕೆ ಮಾಡಿರುವ ನೀರು ಎನಿದೆ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಇನ್ನೊಂದು ಹೊಸ ನ್ಯಾಯ ಮಂಡಳಿಯನ್ನು ರಚಿಸಬೇಕು ಎನ್ನುವ ರೀತಿಯಲ್ಲಿ ತಕರಾರು ತೆಗೆದಿರುವ ಬಗ್ಗೆ ನಮ್ಮ All Party Meeting ನಲ್ಲಿ ಚರ್ಚೆಗೆ ಬಂತು. ಆಗ ಮಹಾರಾಷ್ಟ್ರದವರು, ನಮಗೂ ಅದಕ್ಕೂ ಸಂಬಂಧವಿಲ್ಲ, ನ್ಯಾಯ ಮಂಡಳಿ ಈಗಾಗಲೇ ಕೊಟ್ಟಿರುವ ತೀರ್ಪನ್ನು notification ಮಾಡಿ ಎಂದು ಕೇಂದ್ರ ಸರ್ಕಾರದ ಬಳಿ ಹೋಗಿದ್ದಾರೆ. ಆದರೆ ನಮ್ಮ ಸರ್ಕಾರ ಆ ರೀತಿ ಏಕೆ ಹೋಗಿಲ್ಲ? Am I right, Bommai?

ಶ್ರೀ ಎಂ.ಬಿ. ಪಾಟೀಲ್:- ದತ್ತಾರವರೇ, mislead ಮಾಡಬೇಡಿ. Notification ಮಾಡಿ ಎಂದು ಕೇಳುವುದು ಬೇರೆ. ಆಂಧ್ರ ಮತ್ತು ತೆಲಂಗಾಣ reorganization ಆಗಿರುವುದು ಬೇರೆ. Reorganization Act ನಲ್ಲಿ ಕೂಡ ಅದು ಇದೆ. It is a matter between two successive states ಎಂದು ಅದರಲ್ಲಿ ಇದೆ. ಅದು ಬಹಳ clear ಆಗಿದೆ. ಮಹಾರಾಷ್ಟ್ರದವರು, ನಮಗೂ

ಅದಕ್ಕೂ ಸಂಬಂಧವಿಲ್ಲ, notification ಮಾಡಿ ಎಂದು ಅವರು ಕೇಂದ್ರ ಸರ್ಕಾರಕ್ಕೆ ಈ context ನಲ್ಲಿ ಹೇಳಿಲ್ಲ. ಹಾಗಾಗಿ ಅದು ಈಗ ಬೇಡ.

ಶ್ರೀ ವೈ.ಎಸ್.ವಿ. ದತ್ತಾ:- ಈ context ನಲ್ಲಿ ಬೇಡ ಎನ್ನುವುದಲ್ಲ. ನಾನು ಹೇಳುತ್ತಿರುವ ಪಾಯಿಂಟು ಬೇರೆ.

ಶ್ರೀ ಬಸವರಾಜ ಬೊಮ್ಮಾಯಿ:- ಒಂದು ನಿಮಿಷ. ವಿಷಯದ ಸಪೋರ್ಟ್‌ಗಾಗಿ ಹೇಳುತ್ತೇನೆ. ವೈಯಕ್ತಿಕವಾಗಿ ದತ್ತಾರವರಿಗೇನೂ ಅಲ್ಲ.

ಅಧ್ಯಕ್ಷರು:- ಅವರಿಗೆ ಪಾಠ ಹೇಳಿ ಕಳುಹಿಸಿದ್ದಾರಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- ಅವರು ಏಕೆ ಅದನ್ನು ಒತ್ತಿ ಹೇಳುತ್ತಿದ್ದಾರೆ ಎಂದರೆ ಮಂತ್ರಿಗಳು ಸ್ವಲ್ಪ ತಾಳ್ಮೆಯಿಂದ ಕೇಳಬೇಕು, ಆಂಧ್ರ ಮತ್ತು ತೆಲಂಗಾಣದವರು ಅವರ dispute ಅನ್ನು ನಮಗೆ ತರುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ, ಈಗಾಗಲೇ ಆಗಿರುವ ತೀರ್ಪಿನ ಬಗ್ಗೆ notification ಆದರೆ ಅದಕ್ಕೆ ಅಂತಿಮ ವಿರಾಮ ಹಾಡಲು ಸಾಧ್ಯ. ಇಲ್ಲದಿದ್ದರೆ, you are keeping that issue alive. ಆ ಹಿನ್ನೆಲೆಯಲ್ಲಿ ಅವರು ಒತ್ತಾಯ ಮಾಡುತ್ತಿದ್ದಾರೆ.

ಶ್ರೀ ಎಂ.ಬಿ. ಪಾಟೀಲ್:- ನೀವು ಹೇಳಿದ್ದು ಸರಿ. ಆದರೆ ಅವರು ಏನು ಹೇಳುತ್ತಿದ್ದಾರೆ ಎಂದರೆ, reorganization Act ನ context ನಲ್ಲಿ ಹೇಳುತ್ತಿದ್ದಾರೆ.

ಶ್ರೀ ಬಸವರಾಜ್ ರಾಯರೆಡ್ಡಿ:- ಅದಕ್ಕೂ, ಇದಕ್ಕೂ ಸಂಬಂಧವಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- Act interpretation ಸಹ ಮುಂದೆ ಅಷ್ಟೇ important ಆಗುತ್ತದೆ.

ಶ್ರೀ ವೈ.ಎಸ್.ವಿ. ದತ್ತಾ:- ನಾನು ಹೇಳುತ್ತಿರುವುದೇನೆಂದರೆ, ಆಂಧ್ರ ತೆಲಂಗಾಣಗಳ reorganization ಪ್ರಶ್ನೆಯನ್ನು ನಾನು ಹೇಳುತ್ತಿಲ್ಲ. I am not concerned about that.

ಶ್ರೀ ಬಸವರಾಜ್ ರಾಯರೆಡ್ಡಿ:– ದತ್ತಾರವರೇ, ಒಂದು ನಿಮಿಷ, ನಾನು ನಿಮ್ಮ ಪರವಾಗಿಯೇ ಮಾತನಾಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ನಾನು ಯೀಲ್ಡ್ ಆಗುವುದಿಲ್ಲ, ನೀವು ಕುಳಿತುಕೊಳ್ಳಿ. ನಾನು ಹೇಳಬೇಕಾಗಿರುವ ಪಾಯಿಂಟ್ ಬೇರೆ. ನೀವು ಬೇಕಾದರೆ ಆಮೇಲೆ ಮಾತನಾಡಿ. ನಾನು ಹೇಳಿದ್ದು ತಪ್ಪಿದ್ದರೆ ಆಮೇಲೆ ನೀವು ಹೇಳಿ. ನನ್ನ ಪಾಯಿಂಟ್ ಏನೆಂದು ಹೇಳುತ್ತೇನೆ.

ಅಧ್ಯಕ್ಷರು:– ರಾಯರೆಡ್ಡಿಯವರೇ, ಏಕೆಂದರೆ ಅವರು ಯಥಾವತ್ತಾಗಿ ಪಾಠ ಒಪ್ಪಿಸಲೇಬೇಕು.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಸಭಾಧ್ಯಕ್ಷರೆ, ನಾನು ಯಾರಿಗೂ ಪಾಠ ಒಪ್ಪಿಸಬೇಕಾಗಿಲ್ಲ. ನಾನು ಈ ಸದನಕ್ಕೆ, ಈ ರಾಜ್ಯದ ಜನತೆಗೆ ಪಾಠ ಒಪ್ಪಿಸುತ್ತೇನೆಯೇ ಹೊರತು ನಾನು ಬೇರೆ ಯಾರಿಗೂ ಪಾಠ ಒಪ್ಪಿಸಬೇಕಾಗಿಲ್ಲ. ನಾನು ಎನು ಹೇಳುತ್ತಿದ್ದೇನೆ ಎಂದರೆ, ಮುಖ್ಯವಾಗಿ ನೀವು ಗಮನಿಸಬೇಕಾದುದು ಏನೆಂದರೆ, ಆವತ್ತು ನಾನು All Party Meeting ಗೆ ಬಂದಂಥ ಸಂದರ್ಭದಲ್ಲಿ ಮಹಾರಾಷ್ಟ್ರದವರ ರೀತಿ ನಾವೂ ಕೂಡ notification ಗೆ ಒತ್ತಾಯಿಸೋಣ ಎಂದು ಹೇಳಿದೆ. That was our party stand. ಆದರೆ ನಮ್ಮ ರಾಜ್ಯದವರು ಆ ರೀತಿ ಒತ್ತಾಯಿಸಲಿಲ್ಲ. ಹಾಗಾಗಿ, ಇವತ್ತಿಗೂ ಅದು ಜೀವಂತವಾಗಿ ಉಳಿದುಕೊಂಡಿತು. ಇವತ್ತಿಗೂ ಕೂಡ ಬ್ರಿಜೇಶ್ ಕುಮಾರ್‌ರವರ ಆಯೋಗ ನಮಗೆ ಬಿ ಸ್ಕೀಂನಲ್ಲಿ ಹಂಚಿಕೆ ಮಾಡಿರುವ ನೀರಿನಲ್ಲಿ ನಮಗೆ ನೂರಕ್ಕೆ ನೂರರಷ್ಟು ಲಭ್ಯವಾಗುತ್ತದೆ ಎನ್ನುವ ಬಗ್ಗೆ ಖಾತರಿಯಿಲ್ಲ.

(ಈ ಹಂತದಲ್ಲಿ ಸದಸ್ಯರಾದ ಬಸವರಾಜ ರಾಯರೆಡ್ಡಿಯವರು ಮಾತನಾಡಲು ಪ್ರಯತ್ನಪಟ್ಟರು)

ರಾಯರೆಡ್ಡಿಯವರೇ ನೀವು ಆಮೇಲೆ ಮಾತನಾಡಿ ಮಂತ್ರಿಗಳು ಉತ್ತರ ಕೊಡಲಿ. ನಾನು ನನ್ನ ಆತಂಕವನ್ನು ಹೇಳಿಕೊಳ್ಳುತ್ತೇನೆ. ಆ ರೀತಿ ಇಲ್ಲದಿದ್ದರೆ, ಇಲ್ಲ ಎಂದು ಅವರು ಹೇಳಲಿ. 160 ಟಿ.ಎಂ.ಸಿ. ಸಿಕ್ಕಿದರೆ

ಪರವಾಗಿಲ್ಲ. 734+169 ಒಟ್ಟು 903 ಟಿ.ಎಂ.ಸಿ. ಬಂದರೆ ನಮಗೇನೂ ತೊಂದರೆಯಿಲ್ಲ, I am the happiest man. ಹಾಗಾಗಿ ಕೃಷ್ಣ ಬೇಸಿನ್ ಜನವೇ ಆಗಲಿ, ಎಲ್ಲರೂ ರಾಜ್ಯದ ಜನರು, ಹೌದು ನಾನು ಕೃಷ್ಣ ಬೇಸಿನ್‌ನವನೇ. ಆದರೆ ನಾನು ಹೇಳುವುದು ಏನೆಂದರೆ ಪ್ರಶ್ನೆ ಅದಲ್ಲ, ಏಕೆಂದರೆ ನಾವು ಹೇಗೆ ಸುಮ್ಮನೇ ಇರಲಾರದೆ ಮೈಮೇಲೆ ಇರುವೆ ಬಿಟ್ಟುಕೊಂಡು ಬಂದಿದ್ದೇವೆ ಎನ್ನುವುದಕ್ಕೆ ಮತ್ತು ಕೇಂದ್ರ ಸರ್ಕಾರಗಳು ಹೇಗೆ ನಮಗೆ ಅಡ್ಡಗಾಲು ಹಾಕಿಕೊಂಡು ತೊಂದರೆ ಮಾಡಿ ಕೆಲವು ರಾಜ್ಯಗಳಿಗೆ ಅನುಕೂಲ ಮಾಡಿಕೊಟ್ಟಿವೆ ಎನ್ನುವುದಕ್ಕೆ. ಇವತ್ತು ಈ notification ಮಾಡಿಸುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಬ್ರಿಜೇಶ್ ಕುಮಾರ್ ನ್ಯಾಯ ಮಂಡಳಿ ಕೊಟ್ಟಿರುವುದನ್ನು ನಮ್ಮ 163 ಟಿಎಂಸಿ ನೀರನ್ನು ಅದನ್ನು ಇವತ್ತಿಗೂ ನಾವು notification ಮಾಡಿಸುವುದಕ್ಕೆ ಆಗುತ್ತಿಲ್ಲ. ಇನ್ನೂ ಸಹ ನಾವು ಮಹಾರಾಷ್ಟ್ರ ರಾಜ್ಯದ ಜೊತೆ ಹೋಗುತ್ತಿಲ್ಲ. ಅಲ್ಲಿ ನೋಡಿದರೆ ಒಂದು ಕಡೆ ತೆಲಂಗಾಣ ಗಲಾಟೆ ಮಾಡಿಕೊಂಡು ಕುಳಿತಿದೆ. ಅದಿರಲಿ, ಆದರೆ ಜ್ಞಾಪಿಸಿಕೊಳ್ಳಿ, 1992 ರಲ್ಲಿನ ವಿಚಾರ ಅದಕ್ಕೇ ಹೇಳುವುದು ಸರ್ಕಾರಕ್ಕೆ ಸ್ವಲ್ಪ ಛಾತಿ ಬೇಕಾಗುತ್ತದೆ, ಜಬರದಸ್ತು ಬೇಕಾಗುತ್ತದೆ. 1992 ರಲ್ಲಿ ಒಂದು ನ್ಯಾಯಮಂಡಳಿ ಇಡೀ ಜಗತ್ತಿನ ಇತಿಹಾಸದಲ್ಲಿ ಯಾವುದೇ interstate water dispute ಒಳಗೆ, inter country water dispute ಒಳಗೆ ಜಗತ್ತಿನ ಇತಿಹಾಸದಲ್ಲಿ ಯಾವ ನ್ಯಾಯಮಂಡಳಿಗಳೂ ಕೂಡ ಮಧ್ಯಂತರ ಆದೇಶ ಕೊಟ್ಟಿದ್ದಿಲ್ಲ. If I am wrong, let me correct myself. ನನಗೆ ತಿಳಿದ ಮಟ್ಟಿಗೆ ಇಡೀ ಜಗತ್ತಿನ ಇತಿಹಾಸದಲ್ಲಿ ಕಾವೇರಿ ನ್ಯಾಯಮಂಡಳಿ ಯಾರೂ ಕೊಡದಿರುವಂಥ ಮಧ್ಯಂತರ ಆದೇಶವನ್ನು ಕೊಟ್ಟಿತು. ಯಾವಾಗಲೂ ಕೊಟ್ಟಿಲ್ಲ. ಅಂಥ ಒಂದು ಆದೇಶವನ್ನು ಕೊಟ್ಟಿತು. ಆ ಆದೇಶವನ್ನು Gazette notification ಮಾಡಿ, Gazette notification ಮಾಡಿ, Gazette notification ಮಾಡಿ ಎಂದು ತಮಿಳುನಾಡು ವರಾತ ಹಚ್ಚಿಕಂಡಿತು. ಆದರೆ ನಾವು ನಮ್ಮ ಸರ್ಕಾರಗಳು ಮತ್ತೊಂದು ಎಸಲಾಗಲಿ, 'ಇಂದು ಸಲಪು ಮಾಡುತ್ತಿರುವ ತಪ್ಪನ್ನು ಅಂದು ನಾವು ಮಾಡಿದ್ದೇವೆ. ಅಂದು ಜಯಲಲಿತ ಏನು ಮಾಡಿದರು ಗೊತ್ತೇ? ಹೇಗಿರುತ್ತವೆ ನೋಡಿ ಕೇಂದ್ರ ಸರ್ಕಾರ? ಹೇಗಿರುತ್ತದೆ

ಎಂದರೆ ಒಂದು ರಾಜ್ಯ ಸರ್ಕಾರ ಮನಸ್ಸು ಮಾಡಿದರೆ ಎಂದರೆ, ಜಯಲಲಿತ ಹೋಗಿ ಆ ಮರೀನಾ ಬೀಚ್‌ನಲ್ಲಿ ಉಪವಾಸ ಕುಳಿತುಕೊಂಡರು. ನನ್ನ ಕೈಗೆ Gazette notification copy ಬರುವವರೆಗೆ ನಾನು ಆಮರಣಾಂತ ಉಪವಾಸ ಎಂದು ಕುಳಿತುಕೊಂಡರು. First of all ಒಂದು ನ್ಯಾಯಮಂಡಳಿ ಜಗತ್ತಿನ ಇತಿಹಾಸದಲ್ಲಿ ಒಂದು ಮಧ್ಯಂತರ ಆದೇಶ ಕೊಟ್ಟಿದ್ದೇ ತಪ್ಪು.

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೆ, ದತ್ತಾರವರು ಹೇಳಿದ ಹಾಗೆ Interim Order ಅನ್ನು ಬಹಳಷ್ಟು ವಿಷಯಗಳಲ್ಲಿ ಜಗತ್ತಿನಲ್ಲಿ ಇದುವರೆಗೆ ಯಾವುದೂ ಹುಟ್ಟಿಲ್ಲ. ಆದರೆ ಒಂದು ಗಮನಿಸಬೇಕಾದುದೇನೆಂದರೆ, ಕಾವೇರಿಯಲ್ಲಿ ನಾವು ನೀರನ್ನು already utilize ಮಾಡಿಕೊಂಡಿದ್ದೇವೆ. Utilize ಮಾಡಿಕೊಳ್ಳುತ್ತಿದ್ದೇವೆ. ಆ ರೀತಿ utilize ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ, it is a special example. ನೀವು general ಆಗಿ ಇವತ್ತಿನದಿವಸ ಇದನ್ನೇ ಉಳಿದಂಥ case ಗಳಲ್ಲಿ ಮಧ್ಯಂತರ ಆದೇಶ ಕೊಡಿ ಎಂದರೆ ಆ ಎಲ್ಲ case ಗಳಲ್ಲಿ ಬಹಳ ಕಷ್ಟವಿದೆ. ಆದರೆ ಈ ಕಾವೇರಿ case ನಲ್ಲಿ, we were already utilizing water, ನಾವು ಈಗಾಗಲೇ utilize ಮಾಡುತ್ತಿದ್ದೇವೆ. ಅದಕ್ಕೆ ಇವತ್ತು ನೀವೇನು ಹೇಳಿದಿರಲ್ಲ Interim Order ಬಗ್ಗೆ. ಹಾಗಾಗಿ ಅಂದಿನ ಸಂದರ್ಭದಲ್ಲಿ Interim Order ಕೊಡುವಂಥ ಪರಿಸ್ಥಿತಿ ಬಂದಿತು. I have corrected.

ಶ್ರೀ ವೈ.ಎಸ್.ವಿ. ದತ್ತಾ:- ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. As a Irrigation Minister, ನಿಮ್ಮ ಮಾತು ದಾಖಲೆಗೆ ಹೋಗುವುದು ಬೇಡ. ಹೇಳುತ್ತೇನೆ ಕೇಳಿ ಅದು ಬೇಡ.

ಅಧ್ಯಕ್ಷರು:- ಆಯಿತು, ಬಿಡಿ ಸಾಕು, ನೀವು ಜಯಲಲಿತರವರ ಕಥೆ ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:– ಜಯಲಲಿತರವರ ಕಥೆ ಹೇಳುತ್ತಿದ್ದೆ. ನಾನು ಏಕೆ ಹೆಳುತ್ತಿದ್ದೇನೆ ಕೇಂದ್ರ ಸರ್ಕಾರದ ಬಗ್ಗೆ ಅಂದರೆ ಅಂದು ಜಯಲಲಿತರವರು ಉಪವಾಸ ಕುಳಿತುಕೊಂಡರು. ಅವರು ಉಪವಾಸಕ್ಕೆ ಕುಳಿತಾಗ ಕೇಂದ್ರ ಸರ್ಕಾರ ಎಷ್ಟು ಹೆದರಿಕೊಂಡಿತು ಗೊತ್ತೇ? ಅದು ನ್ಯಾಯಮಂಡಳಿಯ ಮಧ್ಯಂತರ ಆದೇಶ ಮತ್ತೊಂದು ಅಲ್ಲ. V.C. Shukla was the Irrigation Minister. ಕೇಂದ್ರದಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದರು. ಆಕೆ ಉಪವಾಸ ಕುಳಿತು ಒಂದು ಧಮಕಿ ಹಾಕಿದ ತಕ್ಷಣವೇ ಪಾಟೀಲರೇ, Central Government came to her doorsteps.

ಅಧ್ಯಕ್ಷರು:– Central Government ಗೆ ಭೇದಿ ಹೊಡೆದುಕೊಂಡರು.

ಶ್ರೀ ವೈ.ಎಸ್.ವಿ. ದತ್ತಾ:– ನೋಡಿ, ಹೇಗೆ ಹೆದರಿಸಬಲ್ಲರು. Central Government ಹೋಯಿತು.

ಅಧ್ಯಕ್ಷರು:– ಜೀವ ಅವರ ಕೈಯಲ್ಲಿ ಇತ್ತು.

ಶ್ರೀ ವೈ.ಎಸ್.ವಿ. ದತ್ತಾ:– ಅದಕ್ಕೇ ಹೇಳಿದ್ದು, ನೀರಾವರಿ ವಿಷಯದಲ್ಲಿ ರಾಜಕಾರಣ ಬಿಟ್ಟು ಮಾತನಾಡುವುದಕ್ಕೆ ಆಗುವುದಿಲ್ಲ. Gazette Notification ಮಾಡಿಸಿ copy ತೆಗೆದುಕೊಂಡ ವಿಶೇಷ ವಿಮಾನದಲ್ಲಿ ನೀರಾವರಿ ಸಚಿವರು ಬಂದು ಜಯಲಲಿತರವರು ಪವಾಸ ಕುಳಿತಿದ್ದ ಜಾಗದಲ್ಲಿ ಅವರಿಗೆ ಕೊಟ್ಟು ಆಮೇಲೆ ಶರಬತ್ ಕುಡಿಸಿ ಅವರ ಉಪವಾಸ ಅಂತ್ಯಗೊಳಿಸಿದರು.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು):– ಒಂದು ನಿಮಿಷ, ನೀವು ಮಾತನಾಡುವಾಗ ಹೇಳಿದಿರಿ, ನಾವು ಕೂಡ Members ಆಗಿದ್ದವರು. ನೀವು ಹೇಳಿದ ಹಾಗೆ ಇಡೀ ಜಗತ್ತಿನಲ್ಲಿ ಎಲ್ಲಿಯೂ ಕೂಡ ನೀರಿನ ಸಮಸ್ಯೆಯನ್ನು Tribunal ಆಗಲಿ, ನ್ಯಾಯಾಲಯಗಳಲ್ಲಾಗಲೀ ಬಗೆಹರಿಸಿರುವಂಥ ಉದಾಹರಣೆಗಳಿಲ್ಲ. By way of negotiation ಎನ್ನುತ್ತೇವೆ. ಇದುವರೆಗೆ ನೀರಿನ ಸಮಸ್ಯೆ ಬಂದು distress period ನಲ್ಲಿ ಯಾವಾಗ ಮಳೆ ಕಡಿಮೆಯಾಗುತ್ತದೆ ಆಗ ಮಾತ್ರ ನೀರಿನ ಸಮಸ್ಯೆ ಬರುತ್ತದೆಂದು ತಮಗೆ ಗೊತ್ತಿದೆ. ಎರಡು ಅಥವಾ ಮೂರು ರಾಜ್ಯದ

ಮುಖ್ಯಮಂತ್ರಿಗಳು ಕುಳಿತು ಬಗೆಹರಿಸಬೇಕು. ಒಂದು ನಿಮಿಷ, ನೀವು ಮಾತನಾಡುವಾಗ ಬಹಳ ಚೆನ್ನಾಗಿ ಹೇಳಿದಿರಿ, ಯಾವಾಗ Tribunal constitute ಆಯಿತು ಎಂದು ಹೇಳಿದಿರಿ. ಕಾಂಗ್ರೆಸ್ ಸರ್ಕಾರ ಇರುವಾಗಲೂ ಕೂಡ ನಾವು Tribunal constitute ಮಾಡುವುದಕ್ಕೆ ಅವಕಾಶವೇ ಕೊಟ್ಟಿರಲಿಲ್ಲ. ಕೊಡಲೂ ಇಲ್ಲ. ಶ್ರೀಮತಿ ಇಂದಿರಾಗಾಂಧಿಯವರು Prime Minister ಆದಾಗಲೂ ನೋಡಿದ್ದೇನೆ. ಶ್ರೀ ರಾಜೀವ್‌ಗಾಂಧಿಯವರು Prime Minister ಆದಾಗಲೂ ನೋಡಿದ್ದೇನೆ. ತಮಿಳುನಾಡಿನಿಂದ delegation ಬರುತ್ತಿತ್ತು. ತಮಿಳುನಾಡು ಸರ್ಕಾರದ ಒತ್ತಡಗಳು ಇದ್ದಾಗಲೂ ಕೂಡ Tribunal ಗೆ ಗೊತ್ತಿತ್ತು we have no case ಎಂದು. Tribunal ಆದರೆ ನಮ್ಮ case ಹೋಗುತ್ತವೆಂದು ಗೊತ್ತಿತ್ತು. Tribunal constitute ಆದಮೇಲೆ ಇವೆಲ್ಲ Interim Order ಬಂದಿವೆ. ನಾವು ಕೂಡ ಧರಣಿ ಕುಳಿತಿದ್ದೆವು. Interim Order ಅನ್ನು ಪ್ರತಿಭಟಿಸಿದ್ದೇವೆ. Tribunal constitute ಆದಾಗ ಮಾಡಿದ್ದೇವೆ. ಮಧ್ಯ ಶ್ರೀ ಪಿ.ವಿ. ನರಸಿಂಹರಾವ್ Prime Minister ಆದಾಗ intervene ಆಗಿ ನಮಗೆ ಯಾವುದೇ ರೀತಿಯಲ್ಲಿಯೂ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ದತ್ತರವರೆ ಇದು ಯಾವಾಗ ಆಯಿತೆಂಬುದನ್ನು ತಿಳಿದುಕೊಳ್ಳಬೇಕು. ನೀವು ಬಹಳ ಚೆನ್ನಾಗಿ ಹೇಳಿದಿರಿ. ಅದಕ್ಕೋಸ್ಕರ ಹೇಳಿದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು:- ಅವರು ಮಾತನಾಡುವುದಕ್ಕೆ ಬಿಡಿ.

ಶ್ರೀ ವಿ. ಶ್ರೀನಿವಾಸಪ್ರಸಾದ್:- ಸರ್, ಒಂದು ನಿಮಿಷ ನಾನು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ನಾನು ತಾವು ಮಾತನಾಡುವಾಗ ಹೇಳಿದಿರಲ್ಲ, ಜಗತ್ತಿನಲ್ಲಿ ಎಲ್ಲಿಯೂ ಕೂಡ ನೀರಿನ ಸಮಸ್ಯೆ tribunal ಗಳಲ್ಲಾಗಲಿ, ನ್ಯಾಯಾಲಯಗಳಲ್ಲಿ ಆಗಲಿ ಬಗೆಹರಿದಿಲ್ಲ, ಮೊದಲನೇ ಸಾರಿ ಈ Tribunal constitute ಯಾವಾಗ ಆಯಿತು ಎಂದರೆ ತಾವು ಹೇಳಿದ

ಹಾಗೆ ನಮ್ಮ ಶ್ರೀ ವಿ.ಪಿ. ಸಿಂಗ್‌ರವರು Prime Minister ಆದ ಸಂದರ್ಭದಲ್ಲಿ, ತಾವು ಹೇಳುವ ಹಾಗೆ Public Interest Litigation case ನಲ್ಲಿ ತಮಿಳುನಾಡಿನವರು ಹೋಗಿ Tribunal constitute ಆಗಬೇಕೆಂದಾಗ Additional Attorney General ರವರು ಅವರಿಗೆ permission ಕೊಟ್ಟುಬಿಟ್ಟರು. ಬಹುಶಃ ಅದು ನಮ್ಮ ಕಣ್ಣು ತಪ್ಪಿಸಿ ಆಗಿರುವಂಥದ್ದು Tribunal ಆದ ಮೇಲೆ ನಮಗೆ ಆಮೇಲೆ ಗೊತ್ತಾಯಿತು. ನಮ್ಮ ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ Tribunal constitute ಆದಮೇಲೆ intrim order ಬಂದಿತು. Interim order ಬಗ್ಗೆ ಕೂಡ ನಾವು ಗಲಾಟೆಗಳನ್ನು ಮಾಡಿದೆವು. ತಮಗೆ ಗೊತ್ತಿದೆ ತಮಿಳುನಾಡಿನವರು ಯಾವರೀತಿ ತಮ್ಮ ಪ್ರಭಾವ ಉಪಯೋಗಿಸಿ ಅದಾದ ಮೇಲೆ ತಾವು ಹೇಳಿದ ಹಾಗೆ ಶ್ರೀ ವಿದ್ಯಾಚರಣ್ ಶುಕ್ಲಾ ಇರಬಹುದು. Water resource Minister ಆಗಿ ಅವರ ಮನೆ ಬಾಗಿಲಿಗೆ ಹೋದರು. ಅವರು ಬಗೆಹರಿಸುವಂಥ ರೀತಿಯಲ್ಲಿ ಜಯಲಲಿತರವರಿಗೆ ಸಹಾಯ ಮಾಡಿದರು. ಇವೆಲ್ಲಾ subsequent ಆದಂಥ ಬೆಳವಣಿಗೆಗಳು. ನಾವು Tribunal ಮಾಡುವುದಕ್ಕೆ ಅವಕಾಶ ಕೊಡದೆ ಸಾಕಷ್ಟು ಪ್ರಯತ್ನ ಮಾಡಿದೆವು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ರೇವಣ್ಣ ಒಂದು ನಿಮಿಷ, ನೀವು ಹೇಳುವುದಕ್ಕಿಂತ ನಾನು ಹೇಳಿದರೆ authentic ಆಗಿರುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:- ಒಂದು ನಿಮಿಷ, ಸರ್ ನಾನು ಶ್ರೀನಿವಾಸ್ ಪರಸಾದ್‌ರವರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಇಂದಿರಾಗಾಂಧಿಯವರಾಗಲಿ, ರಾಜೀವ್ ಗಾಂಧಿಯವರಾಗಲಿ Tribunal ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ವಿ.ಪಿ.ಸಿಂಗ್‌ರವರು ಕೊಟ್ಟರು ಎಂದು ತಾವು ಹೇಳಿದಿರಿ. ಈ ರಾಜ್ಯದಲ್ಲಿ ಅಂದು 1991 ರಲ್ಲಿ ಕಾಂಗೆಸ್ ಸರ್ಕಾರ

ಇತ್ತು. ಅವರು Tribunal ಮಾಡಿದ್ದನ್ನು ಸ್ವಾಗತ ಮಾಡಿರುವುದರ ಬಗ್ಗೆ paper cuttings ಇದೆ ಕೊಡಿ ಎಂದರೆ ಅದನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:- ಅಲ್ಲಿ ಎಲ್ಲ paper cuttings ಇವೆ.

(ಗೊಂದಲ)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:- Tribunal constitute ಮಾಡಬೇಕೆಂದು ಸುಪ್ರೀಂಕೋರ್ಟ್ binding ಮಾಡಿತು. ಆಗ ದೇವೇಗೌಡರು Chief Minister ಆಗಿ ಆಗ ಏನು ಮಾಡಿದರು ಎಂದು ಚರ್ಚೆ ಮಾಡಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:- ಆಗ ಕಾವೇರಿ ನೀರಿನ ಬಗ್ಗೆ ಎಲ್ಲಾ ಜನಪ್ರತಿನಿಧಿಗಳು Opposition leaders ಕರೆಸಿ ಮಾತುಕತೆ ನಡೆಸಿದರು. ಆ interim order ಬಗ್ಗೆ ಇವರದ್ದೇ ಆದ ರೀತಿಯಲ್ಲಿ ಅಂದಿನ Chief Miniser ಆಗಿದ್ದವರು ಹೊರಗಡೆ ಏನು ಮಾತನಾಡುತ್ತಿದ್ದರು? Tribunal constitute ಆಗಿ ನೀವು opposition ನಲ್ಲಿದ್ದಾಗ ನೀವು ಹೋರಾಟ ಮಾಡಿದ್ದರಲ್ಲ ನಮ್ಮ ರಕ್ತ ಬೇಕಾದರೆ ಕೊಡುತ್ತೇವೆ, ನೀರನ್ನು ಕೊಡುವುದಿಲ್ಲ ಎಂದು ಹೇಳಿ. ಇದೇ ನಿಮ್ಮ ಸರ್ಕಾರ ಬಂದು ದೇವೇಗೌಡರು Chief Miniser ಆದಾಗ ಯಾವರತಿ surrender ಆದರು? ಯಾವರೀತಿ ಒಳಗೆ ಬಿಟ್ಟರು, interim order ಆದಮೇಲೆ ಅದು ನಮಗೆ ಗೊತ್ತಿದೆ. ಯಾವರೀತಿ ಮಾತುಕತೆ ನಡೆಯಿತು ಎಂದು ನಮಗೆ ಗೊತ್ತಿದೆ. ಅವೆಲ್ಲ ಮತ್ತೆ ಪ್ರಸ್ತಾಪ ಮಾಡಲಿಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- No, No,ಸತ್ಯ ತಿರುಚಬೇಡಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:- ಸಂಸತ್ ಸದಸ್ಯರಾಗಿದ್ದಾಗ ಏನು ಮಾಡಿದರು ಎಂದು ಗೊತ್ತು. ನೀವು ಏನೇನು ಮಾಡಿದ್ದೀರಿ ಎಂದು ಗೊತ್ತು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ಸತ್ಯ ತಿರುಚಬೇಡಿ.

ಶ್ರೀ ಹೆಚ್.ಡಿ. ರೇವಣ್ಣ:- ಸುಳ್ಳು ಮಾಹಿತಿ ಕೊಡಬೇಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಕಾನೂನು ರಚನೆ ಆದಮೇಲೆ ಕಾನೂನಿನ ಪರಿಮಿತಿಯಲ್ಲಿ ನಡೆದುಕೊಳ್ಳಬೇಕಾದುದು ಮುಖ್ಯಮಂತ್ರಿಗಳ ಕರ್ತ್ಯವ್ಯ. Tribunal ಏಕೆ ರಚನೆ ಮಾಡಿದರು?

(ಗೊಂದಲ)

ಶ್ರೀ ಕೆ. ಅಭಯಚಂದ್ರ:- ನಿಮಗೆ ಗೊತ್ತಿಲ್ಲ. ಏನೂ ಗೊತ್ತಿಲ್ಲದೆ ಸುಮ್ಮನೆ ಮಾತನಾಡಬೇಡಿ. ನೀವು ಅವತ್ತು ವಿರೋಧ ಮಾಡಬೇಕಾಗಿತ್ತು. Tribunal ಮಾಡಿದ್ದನ್ನು ಏಕೆ ಸ್ವಾಗತ ಮಾಡಿದಿರಿ? ನೀವು Interim Order ಅನ್ನು ವಿರೋಧ ಮಾಡಬೇಕಾಗಿತ್ತು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ನಿಮಗೆ ತಳಬುಡ ಗೊತ್ತಿಲ್ಲ. ದೇವೇಗೌಡರು ಏನು ಮಾಡಿದರು ಎಂಬ ಸತ್ಯ ಅಭಯಚಂದ್ರ ನಿಮಗೆ ಗೊತ್ತಿಲ್ಲ, ಸುಮ್ಮನೆ ಮಾತನಾಡಬೇಡಿ. ನಮಗೆ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು:- ಇನ್ನೂ ನಿಮಗೆ ಎಷ್ಟು ಹೊತ್ತು ಬೇಕು?

ಶ್ರೀ ವೈ.ಎಸ್.ವಿ. ದತ್ತಾ:- 'ಇನ್ನೂ ಅರ್ಧ ಗಂಟೆ ಬೇಕು.

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡೋಣ. ಬೇರೆ ವಿಷಯಗಳಿವೆ ಅದನ್ನು ಪೂರೈಸಿಕೊಂಡುಬಿಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಆಯಿತು. ನಾಳೆ ನನಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಕೆ. ಅಭಯಚಂದ್ರ:– ನಿಮಗೆ ಗೊತ್ತಿದೆ? Tribunal ಮಾಡಿದ್ದನ್ನು ನೀವು ಏಕ ಸ್ವಾಗತ ಮಾಡಿದಿರಿ? ತಪ್ಪು ಮಾಹಿತಿ ಕೊಡಬೇಡಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಏಕೆಂದರೆ ದೇವೇಗೌಡರು ನೀರು ಬಿಟ್ಟರು ಎಂದರಲ್ಲ, ಅವರು ಏಕೆ ನೀರು ಬಿಟ್ಟರು, ಬಿಡದಿದ್ದರೆ ಏನಾಗುತ್ತಿತ್ತು ಆ ಕಥೆಯನ್ನು ಹೇಳುತ್ತೇನೆ. Tribunal ಹೇಗಾಯಿತು ಎಂಬ ಕಥೆಯನ್ನು ಹೇಳುತ್ತೇನೆ.

ಶ್ರೀ ಹೆಚ್.ಎಸ್. ಪ್ರಕಾಶ್:– ಅಂದು ಏನಾಯಿತು ಎಂದು ನಾವು ಹೇಳುತ್ತೇವೆ. ನಿಮಗೇನು ಗೊತ್ತಿದೆ?

(ಗೊಂದಲ)

ಅಧ್ಯಕ್ಷರು:– ಸಾಕು.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರ ಕೊಡಬೇಕು.

(ಗೊಂದಲ)

ಅಧ್ಯಕ್ಷರು:– ವಿಶ್ವೇಶ್ವರಯ್ಯನವರ ಕಾಲದಲ್ಲಿಯೇ ಈ ತಕರಾರು ಆಗಿ ಕನ್ನಂಬಾಡಿಯನ್ನು ಕಟ್ಟಿದರು. ಆದ್ದರಿಂದ, ತಮಿಳುನಾಡು ಕರ್ನಾಟಕ ಮೊದಲಿನಿಂದ ಇರುವುದೇ. ಅವರು ಕೆಳಗೆ ಇದ್ದಾರೆ ನಾವು ಮೇಲೆ ಇದ್ದೇವೆ.

Inter Water Disputes Act ತಂದದ್ದು ಆ ಕಾರಣಕ್ಕಾಗಿಯೇ ಆಗಿದೆ. ನಾಳೆಗೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ರೆಕಾರ್ಡ್‌ಗೆ ಸರಿಯಾಗಿ ಹೋಗಬೇಕೆನ್ನುವುದು ಅಷ್ಟೆ. ಒಂದು ವಿವಾದ ಬಹಳ ವರ್ಷಗಳವರೆಗೆ ನಡೆದಾಗ ಬೇರೆ ಬೇರೆ ಘಟ್ಟದಲ್ಲಿ ಬೇರೆ ಬೇರೆ ಸರ್ಕಾರಗಳು ತೀರ್ಮಾನ ತೆಗೆದುಕೊಳ್ಳುವ ಅನಿವಾರ್ಯತೆ ಬರುತ್ತದೆ. ಆದ್ದರಿಂದ, ಯಾರ ಮೇಲೂ ದೋಷಾರೋಪಣೆ ಅಲ್ಲ. ಆದರೆ, ವಿ.ಪಿ. ಸಿಂಗ್ ಅವರು ಇದ್ದ ಸಂದರ್ಭದಲ್ಲಿ tribunal ಮಾಡಿದರು ಅದಕ್ಕಿಂತ ಮುಂಚೆ PIL Supreme Court ಮುಂದಿತ್ತು. ನೀವು ಕೊನೆಯದಾಗಿ ಪ್ರಯತ್ನ ಮಾಡಿ negotiation ಮಾಡಿ ಎಂದು ಸುಪ್ರೀಂಕೋರ್ಟ್ ಹೇಳಿತ್ತು. ಏಕೆಂದರೆ, ಹಲವಾರು Negotiation ಆಗಿ ಕೊನೇ ಹಂತಕ್ಕೆ Supreme Court, this is the final thing, negotiation ಮಾಡಿ ಎಂದು ಹೇಳಿತು. ತಮಿಳುನಾಡಿನ ಮಂತ್ರಿಗಳು ಇಲ್ಲಿಗೆ ಬಂದರೆ ನಮ್ಮವರು ಯಾರೂ ಕೂಡ ಕ್ಯಾರೇ ಎನ್ನಲಿಲ್ಲ. Negotiation ಮಾಡಲಿಲ್ಲ. ಅವರು ಕುಮಾರಕೃಪದಲ್ಲಿ ಬಂದು ಕಾದು ನಿಂತು ಹೋದರು. ಆ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ನೀವು negotiation ಮಾಡುವುದಕ್ಕೆ ಸಿದ್ಧರಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಆದೇಶ ಮಾಡಿತು. ಇದು ಇದರ ಹಿನ್ನೆಲೆ. ಅವತ್ತು ನಾವು negotiation ಮಾಡಿದ್ದರೆ, ಹಿಂದೆ ಸಮಸ್ಯೆ ಬಂದಾಗ 5 ಟಿ.ಎಂ.ಸಿ., 6 ಟಿ.ಎಂ.ಸಿ. ನೀರು ಬಿಟ್ಟು negotiation ಮಾಡುತ್ತಿದ್ದೆವು. Negotiation ಮಾಡಿ ಬುದ್ಧಿವಂತಿಕೆ ಮಾಡಿದ್ದರೆ tribunal ಬರುತ್ತಿರಲಿಲ್ಲ. ಆ ಬುದ್ಧಿವಂತಿಕೆ ಮಾಡಿದ್ದರೆ tribunal ಬರುತ್ತಿರಲಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರೆ ತಮ್ಮ ಹಿರಿತನದ ಬಗ್ಗೆ ನನಗೆ ಗೌರವ ಇದೆ. ನಿಮ್ಮ ಅನುಭವಕ್ಕೂ ನನಗೆ ಗೌರವ

ಇದೆ. ಆದರೆ, ಸತ್ಯ ಏನೆಂದರೆ, ನಾನು ಬಹಳ ವಿನಮ್ರವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಇಂದಿರಾಗಾಂಧಿ, ರಾಜೀವ್‌ಗಾಂಧಿ ಕಾಲದಲ್ಲಿ ಸರಿ.

ಅಧ್ಯಕ್ಷರು:– ಕಥೆ ಏಕೆ?

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ಎರಡು ನಿಮಿಷದಲ್ಲಿ ಉತ್ತರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಆಮೇಲೆ ತಾವು ಯಾವ್ಯಾವಾಗ ಅವಕಾಶ ಕೊಡುತ್ತೀರೋ ಆಗ ಮಾತನಾಡುತ್ತೇನೆ. ಇಂದಿರಾಗಾಂಧಿ, ರಾಜೀವ್‌ಗಾಂಧಿ ಕಾಲದಲ್ಲಿ ಏನು ಮಾಡುತ್ತಿದ್ದರು ಎಂದರೆ, ನೀವು ಹೇಳಿದ ಹಾಗೆ tribunal ಬೇಡ, negotiation ಮೂಲಕ ಆಗಬೇಕೆಂದು ಎರಡೂ ರಾಜ್ಯದವರು ಅವರು ಕಷ್ಟ ಕಾಲ ಎಂದಾಗ 5 ಟಿ.ಎಂ.ಸಿ. ನೀರು ಬಿಡಿ, 3 ಟಿ.ಎಂ.ಸಿ. ನೀರು ಕೊಡುತ್ತೇವೆ ಹೀಗೆ ಹೊಂದಾಣಿಕೆ ಮೇಲೆ ಹೋಗುತ್ತಿತ್ತು. ಹಾಗಾಗಿ tribunal ಆಗುತ್ತಿರಲಿಲ್ಲ. ಕೊನೆಗೆ ತಮಿಳುನಾಡು ಹಾಕಿದ Public Interest Litigation ಸುಪ್ರೀಂಕೋರ್ಟ್‌ಗೆ ಹೋದಾಗ ಸುಪ್ರೀಂಕೋರ್ಟ್ ನೋಡಿ, ನೀವು ಹೊಂದಾಣಿಕೆಯಲ್ಲಿ ತೀರ್ಮಾನ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ, ಇಲ್ಲವಾದಲ್ಲಿ tribunal form ಮಾಡಬೇಕಾಗುತ್ತದೆ ಎಂದು ಹೇಳಿತು. ಆಗ ಅಂತಿಮವಾಗಿ ಬೊಮ್ಮಾಯಿಯವರು ಹೇಳಿದ ಹಾಗೆ ಆಯಿತು. ಕೊನೇ ಸಲ ಕರ್ನಾಟಕ–ತಮಿಳುನಾಡು ಹೊಂದಾಣಿಕೆ ಮಾಡಿಕೊಳ್ಳಿ ಎಂದು ಹೇಳಿದರು. ತಮಿಳುನಾಡಿನ ನೀರಾವರಿ ಸಚಿವರು ಕುಮಾರಕೃಪ ಗೆಸ್ಟ್ ಹೌಸ್‌ಗೆ ಬಂದರು.

ಅಧ್ಯಕ್ಷರು:– ಅವರು ಯಾರು?

ಶ್ರೀ ವೈ.ಎಸ್.ವಿ. ದತ್ತಾ:– ಅವರ ಹೆಸರು ಹೇಳುವುದು ಬೇಡ. ಇಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ಅವರು ಬಂದರು ಆಗ ನೀರಾವರಿ ಮಂತ್ರಿಗಳು ಯಾರಿದ್ದರು ಅವರ ಹೆಸರು ಹೇಳುವುದು ಬೇಡ. ಏಕೆಂದರೆ, ಅವರು ಯಾರೂ ಇಲ್ಲಿ ಇಲ್ಲ. ತಮಿಳುನಾಡಿನ ಸಚಿವರು ಒಬ್ಬರೇ ಬಂದು ಕುಮಾರಕೃಪದಲ್ಲಿ ಕಾದು, ಕಾದು ಸುಸ್ತಾದರು. ಆಗ ಯಾವ ಅಧಿಕಾರಿಗಳೂ

ಕ್ಯಾರೇ ಎನ್ನಲಿಲ್ಲ. ಟೀ ಕುಡಿದಿರಾ, ಕಾಫಿ ಕುಡಿದಿರಾ ಎಂದು ಯಾರೂ ಕೇಳಲಿಲ್ಲ.

ಅಧ್ಯಕ್ಷರು:– ಮಾನ್ಯ ದತ್ತಾ, ನೀವು ಅಂತೂ ಇರಲಿಲ್ಲ. ಮಾನ್ಯ ರೇವಣ್ಣನವರು ಇರಲಿಲ್ಲ. ಇದ್ದವರು ಬೇರೆ. ಕಥೆಯನ್ನು ಹೇಳಿಕೊಟ್ಟಿದ್ದಾರೆ ಅದನ್ನು ಮಾಡಿದ್ದಾರೆ ಅಷ್ಟೆ.

ಶ್ರೀ ವೈ.ಎಸ್.ವಿ. ದತ್ತಾ:– ನಂತರ ಹಿಂದೂ ಪತ್ರಿಕೆಯಲ್ಲಿ ತಮಿಳುನಾಡಿನ ನೀರಾವರಿ ಸಚಿವರನ್ನು ಕರ್ನಾಟಕ ಕುಮಾರಕೃಪ ಗೆಸ್ಟ್ ಹೌಸ್‌ನಲ್ಲಿ ಕೇಳುವವರೇ ಇಲ್ಲ ಎಂದು ಬರೆದ, ಅವರು ಒಬ್ಬರೇ ಕುಳಿತುಕೊಂಡಿದ್ದ ಒಂದು ದೊಡ್ಡ ಫೋಟೋ ಬಂತು. ಆಗ ತಮಿಳುನಾಡಿನ ನೀರಾವರಿ ಸಚಿವರು ಅದನ್ನು ತೆಗೆದುಕೊಂಡು ಹೋಗಿ ಮಾತುಕತೆಗೆ ಹೋದರೂ ಕೂಡ ಕರ್ನಾಟಕ ಸರ್ಕಾರ ಮಾತುಕತೆಗೆ ತಯಾರಿಲ್ಲ, ನಮ್ಮನ್ನು ಕೇಳಲಿಲ್ಲ, ಕ್ಯಾರೇ ಎನ್ನಲಿಲ್ಲ ಎಂದು ಹೋಗಿ ರಿಪೋರ್ಟ್ ಕೊಟ್ಟರು. ಮಾನ್ಯ ಬೊಮ್ಮಾಯಿಯವರೆ ಇದು ಸರಿಯಲ್ಲವೇ? ಆಗ ಕೇಂದ್ರ ಸರ್ಕಾರ, Karnataka is not ready for talks ಎಂದಿತು. ಕಾಂಗ್ರೆಸ್ ಸರ್ಕಾರ ಸರಿಯಾಗಿ ತಾಳ್ಮೆ ತೋರಿದ್ದರೆ tribunal ಆಗುತ್ತಾ ಇರಲಿಲ್ಲ.

ಅಧ್ಯಕ್ಷರು:– ಅಲ್ಲಿ ಇದೆಲ್ಲಾ ಪಾಠ ಹೇಳಿಕೊಟ್ಟಿದ್ದು, ನಾಳೆ ಮಾತನಾಡೋಣ.

ಶ್ರೀ ವೈ.ಎಸ್.ವಿ. ದತ್ತಾ:– ನಾಳೆ ಮುಂದುವರೆಸುತ್ತೇನೆ.

ಅಧ್ಯಕ್ಷರು:– ಮಾನ್ಯ ರೇವಣ್ಣ ಮೊದಲು ಗಮನ ಸೆಳೆಯುವ ಸೂಚನೆ ಪೂರೈಸೋಣ.

ಶ್ರೀ ವೈ.ಎಸ್.ವಿ. ದತ್ತಾ:– 1999 affidavit ಹೇಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜೇಗೌಡರು ಸರಿಯಾಗಿ ಹೇಳಿದರು. ಅವತ್ತು ಎಂ.ಜಿ.ಆರ್., ಹಾಗೂ ಕರುಣಾನಿಧಿ ಇದ್ದಾಗ 160 ಟಿ.ಎಂ.ಸಿ. ಯಲ್ಲಿ ಮಾತುಕತೆ ಮಾಡಿ

ಮುಗಿಸಿಕೊಳ್ಳಬಹುದಾಗಿತ್ತು. 160 ರಿಂದ 165 ಟಿ.ಎಂ.ಸಿ. ಯಲ್ಲಿ ಮುಗಿಯುತ್ತಿತ್ತು. ಆದರೆ, ಸರಿಯಾಗಿ negotiation ಆಗದೇ ಇದ್ದಿದ್ದರಿಂದ ಆಗಿಲ್ಲ. ಅದರಲ್ಲಿ ಅವರು ಜವಾಬ್ದಾರಸ್ಥರು, ಇವರು ಜವಾಬ್ದಾರಸ್ಥರು ಎಂದು ಅಲ್ಲ. ಇಡೀ ರಾಜ್ಯದಲ್ಲಿ ಹಿಂದೆ ಇದ್ದಂಥ ಎಲ್ಲಾ ಸೀನಿಯರ್ ಲೀಡರ್ಸ್ ಜವಾಬ್ದಾರಸ್ಥರು.

ಅಧ್ಯಕ್ಷರು:- ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಮಾನ್ಯ ಕೆ.ಆರ್. ರಮೇಶ್ ಕುಮಾರ್ ಇಲ್ಲ. (ಮಾನ್ಯ ಸದಸ್ಯರು ಹಾಜರಿರಲಿಲ್ಲ.)

ಅಧ್ಯಕ್ಷರು:- ಮಾನ್ಯ ಪಿಳ್ಳಮುನಿಶಾಮಪ್ಪ, ಮಾತನಾಡಿ.

9. ಗಮನ ಸೆಳೆಯುವ ಸೂಚನೆ

1) ವಿಷಯ : ದೇವನಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬೈರಾಪುರ ಗ್ರಾಮದಲ್ಲಿ "ಅಗ್ರೋ ಸಿಂಥ್‌ಕೆಮಿಕಲ್ಸ್" ಕಾರ್ಖಾನೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರೆಡ್ ಇಂಡಸ್ಟ್ರೀ ಎಂದು ಘೋಷಿಸಿದ್ದರೂ ಕಾರ್ಖಾನೆಯನ್ನು ಮುಚ್ಚದಿರುವ ಬಗ್ಗೆ.

*****

ಶ್ರೀ ಪಿಳ್ಳಮುನಿಶಾಮಪ್ಪ (ದೇವನಹಳ್ಳಿ):- ದೇವನಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಬೈರಾಪುರ ಗ್ರಾಮದಲಿರುವ್ಲ "ಅಗ್ರೋ ಸಿಂಥ್‌ಕೆಮಿಕಲ್ಸ್" ಕಾರ್ಖಾನೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ರೆಡ್ ಇಂಡಸ್ಟ್ರೀ ಎಂದು ಘೋಷಿಸಿದ್ದರೂ ಕೂಡ ಆ ಕಾರ್ಖಾನೆಯನ್ನು ಮುಚ್ಚದಿರುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.